ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ 'ಸ್ಯಾಮ್ ಬಹದ್ದೂರ್'ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಫಾತಿಮಾ ಸನಾ ಶೇಖ್ ಪಾಲ್ಗೊಂಡಿದ್ದರು



ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ಕಿವಿ ಹಿಂಡುವುದಾಗಿ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಎಚ್ಚರಿಕೆ

ಬೆಳೆ ಸಾಲ ಮನ್ನಾ ಮಾಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ಸರ್ಕಾರದ ಚಳಿ ಜ್ವರ ಬಿಡಿಸುತ್ತೇವೆ. ಬರದಿಂದ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ಕೊಡಿಸಿ, ಕೃಷಿಕರ ಬೆಳೆ ಸಾಲ ಮನ್ನಾ ಮಾಡುವಂತೆ ಪಟ್ಟು ಹಿಡಿದು ಹೋರಾಟ ಮಾಡುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಹೇಳಿದರು.

ಕಲಬುರಗಿ ತಾಲ್ಲೂಕಿನ ಮೋಕ ತಾಂಡಾ, ಆಳಂದ ತಾಲ್ಲೂಕಿನ ಕಡಗಂಚಿ ಗ್ರಾಮದ ಬರಪೀಡಿತ ಜಮೀನುಗಳಿಗೆ ಮಂಗಳವಾರ ಭೇಟಿ ನೀಡಿದ ಅವರು ರೈತರ ಸಮಸ್ಯೆಗಳನ್ನು ಆಲಿಸಿದರು. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ನಿದ್ರೆಗೆ ಜಾರಿದೆ. ಸಚಿವರು ಒಂದೊಂದು ಗ್ಯಾಂಗ್ ಕಟ್ಟಿಕೊಂಡು ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಡುತ್ತಿದ್ದಾರೆ. ಬರದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ಇದುವರೆಗೂ ನಯಾಪೈಸೆ ಪರಿಹಾರ ಕೊಟ್ಟಿಲ್ಲ' ಎಂದರು.



ಕಲಬುರಗಿ ತಾಲ್ಲೂಕಿನ ಮೋಕ ತಾಂಡಾದಲ್ಲಿ ಮಂಗಳವಾರ ಬರಪೀಡಿತ ಜಮೀನಿಗೆ ಭೇಟಿ ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಅವರು ಕುಂಠಿತವಾದ ತೊಗರಿ ಬೆಳೆ ಪರಿಶೀಲಿಸಿದರು. ಬಿಜೆಪಿ ಮುಖಂಡರಾದ ಅಮರನಾಥ ಪಾಟೀಲ, ಶಾಸಕರಾದ ಬಸವರಾಜ ಮತ್ತಿಮಡು, ಶರಣು ಸಲಗರ ಇದ್ದರು —ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

'ಬರ ಅಧ್ಯಯನ ಪ್ರವಾಸ ವೇಳೆ ಬರ ಪರಿಹಾರದ ಹಣ ಕೊಡಿಸಿ, ಬೆಳೆ ಸಾಲ ಮನ್ನಾ ಮಾಡುವಂತೆ ರೈತರು ಬೇಡಿಕೆ ಇರಿಸಿದ್ದಾರೆ. ಇದನ್ನೇ ಸದನದಲ್ಲಿ ಪ್ರಥಮ ನಿಲುವಳಿಯಾಗಿ ಪ್ರಸ್ತಾಪಿಸಿ, ಬಿಜೆಪಿ– ಜೆಡಿಎಸ್‌ನ ಎಲ್ಲ 85 ಶಾಸಕರು ಒಟ್ಟಾಗಿ ರೈತರಿಗೆ ನ್ಯಾಯ ಸಿಗುವವರೆಗೂ ಹೋರಾಟ ಮಾಡುತ್ತೇವೆ' ಎಂದರು.

'ಸರ್ಕಾರವೇ ಪ್ರತಿ ರೈತರ ಸಾಲ ಮನ್ನಾದ ಹಣವನ್ನು ನಿಗದಿಪಡಿಸಿ ಘೋಷಣೆ ಮಾಡಬೇಕು' ಎಂದು ಒತ್ತಾಯಿಸಿದರು.

'ಈ ಹಿಂದೆ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಕೇಂದ್ರ ಸರ್ಕಾರದ ಅನುದಾನಕ್ಕಾಗಿ ಕಾಯದೆ ತಾವೇ ಬೆಳೆ ಸಾಲ ಮನ್ನಾ ಮಾಡಿದ್ದರು. ಸಿದ್ದರಾಮಯ್ಯ ಅವರೂ ಮಾಡಬಹುದಲ್ಲವೇ? ಖಜಾನೆ ಖಾಲಿಯಾಗಿ ಪಾಪರ್ ಆಗಿದ್ದರೆ ಅದನ್ನು ಬಹಿರಂಗ ಪಡಿಸಲಿ. ಪರಿಹಾರಧನ ಕೊಡಲು ಏನು ದಾಡಿ ನಿಮಗೆ? ಮಧ್ಯಪ್ರದೇಶ, ತೆಲಂಗಾಣ ರಾಜ್ಯಗಳ ಚುನಾವಣೆಗೆ ಹಣ ತೆಗೆದುಕೊಂಡು ಹೋಗಿದ್ದೀರಾ? ಮೊದಲು ರಾಜ್ಯದ ಖಜಾನೆಯಿಂದ ಪರಿಹಾರ ಕೊಡಿ, ಕೇಂದ್ರ ಸರ್ಕಾರದ ಪಾಲು ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಬಂದೇ ಬರುತ್ತದೆ' ಎಂದರು.

'ಬರದ ಗಾಯದ ಮೇಲೆ ಬರೆ ಎಳೆದಂತೆ ರೈತರ ಪಹಣಿಯ ಶುಲ್ಕವನ್ನು ₹25ಕ್ಕೆ ಹೆಚ್ಚಿಸಲಾಗಿದೆ. ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕಿಸಲು ₹1 ಲಕ್ಷ ಪಡೆಯಲಾಗುತ್ತಿದೆ. ಹೊಸ ವಿದ್ಯುತ್ ಪರಿವರ್ತಕ (ಟಿಸಿ) ಅಳವಡಿಕೆ ಮತ್ತು ಅದರ ದುರಸ್ತಿಯ ವೆಚ್ಚವನ್ನೂ ರೈತರ ಮೇಲೆ ಹಾಕುತ್ತಿದ್ದಾರೆ. ರೈತರಿಂದ ಹಣ ಸುಲಿಗೆ ಮಾಡಿ ಗ್ಯಾರಂಟಿ ಯೋಜನೆಗಳಿಗೆ ಬಳಸುತ್ತಿರಬಹುದು' ಎಂದು ದೂರಿದರು.

'ಸದನದಲ್ಲಿ ಸರ್ಕಾರಕ್ಕೆ ಬುದ್ಧಿ ಕಲಿಸಲು ಜಮೀರ್ ಅಹ್ಮದ್ ಅವರ ವಿವಾದಾತ್ಮಕ ಹೇಳಿಕೆ, ಯತೀಂದ್ರ ಸಿದ್ದರಾಮಯ್ಯ ಅವರ ಫೋನ್ ಸಂಭಾಷಣೆ, ಕಾವೇರಿ ನೀರನ್ನು ಕದ್ದು ಮುಚ್ಚಿ ತಮಿಳುನಾಡಿನ ಸ್ನೇಹಿತನಿಗಾಗಿ ಹರಿಸಿದ್ದು, ಕೆಇಎ ನೇಮಕಾತಿ ಹಗರಣ ಸೇರಿದಂತೆ ನೂರಾರು ಅಸ್ತ್ರಗಳು ನಮ್ಮ ಬಳಿ ಇವೆ. ಅವೆಲ್ಲವನ್ನು ಪ್ರಯೋಗಿಸಿ, ಸರ್ಕಾರದ ಕಿವಿ ಹಿಂಡುತ್ತೇವೆ' ಎಂದು ಅಶೋಕ ಎಚ್ಚರಿಸಿದರು.

'ಬರ ಪರಿಹಾರ: ಇಂದು ಕೇಂದ್ರದೊಂದಿಗೆ ಸಭೆ'

ಮಂಡ್ಯ: 'ಬರಪರಿಹಾರ ಘೋಷಣೆ ಸಂಬಂಧ ಕೇಂದ್ರ ಕೃಷಿ ಇಲಾಖೆಯಿಂದ ಕರೆ ಬಂದಿದ್ದು ಬುಧವಾರ (ನ.22) ದೆಹಲಿಯಲ್ಲಿ ಸಮಯ ನೀಡಿದ್ದಾರೆ. ರಾಜ್ಯದಾದ್ಯಂತ ರೈತರ ಸಮಸ್ಯೆ ಬಿಗಡಾಯಿಸುತ್ತಿದ್ದು ಕೇಂದ್ರದ ಪರಿಹಾರಕ್ಕೆ ನಾವು ಕಾಯುತ್ತಿದ್ದೇವೆ' ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಮಂಗಳವಾರ ಹೇಳಿದರು.

ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳ ತಂಡದೊಂದಿಗೆ ಜಿಲ್ಲೆಯ ವಿವಿಧೆಡೆ ಬರ ಪರಿಸ್ಥಿತಿ ಅಧ್ಯಯನ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಕೇಂದ್ರ ಸರ್ಕಾರದ ಘೋಷಣೆ ನೋಡಿಕೊಂಡು ಯಾವ ರೀತಿ ಪರಿಹಾರ ಹಂಚಿಕೆ ಮಾಡಬೇಕು ಎಂಬುದನ್ನು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು. ₹ 75 ಸಾವಿರ ಕೋಟಿಯಷ್ಟು ಹಣವನ್ನು ಪರಿಹಾರಕ್ಕೆ ಖರ್ಚು ಮಾಡಲು ಯೋಜನೆ ರೂಪಿಸಿದ್ದೇವೆ. ಮುಖ್ಯಮಂತ್ರಿ ಕೂಡ ಆಯಾ ಉಸ್ತುವಾರಿ ಸಚಿವರಿಗೆ ಬೆಳೆ ಹಾನಿ ಪರಿಶೀಲನೆ ಮಾಡುವಂತೆ ಸೂಚಿಸಿದ್ದಾರೆ' ಎಂದರು.

'ನಮ್ಮ ರಾಜ್ಯದಿಂದ ₹ 4 ಲಕ್ಷ ಕೋಟಿ ತೆರಿಗೆ ಹಣ ಕೇಂದ್ರಕ್ಕೆ ಹೋಗುತ್ತದೆ. ನಮಗೆ ₹ 50 ಸಾವಿರ ಕೋಟಿಯನ್ನೂ ವಾಪಸ್ ಕೊಡುವುದಿಲ್ಲ. ನಮಗೆ ಸಿಗಬೇಕಾದ ಪರಿಹಾರ ಹಣವನ್ನು ಶೀಘ್ರ ಘೋಷಿಸಬೇಕು. ಅವರೇನೂ ಬಿಹಾರದಿಂದ ಪರಿಹಾರ ತಂದು ಕೊಡುವುದಿಲ್ಲ. ಅಮೆರಿಕಾದಿಂದ ತಂದು ಕೊಡುವುದಿಲ್ಲ' ಎಂದು ಅವರು ಹೇಳಿದರು.

ಚಡ್ಡಿ ಹಾಕುವ ಎಚ್‌ಡಿಕೆ: 'ಬಿಜೆಪಿ ಹೇಳಿದಂತೆ ಕೇಳುತ್ತಿರುವ ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅವರು ಈಗ ಚಡ್ಡಿ ಹಾಕಿಕೊಳ್ಳಲು ಸಿದ್ಧರಾಗಿದ್ದಾರೆ, ದತ್ತಮಾಲೆಯನ್ನೂ ಧರಿಸುತ್ತಿದ್ದಾರೆ. ಈಗ ಜೆಡಿಎಸ್‌ನಲ್ಲಿ ಜಾತ್ಯತೀತ ಸಿದ್ಧಾಂತ ಇಲ್ಲ' ಎಂದು ವ್ಯಂಗ್ಯವಾಡಿದರು.

'ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇನ್ನೂ ಮಗು, ತಂದೆ ಮುಖ್ಯಮಂತ್ರಿಯಾಗಿದ್ದ ಕಾರಣಕ್ಕೆ ತಮಗೆ ಎಲ್ಲವೂ ಗೊತ್ತಿದೆ ಎಂಬಂತೆ ಮಾತನಾಡುತ್ತಿದ್ದಾರೆ. ಅವರು ಅಧ್ಯಕ್ಷರಾಗಿರುವುದನ್ನು ಅವರ ಪಕ್ಷದ ಮುಖಂಡರೇ ಒಪ್ಪಲು ಸಿದ್ಧರಿಲ್ಲ' ಎಂದರು.

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ಅವರೂ ಮಾಲೆ ಹಾಕಿ ಬರಲಿ: ಸಿ.ಟಿ.ರವಿ ಮನವಿ

ಚಿಕ್ಕಮಗಳೂರು: 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ದತ್ತಪೀಠಕ್ಕೆ ಮಾಲೆ ಧರಿಸಿ ಬರಲಿ' ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಮನವಿ ಮಾಡಿದರು.

'ಹಿಂದೂ ಎಂದು ಹೇಳಿಕೊಳ್ಳಲು ಗರ್ವಪಡಬೇಕು. ಸಮಾಜ ಕೂಡ ಅದನ್ನೇ ನಿರೀಕ್ಷೆ ಮಾಡುತ್ತದೆ. ಕುಮಾರಸ್ವಾಮಿ ಅವರ ಹೇಳಿಕೆ ಸಿದ್ದರಾಮಯ್ಯ ಅವರಿಗೆ ಮಾದರಿ' ಎಂದು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದರು.

'ನಾನು ಹಿಂದೂ ಅಲ್ವಾ, ನನ್ನ ಹೆಸರಲ್ಲೆ ಸಿದ್ದರಾಮ ಇದ್ದಾನೆ ಎಂದಿದ್ದೀರಿ. ಮಾಲೆ ಹಾಕಿ ಬನ್ನಿ, ನೀವು ಬಂದರೆ ಸಚಿವ ಜಮೀರ್ ಕೂಡ ಮಾಲೆ ಹಾಕೇ ಹಾಕುತ್ತಾರೆ. ಐದು ದಶಕಗಳ ಸತ್ಯದ ಹೋರಾಟಕ್ಕೆ ಬಲ ಬರಲಿದೆ' ಎಂದರು.



'ಹಿಂದುತ್ವದ ವಿಚಾರ ಬಂದಾಗ ಹಿಂದೆ ನೋಡಲೇಬಾರದು, ಮುಂದಕ್ಕೆ ನೋಡಬೇಕು. ನಮ್ಮ ಧರ್ಮದ ಪ್ರಕಾರ ನಡೆದುಕೊಳ್ಳಲು ಯಾರಿಗೂ ಹೆದರಬೇಕಿಲ್ಲ. ಚುನಾವಣೆ ಸಮಯಕ್ಕೆ ಹಿಂದೂಗಳಾಗಬಾರದು, ಜೀವನ ಪರ್ಯಂತ ಹಿಂದೂ ಆಗಿ ಇರಬೇಕು' ಎಂದರು.

ಉದ್ಯಮಿಗಳ ಮೇಲೆ ಐ.ಟಿ ದಾಳಿ

ಬೆಂಗಳೂರು: ತೆರಿಗೆ ವಂಚನೆ ಆರೋಪದ ಮೇಲೆ ನಗರದ ಕೆಲವೆಡೆ ಉದ್ಯಮಿಗಳ ಮನೆ ಹಾಗೂ ಉದ್ಯಮ ಸಂಸ್ಥೆಗಳ ಕಚೇರಿಗಳು, ಉತ್ಪಾದನಾ ಘಟಕಗಳ ಮೇಲೆ ಮಂಗಳವಾರ ದಾಳಿಮಾಡಿದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಮಾಗಡಿ ರಸ್ತೆಯಲ್ಲಿರುವ ಉದ್ಯಮಿಯೊಬ್ಬರ ಮನೆ ಮೇಲೆ ಬೆಳಿಗ್ಗೆಯೇ ದಾಳಿ ಮಾಡಿದ ಆದಾಯ ತೆರಿಗೆ ಅಧಿಕಾರಿಗಳು, ತಡ ರಾತ್ರಿಯವರೆಗೂ ಶೋಧ ನಡೆಸಿದ್ದಾರೆ. ಆಡುಗೋಡಿ, ರಾಜಾಜಿನಗರದಲ್ಲೂ ಕೆಲವು ಉದ್ಯಮಿಗಳ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಮನಗರ ಜಿಲ್ಲೆಯ ಹಾರೋಹಳ್ಳಿ ಪಟ್ಟಣದ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಯೊಂದರ ಮೇಲೂ ದಾಳಿ ಮಾಡಿದ ಐ.ಟಿ ಅಧಿಕಾರಿಗಳು, ಇಡೀ ದಿನ ಶೋಧ ನಡೆಸಿದರು. ಹಣಕಾಸು ವಹಿವಾಟು ಮತ್ತು ಕಂಪನಿಗಳ ಉತ್ಪಾದನೆ, ಮಾರಾಟಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಬಾಡಿಗೆ ತಾಯ್ತನಕ್ಕೆ ಹೈಕೋರ್ಟ್ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾನಿಗಳ ವೀರ್ಯ ಪಡೆದು ಬಾಡಿಗೆ ತಾಯ್ತನ ಆಯ್ಕೆ ಮಾಡಿಕೊಂಡು ಮಕ್ಕಳನ್ನು ಹೊಂದಲು 13 ದಂಪತಿಗಳಿಗೆ ಹೈಕೋರ್ಟ್ ಅವಕಾಶ ಕಲ್ಪಿಸಿದೆ.



'ಬಾಡಿಗೆ ತಾಯ್ತನಕ್ಕೆ ಸಂಬಂಧಿಸಿದ ನೂತನ ತಿದ್ದುಪಡಿ ಪ್ರಕಾರ ದಾನಿಗಳ ವೀರ್ಯ ಪಡೆಯಲು ನಿರ್ಬಂಧವಿದೆ. ಆದರೆ, ಎಲ್ಲವನ್ನೂ ಏಕರೂಪದಲ್ಲಿ ಗಮನಿಸುವುದು ಸರಿಯಲ್ಲ. ಪ್ರತಿಯೊಂದನ್ನೂ ಆಯಾ ಪ್ರಕರಣಕ್ಕೆ ತಕ್ಕಂತೆ ಗಮನಿಸಿ, ನಿಯಮಗಳನ್ನು ಆಧರಿಸಿ ಸಡಿಲಗೊಳಿಸಬಹುದು' ಎಂದು ಆದೇಶಿಸಿದೆ.

2023ರ ಮಾರ್ಚ್ 14ರಿಂದ ಜಾರಿಗೆ ಬಂದಿರುವ ಬಾಡಿಗೆ ತಾಯ್ತನ ತಿದ್ದುಪಡಿ ನಿಯಮ 7 ಅನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಇಂತಹುದೇ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಆದಾಗ್ಯೂ, ಅರ್ಜಿದಾರ ದಂಪತಿಗಳ ವೈದ್ಯಕೀಯ ಸ್ಥಿತಿಗತಿಗಳನ್ನು ಪರಿಗಣಿಸಿ ಬಾಡಿಗೆ ತಾಯ್ತನದ ಮೂಲಕ ಅವರು ಮಕ್ಕಳನ್ನು ಪಡೆಯಬಹುದು. ಈ ಸಂಬಂಧ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಪರಿಶೀಲಿಸಿ ಅಗತ್ಯ ಪ್ರಮಾಣ ಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿ

ಬೇಸಿಗೆಯಲ್ಲಿ ಬೇಡಿಕೆಗನುಗುಣವಾದ ವಿದ್ಯುತ್ ಪೂರೈಕೆಗೆ ಇಂಧನ ಇಲಾಖೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆ ಅವಧಿಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗುವ ಸಾಧ್ಯತೆಯಿದ್ದು, ಪಂಜಾಬ್ ಹಾಗೂ ಉತ್ತರ ಪ್ರದೇಶ ರಾಜ್ಯಗಳಿಂದ ಹೆಚ್ಚುವರಿಯಾಗಿ ವಿದ್ಯುತ್ ಖರೀದಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

2024ರ ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಸರಾಸರಿ ವಿದ್ಯುತ್ ಬೇಡಿಕೆ 15,500ರಿಂದ 16,500 ಮೆಗಾವಾಟ್ ತಲುಪುವ ನಿರೀಕ್ಷೆಯಿದೆ. ಈ ಬೇಡಿಕೆ ಪೂರೈಸಲು ಪಂಜಾಬ್‌ನಿಂದ 300 ಮೆಗಾವಾಟ್, ಉತ್ತರ ಪ್ರದೇಶದಿಂದ 100 ರಿಂದ 600 ಮೆಗಾವಾಟ್‌ವರೆಗೆ ವಿದ್ಯುತ್ ವಿನಿಯಮ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಕೆಪಿಸಿಎಲ್‌ನ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನೆಯನ್ನು 3,500 ಮೆಗಾವಾಟ್‌ಗೆ ಹೆಚ್ಚಿಸಲಾಗುವುದು. 370 ಮೆಗಾವಾಟ್ ಸಾಮರ್ಥ್ಯದ ಯಲಹಂಕ ಅನಿಲ ಸ್ಥಾವರದಲ್ಲಿ ಶೀಘ್ರದಲ್ಲೇ ಉತ್ಪಾದನೆ ಆರಂಭಿಸಲಾಗುವುದು. ಉಷ್ಣವಿದ್ಯುತ್ ಸ್ಥಾವರಗಳಿಗೆ ಅಕ್ಟೋಬರ್‌ನಿಂದ 2 ಲಕ್ಷ ಟನ್‌ನಷ್ಟು ಹೆಚ್ಚುವರಿ ಕಲ್ಲಿದ್ದಲು ಪೂರೈಕೆ ಯಾಗುತ್ತಿದೆ. ಮುಂದಿನ ತಿಂಗಳಿಂದ ಕೂಡ್ಲಿಗಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ 150 ಮೆಗಾವಾಟ್ ಉತ್ಪಾದನೆ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

'ಥರ್ಮಲ್ ಜನರೇಟರ್‌ಗಳ ಕಾರ್ಯಕ್ಷಮತೆ ಸುಧಾರಿಸಲು ದೇಶೀಯ ಕಲ್ಲಿದ್ದಲು ಜತೆಗೆ ಆಮದು ಕಲ್ಲಿದ್ದಲನ್ನು ಸರಾಸರಿ ಶೇ 10ರಷ್ಟು ಮಿಶ್ರಣ ಮಾಡಲಾಗುವುದು' ಎಂದು ಹೇಳಿದರು.

ಯಲಹಂಕದ ಸೈಕಲ್ ಸ್ಥಾವರಕ್ಕೆ (ವೈಸಿಸಿಪಿ) ಅಗತ್ಯ ಗ್ಯಾಸ್ ಪೂರೈಸಿ, 6 ತಿಂಗಳ ಒಳಗೆ ಕಾರ್ಯಗತ ಮಾಡಲಾಗುವುದು. ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಸಲು ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾದಿಂದ 1,100 ಮೆಗಾವಾಟ್ ಹೈಬ್ರಿಡ್ (ಪವನ, ಸೌರ ಮತ್ತು ಸಂಗ್ರಹಣಾ) ಇಂಧನ ಪಡೆಯಲು ಕ್ರಮ ವಹಿಸಲಾಗಿದೆ ಎಂದರು.

7 ತಾಸು ವಿದ್ಯುತ್ ಪೂರೈಕೆ: ರಾಜ್ಯದ ದೈನಂದಿನ ವಿದ್ಯುತ್ ಬೇಡಿಕೆ ಸುಮಾರು 14 ಸಾವಿರ ಮೆಗಾವಾಟ್ ಆಗಿದೆ. ನೀರಾವರಿ ಪಂಪ್‌ಸೆಟ್ ಸೆಟ್‌ಗಳಿಗೆ 4,500 ಮೆಗಾವಾಟ್ ವಿದ್ಯುತ್ ಬೇಡಿಕೆಯಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ನೀರಾವರಿ ಪಂಪ್‌ಸೆಟ್ 7 ತಾಸು ವಿದ್ಯುತ್ ಪೂರೈಕೆ ಮಾಡುವಂತೆ ಮುಖ್ಯಮಂತ್ರಿ ಸೂಚಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯ 2.64 ಲಕ್ಷ ಫಲಾನುಭವಿಗಳು ಬಾಕಿ ಉಳಿಸಿಕೊಂಡಿದ್ದ ₹ 389.66 ಕೋಟಿ ವಿದ್ಯುತ್ ಶುಲ್ಕ ಮನ್ನಾ ಮಾಡಿ, ಗೃಹ ಜ್ಯೋತಿ ಯೋಜನೆಗೆ ಸೇರ್ಪಡೆ ಮಾಡಲಾಗಿದೆ ಎಂದು ಹೇಳಿದರು.

ಪಂಪ್‌ಸೆಟ್: ಸಂಪುಟ ಸಭೆಯಲ್ಲಿ ಚರ್ಚೆ

ಕೃಷಿ ಕೊಳವೆ ಬಾವಿಗಳಿಗೆ ರೈತರು ಸ್ವಂತ ಖರ್ಚಿನಲ್ಲಿ ವಿದ್ಯುತ್ ಸಂಪರ್ಕ ಪಡೆಯಬೇಕೆಂದು ಸರ್ಕಾರದ ಆದೇಶ ಹಿಂಪಡೆಯುವ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವ ಜಾರ್ಜ್, 'ಇದನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ' ಎಂದರು.

'ಸೆ.22ಕ್ಕಿಂತ ಮುಂಚೆ ಅಕ್ರಮ ಸಕ್ರಮ ಮತ್ತು ಶೀಘ್ರ ವಿದ್ಯುತ್ ಯೋಜನೆಯಡಿ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದಕ್ಕಾಗಿ 4.30 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಅವುಗಳನ್ನು ವಿಲೇವಾರಿ ಮಾಡಲು ಸುಮಾರು ₹6 ಸಾವಿರ ಕೋಟಿ ಬೇಕಾಗುತ್ತದೆ' ಎಂದರು.

'ಇಬ್ರಾಹಿಂ ಘನತೆ ಇಲ್ಲದ ನಾಯಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವ ಸಿ.ಎಂ. ಇಬ್ರಾಹಿಂ ರಾಜಕಾರಣದಲ್ಲಿ ಘನತೆ ಇಲ್ಲದ ನಾಯಕ' ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ. ಶರವಣ ವಾಗ್ದಾಳಿ ನಡೆಸಿದರು.



ಟಿ.ಎ.ಶರವಣ

'ಶರವಣ ಅವರಿಗೆ ವಿಧಾನ ಪರಿಷತ್ ಚುನಾವಣೆಯ ಟಿಕೆಟ್ ನೀಡಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹಣ ಪಡೆದಿದ್ದರು' ಎಂಬ ಇಬ್ರಾಹಿಂ ಆರೋಪದ ಕುರಿತು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಇಬ್ರಾಹಿಂ ಗಾಜಿನ ಮನೆಯಲ್ಲಿ ಕುಳಿತು ಬೇರೆಯವರ ಮೇಲೆ ಕಲ್ಲು ತೂರುವುದನ್ನು ನಿಲ್ಲಿಸಲಿ' ಎಂದರು.

'ಪಕ್ಷಕ್ಕೆ ನಾನು ಈವರೆಗೆ ಯಾವುದೇ ಸೇವೆ ಮಾಡಿದ್ದರೂ ಅದು ಸ್ವಯಂಪ್ರೇರಿತ. ಯಾರೊಬ್ಬರೂ ನನ್ನಿಂದ ಏನನ್ನೂ ಕೇಳಿಲ್ಲ' ಎಂದು ಹೇಳಿದರು.

'ಎಚ್‌.ಡಿ. ದೇವೇಗೌಡರು ಪಿತೃ ಸಮಾನ, ಕುಮಾರಸ್ವಾಮಿ ಸಹೋದರ ನಿದ್ದಂತೆ ಎನ್ನುತ್ತಿದ್ದ ಇಬ್ರಾಹಿಂ, ಈಗ ಊಸರವಳ್ಳಿಯಂತೆ ಬಣ್ಣ ಬದಲಿಸುತ್ತಿದ್ದಾರೆ. ಪಕ್ಷದ ಎಲ್ಲ ತೀರ್ಮಾನಗಳಲ್ಲಿ ಭಾಗಿಯಾಗಿದ್ದ ಅವರು ಈಗ ಸುಳ್ಳು ಹೇಳಿತ್ತಿದ್ದಾರೆ' ಎಂದು ಟೀಕಿಸಿದರು.

ನೈತಿಕತೆ ಇದೆಯೆ?: 'ಇಬ್ರಾಹಿಂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ತಮ್ಮ ಮಗನಿಗೇ ಹುಮ್ನಾಬಾದ್ ಕ್ಷೇತ್ರದಲ್ಲಿ ಟಿಕೆಟ್ ನೀಡಿದ್ದರು. ದೇವೇಗೌಡರ ಪುತ್ರ ಪ್ರೇಮದ ಬಗ್ಗೆ ಮಾತನಾಡಲು ಇವರಿಗೆ ಯಾವ ನೈತಿಕತೆ ಇದೆ' ಎಂದು ಶರವಣ ಪ್ರಶ್ನಿಸಿದರು.

ಜಾತಿ ಜನಗಣತಿ ವರದಿ ತಿರಸ್ಕರಿಸಿ: ಸಿ.ಎಂಗೆ ಒಕ್ಕಲಿಗರ ಸಂಘ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನಗಣತಿ) ವರದಿಯನ್ನು ತಿರಸ್ಕರಿಸುವಂತೆ ರಾಜ್ಯ ಒಕ್ಕಲಿಗರ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದೆ.

ರಾಜ್ಯ ಒಕ್ಕಲಿಗರ ಸಂಘ ಮತ್ತು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಸದಸ್ಯರ ನಿಯೋಗವು ಮುಖ್ಯಮಂತ್ರಿಯವರನ್ನು ಮಂಗಳವಾರ ಭೇಟಿಮಾಡಿ ಮನವಿ ಸಲ್ಲಿಸಿದೆ. ಒಕ್ಕಲಿಗರ ಸಂಘದ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಎಸ್‌.ಎಂ. ಕೃಷ್ಣ, ಡಿ.ವಿ. ಸದಾನಂದ ಗೌಡ, ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮನವಿಗೆ ಸಹಿ ಮಾಡಿದ್ದಾರೆ.

ರಾಜ್ಯದ ಹಾಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಕೂಡ ಒಕ್ಕಲಿಗರ ಸಂಘದ ಮನವಿಯನ್ನು ಬೆಂಬಲಿಸಿ ಸಹಿ ಮಾಡಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಸೇರಿದಂತೆ ಒಕ್ಕಲಿಗ ಸಮುದಾಯದ ಬಹುತೇಕ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು ಸಹಿ ಮಾಡಿದ್ದಾರೆ. ಸಚಿವರಾದ ಕೃಷ್ಣ ಬೈರೇಗೌಡ ಮತ್ತು ಕೆ. ವೆಂಕಟೇಶ್ ಅವರ ಹೆಸರು ಪಟ್ಟಿಯಲ್ಲಿದ್ದರೂ ಅವರು ಸಹಿ ಮಾಡಿಲ್ಲ.

'2014–15ರಲ್ಲಿ ಎಚ್‌. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋ ಸಮೀಕ್ಷೆ ನಡೆಸಿತ್ತು. ಆಗ ರಾಜ್ಯದ ಜನಸಂಖ್ಯೆ 5.40 ಕೋಟಿ ಇತ್ತು. ಈಗ ಅದು 6.90 ಕೋಟಿಗೆ ಏರಿದೆ. ಹಳೆಯ ದತ್ತಾಂಶಗಳನ್ನು ಆಧರಿಸಿ ಈಗ ವರದಿ ಸಲ್ಲಿಸುವುದು ಅವೈಜ್ಞಾನಿಕ' ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

'ಹಿಂದುಳಿದ ವರ್ಗಗಳ ಆಯೋಗವು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿಲ್ಲ. ಗಣತಿದಾರರು ಮನೆ, ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿಲ್ಲ. ಶಾಲಾ ಮಕ್ಕಳನ್ನು ಬಳಕೆ ಮಾಡಿಕೊಂಡು ಅವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಲಾಗಿದೆ. ವರದಿಯ ಮೂಲ ಪ್ರತಿ ಆಯೋಗದ ಕಚೇರಿಯಲ್ಲೇ ಲಭ್ಯವಿಲ್ಲ. ಈ ಎಲ್ಲ ಕಾರಣಗಳನ್ನು ಆಧರಿಸಿ ವರದಿಯನ್ನು ತಿರಸ್ಕರಿಸಬೇಕು' ಎಂದು ಒತ್ತಾಯಿಸಲಾಗಿದೆ.

ಕಾಂತರಾಜ ನೇತೃತ್ವದ ಆಯೋಗ ಸಂಗ್ರಹಿಸಿದ್ದ ದತ್ತಾಂಶಗಳನ್ನು ಆಧರಿಸಿ ಈಗಿನ ಆಯೋಗವು ವರದಿ ಸಲ್ಲಿಸುವುದು ಕಾನೂನುಬಾಹಿರ ನಿರ್ಧಾರವಾಗುತ್ತದೆ. ಆದ್ದರಿಂದ ವರದಿ ಸಲ್ಲಿಸದಂತೆ ಆಯೋಗಕ್ಕೆ ಸೂಚಿಸಬೇಕು. ಈಗ ಮತ್ತೊಮ್ಮೆ ಪಾರದರ್ಶಕ ಹಾಗೂ ವೈಜ್ಞಾನಿಕವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿ ವರದಿ ಪಡೆಯಬೇಕು ಎಂದು ಒಕ್ಕಲಿಗರ ಸಂಘ ಆಗ್ರಹಿಸಿದೆ.



ಅದ್ದೂರಿ ರಥೋತ್ಸವ ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಹಲಗತ್ತಿಯ ಗ್ರಾಮ ದೇವತೆಯರ ರಥೋತ್ಸವ ಮಂಗಳವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು -ಪ್ರಜಾವಾಣಿ ಚಿತ್ರ / ಚನ್ನಪ್ಪ ಮಾದರ

ಜಗಳ ಬಿಡಿಸ ಬಂದ ಪೊಲೀಸರ ವಾಹನವನ್ನೇ ಅಪಹರಿಸಿದ!

ಪ್ರಜಾವಾಣಿ ವಾರ್ತೆ



ಮುನಿಯ

ಗುಬ್ಬಿ(ತುಮಕೂರು): ಅಣ್ಣ, ತಮ್ಮಂದಿರ ಜಗಳ ಬಿಡಿಸಲು ಹೋಗಿದ್ದ ಪೊಲೀಸರ ವಾಹನವನ್ನೇ ಅಪಹರಿಸಿದ ಘಟನೆಯೊಂದು ಸೋಮವಾರ ಗುಬ್ಬಿ ತಾಲ್ಲೂಕಿನಲ್ಲಿ ನಡೆದಿದೆ.

ಗುಬ್ಬಿ ತಾಲ್ಲೂಕಿನ ಸಿ.ಎಸ್ ಪುರ ಹೋಬಳಿಯ ನಾರಾನಹಳ್ಳಿ ಗ್ರಾಮದ ಮುನಿಯ ಹಾಗೂ ಆತನ ಸಹೋದರನ ನಡುವೆ ಜಗಳ ನಡೆಯುತ್ತಿದ್ದ ಬಗ್ಗೆ ಮಾಹಿತಿ ಪಡೆದ ಪೊಲೀಸರು ಗ್ರಾಮಕ್ಕೆ ತೆರಳಿದ್ದರು.

ಪೊಲೀಸರ ಮಧ್ಯಸ್ಥಿಕೆಯಲ್ಲಿ ಅಣ್ಣ, ತಮ್ಮಂದಿರ ನಡುವೆ ರಾಜಿ ಸಂಧಾನ ನಡೆಯುತ್ತಿತ್ತು. ಪಕ್ಕದಲ್ಲಿಯೇ ಇದ್ದ ಪೊಲೀಸರ ವಾಹನ ಏರಿದ ಮುನಿಯ ತಾನೇ ಚಾಲನೆ ಮಾಡಿಕೊಂಡು ಸ್ಥಳದಿಂದ ಪರಾರಿಯಾದ.

ಇದರಿಂದ ಗಲಿಬಿಲಿಗೊಂಡ ಪೊಲೀಸರು ಸುತ್ತಮುತ್ತಲಿನ ಎಲ್ಲ ಪೊಲೀಸ್ ಠಾಣೆಗಳಿಗೂ ಸಂದೇಶ ರವಾನಿಸಿದರು. ಸತತ ಮೂರು ತಾಸುಗಳ ಪ್ರಯತ್ನದ ನಂತರ ಪೊಲೀಸರು ಆತನನ್ನು ತುಮಕೂರು ತಾಲ್ಲೂಕಿನ ಹೆಬ್ಬೂರು ಬಳಿ ಪತ್ತೆ ಹಚ್ಚಿ ನಿಟ್ಟುಸಿರು ಬಿಟ್ಟಿದ್ದಾರೆ.

ಪೊಲೀಸ್ ವಾಹನ ಸಮೇತ ಆರೋಪಿಯನ್ನು ವಶಕ್ಕೆ ಪಡೆದು ಕರೆ ತಂದಿದ್ದಾರೆ. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟೊಯೊಟಾ: ₹3,300 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೊಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ಕಂಪನಿ ಬಿಡದಿಯ ತನ್ನ ಕಾರು ತಯಾರಿಕಾ ಸ್ಥಾವರದಲ್ಲಿ ಆರಂಭಿಸಲಿರುವ ಮೂರನೇ ಘಟಕದಲ್ಲೆ ₹ 3,300 ಕೋಟಿ ಹೂಡಿಕೆ ಮಾಡುತ್ತಿದೆ.

ಜಪಾನ್‌ನ ಟೊಯೊಟಾ ಮೋಟರ್ ಕಾರ್ಪೊರೇಷನ್‌ನ ಭಾರತದ ಅಂಗಸಂಸ್ಥೆಯಾದ ಟೊಯೊಟಾ ಕಿರ್ಲೋಸ್ಕರ್ ಈ ಸಂಬಂಧ ರಾಜ್ಯ ಸರ್ಕಾರದ ಜತೆ ಮಂಗಳವಾರ ಒಪ್ಪಂದ ಮಾಡಿಕೊಂಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಟೊಯೊಟಾ ವ್ಯವಸ್ಥಾಪಕ ನಿರ್ದೇಶಕ ಮಸಕಾಜು ಯೋಶಿಮುರಾ ಒಪ್ಪಂದ ಪತ್ರ ವಿನಿಮಯ ಮಾಡಿಕೊಂಡರು.

ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಮೇಲೆ ₹25 ಸಾವಿರ ಕೋಟಿ ಬಂಡವಾಳ ಹೂಡಿಕೆ ಆಕರ್ಷಿಸಲಾಗಿದೆ. ₹50 ಸಾವಿರ ಕೋಟಿ ಹೂಡಿಕೆ ಆಕರ್ಷಿಸುವ ಗುರಿ ಇದೆ.



ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಕಂಪನಿಯು ಬಿಡದಿಯ ವಾಹನ ತಯಾರಿಕಾ ಘಟಕದ ವಿಸ್ತರಣೆಗೆ ರಾಜ್ಯ ಸರ್ಕಾರದ ಜತೆ ಒಪ್ಪಂದ ಮಾಡಿಕೊಂಡಿತು. ಎಂ.ಬಿ.ಪಾಟೀಲ, ಸಿದ್ದರಾಮಯ್ಯ, ಮಸಕಾಜು ಯೋಶಿಮುರಾ, ಗೀತಾಂಜಲಿ ಕಿರ್ಲೋಸ್ಕರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಇದರಿಂದ ರಾಜ್ಯದಲ್ಲಿ ಒಂದು ಲಕ್ಷ ಹೊಸ ಉದ್ಯೋಗ ಸೃಷ್ಟಿಯಾಗಲಿವೆ. ರಾಜ್ಯದಲ್ಲಿ 2 ಲಕ್ಷ ವಾಹನಗಳು (ಇವಿ) ನೋಂದಣಿಯಾಗಿವೆ. ಇವಿ ವಾಹನಗಳ ಉತ್ಪಾದನೆಯಲ್ಲಿ ಕರ್ನಾಟಕವನ್ನು ಪ್ರಮುಖ ತಾಣವಾಗಿಸಲು ಹೊಸ ಶುದ್ಧ ಸಂಚಾರ (ಕ್ಲೀನ್ ಮೊಬಿಲಿಟಿ) ನೀತಿಯನ್ನು ರಾಜ್ಯ ಸರ್ಕಾರ ಹೊರತರಲಿದೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಿರ್ಲೋಸ್ಕರ್ ಸಿಸ್ಟಮ್ಸ್ ಅಧ್ಯಕ್ಷೆ ಗೀತಾಂಜಲಿ ಕಿರ್ಲೋಸ್ಕರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್‌.ಸೆಲ್ವ ಕುಮಾರ್, ಕೈಗಾರಿಕೆ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು.

ನೀರಗಂಟಿ, ಜವಾನ, ಸ್ವಚ್ಛತಾಗಾರರಿಗೆ ಜಿ.ಪಂ. ಅನುಮೋದನೆ ನೀಡಲು ನಿರ್ಧಾರ

11,170 ಗ್ರಾ.ಪಂ. ಸಿಬ್ಬಂದಿಗೆ ಸೇವಾ ಭದ್ರತೆ

• ಸಿದ್ದು ಆರ್‌.ಜಿ.ಹಳ್ಳಿ

ಹಾವೇರಿ: ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ 11,170 ಸಿಬ್ಬಂದಿಗೆ ಸೇವಾ ಭದ್ರತೆ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ.

2017ಕ್ಕೂ ಮುಂಚಿತವಾಗಿ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡ ನೀರಗಂಟಿ, ಜವಾನ, ಸ್ವಚ್ಛತಾಗಾರರ ಹುದ್ದೆಗಳಿಗೆ ಕನಿಷ್ಠ ವಿದ್ಯಾರ್ಹತೆಯ ತೊಡಕು ನಿವಾರಿಸಿ ಸಭಾನಡಾವಳಿ, ವೇತನ ಪಾವತಿ, ಹಾಜರಾತಿ ಆಧಾರದ ಮೇಲೆ ಜಿಲ್ಲಾ ಪಂಚಾಯಿತಿಯಿಂದ ಘಟನೋತ್ತರವಾಗಿ ಅನುಮೋದನೆ ನೀಡಲು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಿರ್ದೇಶಕರು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಆದೇಶಿಸಿದ್ದಾರೆ.

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ 2017ರ ಅಕ್ಟೋಬರ್ 31ಕ್ಕೂ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡ ಕರವಸೂಲಿಗಾರರು–940, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್– 1,231, ನೀರಗಂಟಿ– 12,348, ಸ್ವಚ್ಛತಾಗಾರರು –2,847, ಜವಾನ– 1,306 ಸೇರಿ ಒಟ್ಟು 18,672 ಸಿಬ್ಬಂದಿಗೆ ನಾನಾ ಕಾರಣಗಳಿಂದ ಜಿಲ್ಲಾ ಪಂಚಾಯಿತಿ ಅನುಮೋದನೆ ಸಿಕ್ಕಿರಲಿಲ್ಲ. ಇವರಲ್ಲಿ 11,543 ಸಿಬ್ಬಂದಿ ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದ ಕಾರಣಕ್ಕೆ ಅನುಮೋದನೆ ಬಾಕಿ ಉಳಿದಿತ್ತು.

ಹಲವು ಸೌಲಭ್ಯ: 'ಜಿಲ್ಲಾ ಪಂಚಾಯಿತಿ ಅನುಮೋದನೆ ನೀಡುವುದರಿಂದ ಕನಿಷ್ಠ ವೇತನ, ಸೇವಾ ಭದ್ರತೆ, ಅನುಕಂಪದ ಮೇಲೆ ಕುಟುಂಬಸ್ಥರನ್ನು ಕೆಲಸಕ್ಕೆ ನೇಮಕ, ಪಿಂಚಣಿ ಸೌಲಭ್ಯ, ಸಕಾಲದಲ್ಲಿ ವೇತನ, ರಜೆ ಸೌಲಭ್ಯ, ವೈದ್ಯಕೀಯ ಸೌಲಭ್ಯ ಹಾಗೂ ವಿದ್ಯಾರ್ಹತೆ ಗಳಿಸಿದರೆ ಕೆಲಸದಲ್ಲಿ ಬಡ್ತಿ ಸೇರಿ ಹಲವು ಸೌಲಭ್ಯಗಳು ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸಿಗಲಿವೆ' ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ. ನಾಡಗೌಡ ತಿಳಿಸಿದರು.

ವೇತನಕ್ಕೆ ಪರದಾಟ: 'ಗ್ರಾಮ ಪಂಚಾಯಿತಿ ವತಿಯಿಂದ ನೇಮಕಗೊಂಡ ನೀರಗಂಟಿ, ಜವಾನ, ಸ್ವಚ್ಛತಾಗಾರರಿಗೆ ಗ್ರಾಮ ಪಂಚಾಯಿತಿ ಆಂತರಿಕ ಸಂಪನ್ಮೂಲದಿಂದ ವೇತನ ನೀಡಲಾಗುತ್ತಿತ್ತು. ಕೆಲವೊಮ್ಮೆ ಹಣದ ಕೊರತೆಯಿಂದ ವೇತನ ಕೊಡುವುದು ಮೂರ್ನಾಲ್ಕು ತಿಂಗಳು ವಿಳಂಬವಾಗುತ್ತಿತ್ತು. ಇದರಿಂದ ಜೀವನ ನಿರ್ವಹಣೆಗೂ ತೊಡಕಾಗಿತ್ತು. ಈಗ ಸರ್ಕಾರ ಸೇವಾ ಭದ್ರತೆ ನೀಡಿರುವುದರಿಂದ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ' ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಅಂದಾನಪ್ಪ ಹೆಬಸೂರು ತಿಳಿಸಿದರು.

'ಕೆಲಸದ ಅವಶ್ಯವಿದ್ದಾಗ ಗ್ರಾಮ ಪಂಚಾಯಿತಿಯವರು ನಮ್ಮನ್ನು ನೇಮಿಸಿದ್ದರು. ಆದರೆ, ಕನಿಷ್ಠ ವಿದ್ಯಾರ್ಹತೆಯ ನೆಪವೊಡ್ಡಿ ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡಲು ಹಿಂದೇಟು ಹಾಕಿದ್ದರು. ಇದರಿಂದ ಕನಿಷ್ಠ ವೇತನ, ಸೇವಾ ಭದ್ರತೆ, ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿದ್ದೆವು. ಗ್ರಾಮಪಂಚಾಯಿತಿ ಅಧ್ಯಕ್ಷ ಮತ್ತು ಪಿಡಿಒ ಅವರು ಮನಬಂದಂತೆ ದುಡಿಸಿಕೊಳ್ಳುತ್ತಿದ್ದರು, ಬೇಡವಾದಾಗ ಕೆಲಸದಿಂದ ವಜಾ ಮಾಡುತ್ತಿದ್ದರು, ರಜೆ ಕೊಡದಂತೆ ಕಿರುಕುಳ ನೀಡುತ್ತಿದ್ದರು. ಈಗ ಸರ್ಕಾರದ ಆದೇಶದಿಂದ ನಮಗೆ ನೆಮ್ಮದಿ ಸಿಕ್ಕಂತಾಗಿದೆ' ಎಂದು ಜವಾನ ಮತ್ತು ಸ್ವಚ್ಛತಾಗಾರರು ತಿಳಿಸಿದರು.

> ಹಾವೇರಿಯ ವಿವಿಧ ಗ್ರಾ.ಪಂ.ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 264 ಸಿಬ್ಬಂದಿ ಹುದ್ದೆಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಅನುಮೋದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ
> **ಅಕ್ಷಯ ಶ್ರೀಧರ್**
> ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ

> ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡ ಸಿಬ್ಬಂದಿಗೆ ಸೇವಾ ಭದ್ರತೆ ಸೇರಿ ಹಲವು ಬೇಡಿಕೆ ಈಡೇರಿಕೆಗೆ ಪ್ರತಿಭಟನೆ ನಡೆಸಿದ್ದೆವು. ಹೋರಾಟಕ್ಕೆ ಜಯ ಸಂದಿದೆ
> **ಎಂ.ಬಿ.ನಾಡಗೌಡ,** ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷ

ಅನುಮೋದನೆಗೆ ಬಾಕಿ ಇರುವ ಗ್ರಾ.ಪಂ. ಸಿಬ್ಬಂದಿ ವಿವರ

ಜಿಲ್ಲೆ	ಸಿಬ್ಬಂದಿ	ಜಿಲ್ಲೆ	ಸಿಬ್ಬಂದಿ
ಬೆಂಗಳೂರು ಗ್ರಾಮಾಂತರ	452	ಬಳ್ಳಾರಿ	119
ಬೆಂಗಳೂರು ನಗರ	378	ವಿಜಯನಗರ	248
ಚಿಕ್ಕಬಳ್ಳಾಪುರ	785	ಬೀದರ್	168
ಚಿತ್ರದುರ್ಗ	450	ಕಲಬುರ್ಗಿ	460
ದಾವಣಗೆರೆ	193	ಕೊಪ್ಪಳ	382
ಕೋಲಾರ	1,017	ರಾಯಚೂರು	586
ರಾಮನಗರ	251	ಯಾದಗಿರಿ	205
ಶಿವಮೊಗ್ಗ	483	ಚಾಮರಾಜನಗರ	285
ತುಮಕೂರು	903	ಚಿಕ್ಕಮಗಳೂರು	348
ಬಾಗಲಕೋಟೆ	110	ದಕ್ಷಿಣ ಕನ್ನಡ	20
ಬೆಳಗಾವಿ	598	ಹಾಸನ	244
ಧಾರವಾಡ	176	ಕೊಡಗು	215
ಗದಗ	208	ಮಂಡ್ಯ	727
ಹಾವೇರಿ	264	ಮೈಸೂರು	863
ಉತ್ತರ ಕನ್ನಡ	190	ಉಡುಪಿ	76
ವಿಜಯಪುರ	218	ಒಟ್ಟು	11,622

ಬುಧವಾರ, ನವೆಂಬರ್ 22, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 322 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,930	19,783	₹63,210 (ಬೆಂಗಳೂರು)	₹75,300 (ಬೆಂಗಳೂರು)	83.28

ಗುತ್ತಿಗೆದಾರರಿಗೆ ತಕ್ಷಣ ಪಾವತಿಸಬೇಕಿರುವ ಮೊತ್ತವೇ ₹2,865 ಕೋಟಿ

ಅನುದಾನ ಮೀರಿ ಕಾಮಗಾರಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಬಸವರಾಜ ಬೊಮ್ಮಾಯಿ ನೇತೃತ್ವದ ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಲ್ಲಿ ಲಭ್ಯ ಇದ್ದ ಅನುದಾನಕ್ಕಿಂತ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಿದ ಪರಿಣಾಮ, ಸರ್ಕಾರ ಮೇಲೆ ₹2,865 ಕೋಟಿಗೂ ಹೆಚ್ಚು ಹೊರೆ ಬಿದ್ದಿದೆ.

ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನಕ್ಕಿಂತ ಶೇ 200ರಿಂದ 300ರಷ್ಟು ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಪೈಕಿ, ಕೆಲವು ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನೂ ಹಲವು ಮುಕ್ತಾಯದ ಹಂತದಲ್ಲಿವೆ.

ಪೂರ್ಣಗೊಂಡಿರುವ ಕಾಮಗಾರಿಗಳ ಬಾಕಿ ಬಿಲ್ ಪಾವತಿಸುವಂತೆ ಗುತ್ತಿಗೆದಾರರು ತೀವ್ರ ಒತ್ತಡ ಹೇರುತ್ತಿದ್ದು, ಪೂರಕ ಅನುದಾನದಲ್ಲಿ ಹೆಚ್ಚುವರಿ ಅನುದಾನ ನೀಡುವಂತೆ ಸಣ್ಣ ನೀರಾವರಿ ಇಲಾಖೆಯು ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಿದೆ. ಈ ಕಡತಕ್ಕೆ ಸಣ್ಣ ನೀರಾವರಿ ಸಚಿವ ಎನ್‌.ಎಸ್‌. ಬೋಸರಾಜು ಅನುಮೋದನೆ ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಇಲಾಖೆಯಲ್ಲಿ 2023 ಏಪ್ರಿಲ್ 1ಕ್ಕೆ ಒಟ್ಟು ₹11,238 ಕೋಟಿ ಮೊತ್ತದ ಕಾಮಗಾರಿಗಳ ಕಾರ್ಯಭಾರವಿತ್ತು. ಬಜೆಟ್‌ನಲ್ಲಿ ಹಿಂದಿನ ಬಿಜೆಪಿ ಸರ್ಕಾರ ಅನುದಾನ ಮೀಸಲಿಡದೆ ಕಾಮಗಾರಿಗೆ ಅನುಮೋದನೆ ನೀಡಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಬಸವರಾಜ ಬೊಮ್ಮಾಯಿ ಮಂಡಿಸಿದ ಬಜೆಟ್‌ನಲ್ಲಿ ಇಲಾಖೆಗೆ ₹2,269.95 ಕೋಟಿ ಅನುದಾನ ಒದಗಿಸಲಾಗಿತ್ತು. ಜುಲೈನಲ್ಲಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಈ ಅನುದಾನವನ್ನು ₹2,000.39 ಕೋಟಿಗೆ ಕಡಿತಗೊಳಿಸಲಾಗಿದೆ.

ಇಲಾಖೆಯು ಐದು ಪ್ರಧಾನ ರೀತಿಯ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ. ಕೆರೆಗಳ ಆಧುನೀಕರಣ ವಿಭಾಗದಲ್ಲಿ ಕೆರೆಗಳ ಏರಿ ಬಲಪಡಿಸುವುದು, ಕೋಡಿಯ ದುರಸ್ತಿ ಮತ್ತು ನಾಲೆಗಳ ಲೈನಿಂಗ್ ಇತ್ಯಾದಿ ಕಾಮಗಾರಿ ನಡೆಸಲಾಗುತ್ತಿದೆ. ಅಣೆಕಟ್ಟು ಮತ್ತು ಪಿಕಪ್ ವಿಭಾಗದಲ್ಲಿ ನದಿ, ಹಳ್ಳಗಳಿಗೆ ಅಡ್ಡಲಾಗಿ ಬಾಂದಾರ, ಸೇತುವೆ ಸಹಿತ ಬಾಂದಾರ, ಕಿಂಡಿ ಅಣೆಕಟ್ಟೆ, ಉಪ್ಪು ನೀರು ತಡೆಗೋಡೆ ಅಣೆಕಟ್ಟುಗಳ ನಿರ್ಮಾಣ ಮಾಡಲಾಗುತ್ತಿದೆ.

5ನೇ ಪುಟ ನೋಡಿ

₹700 ಕೋಟಿ ಬಾಕಿ: ಸಿ.ಎಂಗೆ ಖಾದರ್ ಪತ್ರ

ಸಣ್ಣ ನೀರಾವರಿ ಇಲಾಖೆಯಲ್ಲಿ ಮಂಗಳೂರು ವಿಭಾಗ ಒಂದರಲ್ಲಿಯೇ 2,500ಕ್ಕೂ ಹೆಚ್ಚು ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಹಲವು ಪಟ್ಟು ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಈ ವಿಭಾಗದಲ್ಲಿ ಅನುಮೋದನೆ ನೀಡಿರುವುದರಿಂದ ಸುಮಾರು ₹700 ಕೋಟಿ ಮೊತ್ತದ ಬಿಲ್ ಪಾವತಿಗೆ ಬಾಕಿ ಇದೆ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ನ.2ರಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

2020–21ರಿಂದ 2022–23ನೇ ಸಾಲಿನ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಪತ್ರ ಬರೆದಿರುವ ಅವರು, ಬಲಿಷ್ಠ ಗುತ್ತಿಗೆದಾರರು ಪ್ರತಿವರ್ಷ 10ರಿಂದ 15 ಕಾಮಗಾರಿಗಳನ್ನು ಪಡೆದಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಗುತ್ತಿಗೆದಾರರು ವರ್ಷಕ್ಕೆ ಒಂದು ಕಾಮಗಾರಿ ಮಾತ್ರ ಪಡೆದಿದ್ದಾರೆ. ಕೆಲವು ಗುತ್ತಿಗೆದಾರರು ಬಲಿಷ್ಠ ಗುತ್ತಿಗೆದಾರರ ಹೆಸರಿನಲ್ಲಿ ಬಂಡವಾಳ ಹೂಡಿಕೆ ಮಾಡಿ ಕಾಮಗಾರಿ ಪಡೆದಿದ್ದಾರೆ. ಬಲಿಷ್ಠ ಗುತ್ತಿಗೆದಾರರು ತಮ್ಮ ಪ್ರಭಾವ ಬಳಸಿ ಪ್ರತಿ ತಿಂಗಳು ಬಿಡುಗಡೆಯಾದ ಹಣದಲ್ಲಿ ಗರಿಷ್ಠ ಮೊತ್ತ ಪಡೆಯುತ್ತಿದ್ದಾರೆ. ಹೀಗಾಗಿ, ಪ್ರತಿ ತಿಂಗಳು ಬರುವ ಎಲ್‌ಒಸಿಯಲ್ಲಿ (ಹಣ ಭರವಸೆ ಪತ್ರ) ಆರ್ಥಿಕವಾಗಿ ಹಿಂದುಳಿದ ಗುತ್ತಿಗೆದಾರರಿಗೆ ಮತ್ತು ವರ್ಷಕ್ಕೆ ಒಂದು ಕಾಮಗಾರಿ ಪಡೆದ ಗುತ್ತಿಗೆದಾರರಿಗೆ ಆದ್ಯತೆಯಲ್ಲಿ ಹಣ ಪಾವತಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಕೋರಿದ್ದಾರೆ.

ಸಭಾಧ್ಯಕ್ಷರು ಪತ್ರದಲ್ಲಿ ಉಲ್ಲೇಖಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡುವಂತೆ ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ.



ಬಜೆಟ್‌ನಲ್ಲಿ ಹಣ ಮೀಸಲಿಟ್ಟು ಕಾಮಗಾರಿ ಮಾಡುವುದು ಕಷ್ಟಕರ. ಹಣಕಾಸು ಇಲಾಖೆ ಒಪ್ಪಿಗೆ ಪಡೆದೇ ಕೆಲಸ ಮಾಡಿಸಲಾಗಿದೆ. ಈಗ ಸರ್ಕಾರದ ಬಳಿ ಹಣ ಇಲ್ಲದೆ ಬಿಲ್ ಪಾವತಿಸಲು ಸಬೂಬು ಹೇಳುತ್ತಿದ್ದಾರೆ. ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಹಿಂದಿನ ಸರ್ಕಾರಗಳು ಬಿಟ್ಟು ಹೋಗಿದ್ದ ಬಿಲ್‌ಗಳನ್ನು ನಮ್ಮ ಸರ್ಕಾರದ ಅವಧಿಯಲ್ಲಿ ಪಾವತಿಸಿಲ್ಲವೆ?

ಜೆ.ಸಿ. ಮಾಧುಸ್ವಾಮಿ, ಮಾಜಿ ಸಚಿವ



ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಮೊತ್ತ ಇನ್ನೂ ಜಾಸ್ತಿ ಇದೆ. ಹೀಗಾಗಿ, ಪೂರಕ ಅಂದಾಜಿನಲ್ಲಿ ಹೆಚ್ಚುವರಿ ಅನುದಾನ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೇಳಿದ್ದೇವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಬಜೆಟ್‌ನಲ್ಲಿ ಅನುದಾನ ಮೀಸಲಿಡದೆ, ಚುನಾವಣಾ ವರ್ಷದಲ್ಲಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ

ಎನ್‌.ಎಸ್‌. ಬೋಸರಾಜು, ಸಚಿವ, ಸಣ್ಣ ನೀರಾವರಿ

ಬಾಕಿ ಬಿಲ್‌ಗಳ ವಿವರ

ಯಾವ ಕಾಮಗಾರಿ	ಎಷ್ಟು ಬಾಕಿ (₹ ಕೋಟಿಗಳಲ್ಲಿ)
ಕೆರೆಗಳ ಆಧುನೀಕರಣ	502
ಅಣೆಕಟ್ಟು ಮತ್ತು ಪಿಕಪ್	855
ಏತನೀರಾವರಿ ಯೋಜನೆ	735
ಪಶ್ಚಿಮವಾಹಿನಿ	453
ಪ್ರವಾಹ ನಿಯಂತ್ರಣ ಸಣ್ಣ ಕಾಮಗಾರಿಗಳು	320
ಒಟ್ಟು	2,865



ಎಂಡೊಸ್ಕೋಪಿಕ್ ಕ್ಯಾಮೆರಾದಲ್ಲಿ ಸೆರೆಯಾದ ಕಾರ್ಮಿಕರ ದೃಶ್ಯಗಳು –ಪಿಟಿಐ ಚಿತ್ರ

ಕಾರ್ಮಿಕರು ಸುರಕ್ಷಿತ: ಕ್ಯಾಮೆರಾದಲ್ಲಿ ದೃಶ್ಯ ಸೆರೆ

ಸುರಂಗದಿಂದ ಭರವಸೆ ಬೆಳಕು

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿರುವ 41 ಮಂದಿ ಕಾರ್ಮಿಕರ ದೃಶ್ಯಗಳನ್ನು ಎಂಡೊಸ್ಕೋಪಿಕ್ ಕ್ಯಾಮೆರಾ ಸೆರೆ ಹಿಡಿದಿದೆ. ಈ ಕಾರ್ಮಿಕರು ಸುರಂಗದಲ್ಲಿ ಸಿಲುಕಿದ ನಂತರದಲ್ಲಿ ದೊರೆತಿರುವ ಮೊದಲ ದೃಶ್ಯಾವಳಿ ಇದು.

ಕಾರ್ಮಿಕರ ಸುರಕ್ಷತೆಯ ಬಗ್ಗೆ ಆತಂಕಗೊಂಡಿರುವ ಅವರ ಹತ್ತಿರದ ಸಂಬಂಧಿಗಳಲ್ಲಿ ಇದು ಆಶಾಭಾವನೆಯನ್ನು ಮೂಡಿಸಿದೆ. ಕಾರ್ಮಿಕರ ರಕ್ಷಣೆಗೆ ಹಲವು ಆಯಾಮಗಳಿಂದ ನಡೆಯುತ್ತಿರುವ ಕಾರ್ಯಗಳು 10ನೆಯ ದಿನ ಪ್ರವೇಶಿಸಿವೆ. ಸುರಂಗದ ಒಳಕ್ಕೆ ಸೋಮವಾರ ತೂರಿಸಿರುವ ಆರು ಇಂಚು ವ್ಯಾಸದ ಪೈಪ್ ಮೂಲಕ ಈ ಕ್ಯಾಮೆರಾ ಕಳುಹಿಸಲಾಗಿತ್ತು.

ಹಳದಿ ಮತ್ತು ಬಿಳಿ ಬಣ್ಣದ ಹೆಲ್ಮೆಟ್ ಧರಿಸಿರುವ ಕಾರ್ಮಿಕರು, ಪೈಪ್ ಮೂಲಕ ಕಳುಹಿಸಿದ ಆಹಾರ ಸ್ವೀಕರಿಸುತ್ತಿರುವುದನ್ನು ಹಾಗೂ ಪರಸ್ಪರ ಮಾತಿನಲ್ಲಿ ತೊಡಗಿರುವುದನ್ನು ಕ್ಯಾಮೆರಾ ಸೆರೆ ಹಿಡಿದಿದೆ. ಕಾರ್ಮಿಕರ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳು ಈ ದೃಶ್ಯಾವಳಿಯನ್ನು ಬಿಡುಗಡೆ ಮಾಡಿವೆ.

7ನೇ ಪುಟ ನೋಡಿ

ಅಡ್ಡವಾಗಿ ಸುರಂಗ ಕೊರೆಯುವುದಕ್ಕೆ ಆದ್ಯತೆ

ನವದೆಹಲಿ (ಪಿಟಿಐ): ಸುರಂಗದಲ್ಲಿ ಸಿಲುಕಿರುವ ಎಲ್ಲ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ತರಲು ಅಡ್ಡವಾಗಿ ಸುರಂಗ ಕೊರೆಯುವುದಕ್ಕೆ ಆದ್ಯತೆ ನೀಡಲಾಗಿದೆ, ಲಂಬವಾಗಿ ಸುರಂಗ ಕೊರೆಯುವುದು ಎರಡನೆಯ ಆಯ್ಕೆಯಾಗಿರುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಕ್ಷಣಾ ಕಾರ್ಯಗಳ ಬಗ್ಗೆ ಸುದ್ದಿಗಾರರಿಗೆ ವಿವರ ನೀಡಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎನ್‌ಡಿಎಂಎ) ಸದಸ್ಯ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತ್ತಾ ಹಸ್ನೈನ್ ಅವರು, ಕಾರ್ಮಿಕರ ರಕ್ಷಣೆಗೆ ಐದು ಕಡೆಗಳಿಂದ ಏಕಕಾಲಕ್ಕೆ ಪ್ರಯತ್ನಗಳು ನಡೆದಿವೆ ಎಂದು ತಿಳಿಸಿದರು.

ನೆಲದ ಅಡಿಯಲ್ಲಿನ ಕಲ್ಲುಗಳು ಲಂಬವಾಗಿ ಸುರಂಗ ಕೊರೆಯುವುದಕ್ಕೆ ಅಡ್ಡಿಯಾಗಿವೆ. ಹೀಗಾಗಿ ಅಡ್ಡವಾಗಿ ಸುರಂಗ ಕೊರೆಯುವ ಕೆಲಸಕ್ಕೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು. 'ಲಂಬವಾಗಿ ಸುರಂಗ ಕೊರೆಯುವುದು ಈಗಿನ ಪರಿಸ್ಥಿತಿಯಲ್ಲಿ ಎರಡನೆಯ ಅತ್ಯುತ್ತಮ ಆಯ್ಕೆ' ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್ ಹೇಳಿದ್ದಾರೆ.

ರಜನೀಶ್ ಗೋಯಲ್ ಹೊಸ ಸಿಎಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರನ್ನು ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಈ ಆದೇಶ ಹೊರಡಿಸಿದೆ. ಹಾಲಿ ಮುಖ್ಯ-ಕಾರ್ಯದರ್ಶಿ ವಂದಿತಾ ಶರ್ಮಾ ಅವರ ಅವಧಿ ಇದೇ 30ಕ್ಕೆ ಕೊನೆಗೊಳ್ಳಲಿದೆ. ಇದೇ 29ಕ್ಕೆ ರಜನೀಶ್ ಗೋಯಲ್ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಗೋಯಲ್ ಅವರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಜನೀಶ್ ಅವರು ಸೇವಾ ಜ್ಯೇಷ್ಠತೆ ಆಧಾರದಲ್ಲಿ ಈ ಹುದ್ದೆಗೆ ನಿಯೋಜಿತಗೊಂಡಿದ್ದಾರೆ. 1986ರ ಬ್ಯಾಚ್‌ನ ಇವರ ಅಧಿಕಾರ ಅವಧಿ ಕೇವಲ ಏಳು ತಿಂಗಳು.

ತಾರಾ ಹೋಟೇಲ್ ಮಾದರಿ • ಅಂದಾಜು ₹300 ಕೋಟಿ ವೆಚ್ಚ?

ಬೆಳಗಾವಿಯಲ್ಲೂ ಶಾಸಕರ ಭವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಸುವರ್ಣ ವಿಧಾನಸೌಧದ ಪಕ್ಕದಲ್ಲೇ ಶಾಸಕರ ಭವನದ ಮಾದರಿಯಲ್ಲಿ ವಸತಿ ಸಂಕೀರ್ಣ ನಿರ್ಮಿಸುವ ಬಗ್ಗೆ ವಿಧಾನಸಭೆಯ ಸಚಿವಾಲಯ ಚಿಂತನೆ ನಡೆಸಿದ್ದು, ಈ ಕುರಿತು ಸರ್ಕಾರದ ಮುಂದೆ ಪ್ರಸ್ತಾವ ಮಂಡಿಸಲಿದೆ.

ಬೆಳಗಾವಿ ಅಧಿವೇಶನದ ಕುರಿತು ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆದಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

'ಅಧಿವೇಶನದ ಸಂದರ್ಭದಲ್ಲಿ ಖಾಸಗಿ ಹೋಟೆಲ್‌ಗಳಿಗೆ ಬಾಡಿಗೆ ನೀಡಲು ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ. ಸುವರ್ಣ ವಿಧಾನಸೌಧದ ಆವರಣದಲ್ಲಿ ಸಾಕಷ್ಟು ಭೂಮಿ ಲಭ್ಯತೆ ಇರುವುದರಿಂದ ಉತ್ತಮ ಗುಣಮಟ್ಟದ ವಸತಿ ವ್ಯವಸ್ಥೆ ಮಾಡಬಹುದು. ಅಧಿವೇಶನದ ವೇಳೆಯಲ್ಲಿ ಮಾತ್ರ ನಮಗೆ ಬಿಟ್ಟು ಕೊಡಬೇಕು. ಉಳಿದ ಸಮಯದಲ್ಲಿ ಕೆಎಸ್‌ಟಿಡಿಸಿ ಅಥವಾ ಖಾಸಗಿಯವರ ಮೂಲಕ ನಿರ್ವಹಣೆ ಮಾಡಬೇಕು. ತಾರಾ ಹೋಟೆಲ್ ಮಾದರಿಯಲ್ಲಿ ನಿರ್ಮಿಸಬೇಕು ಎಂಬ ಚಿಂತನೆ ಇದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಶಾಸಕರಿಗೆ ಮಾತ್ರ ನಿರ್ಮಿಸಬೇಕೆ? ಅಧಿಕಾರಿಗಳಿಗೂ ನಿರ್ಮಿಸಬೇಕೆ? ಮಾಧ್ಯಮ ಮತ್ತು ಇತರ ವರ್ಗದ ಸಿಬ್ಬಂದಿಗೂ ವ್ಯವಸ್ಥೆ ಮಾಡಬೇಕೆ ಎಂಬ ಬಗ್ಗೆ ಸ್ಪಷ್ಟತೆ ಬರಬೇಕು. ಶಾಸಕರು ಬೆಳಗಾವಿ ನಗರದಲ್ಲಿರುವ ಐಷಾರಾಮಿ ಹೋಟೆಲ್‌ಗಳಲ್ಲಿ ಉಳಿಯುವುದಾದರೆ ಏನು ಮಾಡಬೇಕು ಮತ್ತಿತರ ವಿಷಯಗಳ ಚರ್ಚೆ ನಡೆದಿದೆ. ಹೋಟೆಲ್ ಮಾದರಿಯ ವಸತಿ ಸಂಕೀರ್ಣಕ್ಕೆ ಸುಮಾರು ₹300 ಕೋಟಿ ಬೇಕಾಗಬಹುದು. ಇದನ್ನು ನಿರ್ಮಿಸಿದರೆ, ಬಾಕಿ ದಿನಗಳಲ್ಲಿ ಅಲ್ಲಿ ಎಷ್ಟು ಮಂದಿ ಉಳಿದುಕೊಳ್ಳಲು ಬರುತ್ತಾರೆ, ಅಲ್ಲಿ ವ್ಯವಹಾರ ಹೇಗೆ ನಡೆಯುತ್ತದೆ ಎಂಬ ಸ್ಪಷ್ಟತೆ ಬೇಕಿದೆ' ಎಂದರು.

ಅಧಿವೇಶನದ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. 2021ರಲ್ಲಿ ₹17 ಕೋಟಿ ಆಗಿದ್ದರೆ, 2022ರಲ್ಲಿ ₹37 ಕೋಟಿಗೆ ಏರಿಕೆ ಆಗಿತ್ತು. ಕಳೆದ ವರ್ಷ ಶಾಸಕರು, ಅಧಿಕಾರಿಗಳು, ಮಾಧ್ಯಮ ಮತ್ತು ಇತರೆ ಸಿಬ್ಬಂದಿಗೆ ಒಟ್ಟು 2,000 ಕೊಠಡಿ ವ್ಯವಸ್ಥೆ ಮಾಡಲಾಗಿತ್ತು. ಬೆಳಗಾವಿಯಲ್ಲಿರುವ 80 ಹೋಟೆಲ್‌ಗಳ ಪೈಕಿ 67 ಹೋಟೆಲ್‌ಗಳು ಐಷಾರಾಮಿ ವ್ಯವಸ್ಥೆಯನ್ನು ಹೊಂದಿವೆ. ಕಳೆದ ವರ್ಷ ಈ ಹೋಟೆಲ್‌ಗಳ ಬಿಲ್ ₹6 ಕೋಟಿ ಆಗಿತ್ತು ಎಂದು ಸಚಿವಾಲಯದ ಮೂಲಗಳು ಹೇಳಿವೆ.

ಬಳಕೆ ಕಡಿಮೆ; ಖರ್ಚು ಜಾಸ್ತಿ

ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣಕ್ಕೆ (2007) ತೀರ್ಮಾನಿಸಲಾಯಿತು. ಆಗ ಮುಖ್ಯಮಂತ್ರಿ ಆಗಿದ್ದ ಎಚ್‌.ಡಿ.ಕುಮಾರಸ್ವಾಮಿ ವ್ಯಾಕ್ಸಿನ್ ಡಿಪೋ ಬಳಿ ಇದಕ್ಕಾಗಿ ಶಂಕುಸ್ಥಾಪನೆ ನೆರವೇರಿಸಿದರು. 2009ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರು ಸ್ಥಳ ಬದಲಿಸಿ, ಹಲಗಾ ಬಳಿ ಮತ್ತೊಮ್ಮೆ ಶಂಕುಸ್ಥಾಪನೆ ನೆರವೇರಿಸಿದರು.

ನಾಲ್ಕು ಎಕರೆ ಪ್ರದೇಶದಲ್ಲಿ 4 + 1 ಮಾದರಿಯ ಬಹು ಮಹಡಿಯ ಕಟ್ಟಡ ನಿರ್ಮಾಣಕ್ಕೆ ಆದ ವೆಚ್ಚ ₹438 ಕೋಟಿ. ಒಂದೆರಡು ಸರ್ಕಾರಿ ಕಚೇರಿ ಮತ್ತು ಬ್ಯಾಂಕ್ ಶಾಖೆಯೊಂದನ್ನು ಹೊರತುಪಡಿಸಿ, ಉಳಿದ ಎಲ್ಲ ಕೊಠಡಿಗಳು ಅಧಿವೇಶನದ ಸಂದರ್ಭದಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತವೆ. ಉಳಿದಂತೆ ವರ್ಷವಿಡೀ ಮುಚ್ಚಿರುತ್ತವೆ. ಅಧಿವೇಶನದ ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ಇದರ ಸ್ವಚ್ಛತೆ ಮತ್ತು ನಿರ್ವಹಣೆಗೆ ವರ್ಷಕ್ಕೆ ₹5 ಕೋಟಿಯಿಂದ ₹7 ಕೋಟಿ ಬೇಕಾಗುತ್ತದೆ.

ವಿದ್ಯುತ್ ಅವಘಡದಿಂದ ತಾಯಿ–ಮಗು ಮೃತಪಟ್ಟ ಪ್ರಕರಣ

ನಾಲ್ಕು ವಿಧಗಳಲ್ಲಿ ತನಿಖೆ: ಜಾರ್ಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿಯಲ್ಲಿ ವಿದ್ಯುತ್ ಅವಘಡದಿಂದ ತಾಯಿ- ಮಗು ಸಾವು ಕಂಡ ಪ್ರಕರಣದ ತನಿಖೆಯನ್ನು ನಾಲ್ಕು ವಿಧಗಳಲ್ಲಿ ನಡೆಸಲು ಆದೇಶಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಸ್ಕಾಂ, ಪೊಲೀಸ್ ಇಲಾಖೆ ಹಾಗೂ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟೊರೇಟ್‌ನಿಂದ ತನಿಖೆ ನಡೆಸಲಾಗುತ್ತಿದೆ. ಅಲ್ಲದೆ, ಕೆಪಿಟಿಸಿಎಲ್ (ಪ್ರಸರಣ) ನಿವೃತ್ತ ನಿರ್ದೇಶಕ ಎಸ್. ಸುಮಂತ್, ಆರ್‌ಟಿ ಆ್ಯಂಡ್ ಆರ್ ಆ್ಯಂಡ್ ಡಿ ಮುಖ್ಯ ಎಂಜಿನಿಯರ್ ಬಿ.ವಿ.ಗಿರೀಶ್, ಸಿಪಿಆರ್‌ಐ ಜಂಟಿ ನಿರ್ದೇಶಕ ಪ್ರಭಾಕರ್, ಬೆಂಗಳೂರು ಪೂರ್ವ ವಿಭಾಗದ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕ ಜಿ. ರವಿಕುಮಾರ್ ಅವರನ್ನೊಳಗೊಂಡ ಸ್ವತಂತ್ರ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯ ಮೂಲಕವೂ ತನಿಖೆ ನಡೆಸಲಾಗುತ್ತಿದೆ' ಎಂದರು.

'ತನಿಖಾ ಸಮಿತಿಗಳಿಗೆ ವರದಿ ನೀಡಲು ಕಾಲಮಿತಿ ನಿಗದಿಪಡಿಸಲಾಗಿದೆ. ವರದಿಗಳ ಆಧಾರದಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ವಿವರಿಸಿದರು.

5ನೇ ಪುಟ ನೋಡಿ

ವರದಿ ಸಲ್ಲಿಸಲು ರಾಜ್ಯಕ್ಕೆ ತಾಕೀತು

ನವದೆಹಲಿ: ಬೆಂಗಳೂರಿನಲ್ಲಿ ವಿದ್ಯುತ್ ತಂತಿ ತುಳಿದು ತಾಯಿ – ಮಗು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಮಾನವ ಹಕ್ಕು ಆಯೋಗವು (ಎನ್‌ಎಚ್‌ಆರ್‌ಸಿ) ಕರ್ನಾಟಕ ಸರ್ಕಾರದಿಂದ ವರದಿ ಕೇಳಿದೆ. 'ಇಂಧನ ಇಲಾಖೆಯ ನಿರ್ಲಕ್ಷ್ಯವೇ ಈ ಅವಘಡಕ್ಕೆ ಕಾರಣ' ಎಂದೂ ಹೇಳಿದೆ.

ವೈಟ್‌ಫೀಲ್ಡ್‌ನ ಹೋಪ್ ಫಾರ್ಮ್ ಬಳಿ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ವಿದ್ಯುತ್ ಹರಿಯುತ್ತಿದ್ದ ತಂತಿಯನ್ನು ತುಳಿದು 23 ವರ್ಷದ ತಾಯಿ ಹಾಗೂ ಒಂಬತ್ತು ತಿಂಗಳ ಮಗು ಮೃತಪಟ್ಟಿದ್ದರು. ಮಾಧ್ಯಮ ವರದಿಗಳ ಆಧಾರದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಆಯೋಗವು, ನಾಲ್ಕು ವಾರಗಳ ಒಳಗೆ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದೆ.

ಪ್ರಕರಣದ ಎಫ್‌ಐಆರ್, ತನಿಖಾ ಪ್ರಗತಿ, ದುರಂತಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳು, ಮೃತರ ಸಂಬಂಧಿಕರಿಗೆ ಪರಿಹಾರ ನೀಡಿದ್ದರೆ ಈ ಬಗ್ಗೆ ವಿವರವು ವರದಿಯಲ್ಲಿರಬೇಕು ಎಂದು ಆಯೋಗ ತಿಳಿಸಿದೆ. ಇದು ಮಾನವ ಹಕ್ಕು ಉಲ್ಲಂಘನೆಯ ಗಂಭೀರ ಘಟನೆ. ಇದು ಕಳವಳಕಾರಿ ಸಂಗತಿ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದೂ ಆಯೋಗ ಹೇಳಿದೆ.

ಜಾತಿಗಣತಿ: ನಿರ್ಧಾರ ಅಚಲ- ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಸರ್ಕಾರದ ಅವಧಿಯಲ್ಲಿ ನಡೆಸಿದ ಸಾಮಾಜಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಸ್ವೀಕರಿಸುವ ನನ್ನ ನಿರ್ಧಾರ ಅಚಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಎಚ್‌. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಮೀಕ್ಷೆಯೇ (ಜಾತಿಗಣತಿ) ಅವೈಜ್ಞಾನಿಕವಾಗಿದ್ದು, ಅದನ್ನು ಸ್ವೀಕರಿಸಬಾರದು ಎಂದು ಲಿಂಗಾಯತ ಮತ್ತುಒಕ್ಕಲಿಗ ಸಮುದಾಯಗಳನ್ನು ಪ್ರತಿನಿಧಿಸುವ ಸಂಘಟನೆಗಳು ಆಗ್ರಹಪಡಿಸುತ್ತಿವೆ. ಮುಖ್ಯಮಂತ್ರಿ ಅವರನ್ನು ಮಂಗಳವಾರ ಭೇಟಿ ಮಾಡಿದ್ದ ಒಕ್ಕಲಿಗರ ಸಂಘದ ಪದಾಧಿಕಾರಿಗಳು, ಸಮುದಾಯದ ಸ್ವಾಮೀಜಿಗಳು, ರಾಜಕೀಯ ನೇತಾರರು ಸಹಿ ಹಾಕಿರುವ ಆಕ್ಷೇಪ ಪತ್ರವನ್ನು ನೀಡಿದ್ದರು. ಈ ಪತ್ರಕ್ಕೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಸಿ. ಸುಧಾಕರ್, ಎನ್‌. ಚಲುವರಾಯಸ್ವಾಮಿ ಕೂಡ ಸಹಿ ಮಾಡಿದ್ದಾರೆ.

ಈ ಬೆಳವಣಿಗೆಗಳ ಬೆನ್ನಲ್ಲೇ, ತಮ್ಮ 'ಎಕ್ಸ್' ಖಾತೆಯಲ್ಲಿ ಜಾತಿಗಣತಿ ವರದಿ ಬಗೆಗಿನ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. 'ನಮ್ಮ ನಾಯಕರಾದ ರಾಹುಲ್ ಗಾಂಧಿಯವರ ನಿಲುವಿಗೆ ನನ್ನ ಸಹಮತವಿದೆ. ದೇಶದಾದ್ಯಂತ ಜಾತಿಗಣತಿ ನಡೆದು, ಅದರ ವರದಿಯ ಆಧಾರದ ಮೇಲೆ 'ಸರ್ವರಿಗೂ ಸಮಪಾಲು - ಸರ್ವರಿಗೂ ಸಮಬಾಳು' ದಕ್ಕಿದಾಗಲೇ ದೇಶಕ್ಕೆ ದೊರೆತ ಸ್ವಾತಂತ್ರ್ಯ ಸಾರ್ಥಕವಾಗಲಿದೆ ಎಂಬುದು ನನ್ನ ಭಾವನೆ. ನಮ್ಮ ಸರ್ಕಾರದ ಹಿಂದಿನ ಅವಧಿಯಲ್ಲಿ ನಡೆಸಿದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ ಸ್ವೀಕರಿಸಿ, ಅವಕಾಶಗಳಿಂದ ವಂಚಿತವಾದ ಸಮುದಾಯಗಳಿಗೆ ನ್ಯಾಯ ಕೊಡಿಸುವ ನನ್ನ ನಿರ್ಧಾರ ಅಚಲವಾಗಿದೆ' ಎಂದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಂಡುಕೋರರು-ಇಸ್ರೇಲ್ ನಡುವೆ ಸಂಧಾನ ಬಹುತೇಕ ಯಶಸ್ವಿ

ಹಮಾಸ್: ಒತ್ತೆಯಾಳುಗಳ ಬಿಡುಗಡೆ ಶೀಘ್ರ?

ಗಾಜಾಪಟ್ಟಿ (ಎಎಫ್‌ಪಿ): ಯುದ್ಧಬಾಧಿತ ಗಾಜಾದಲ್ಲಿ ಹಮಾಸ್‌ನ ಬಂಡುಕೋರರು ಇರಿಸಿಕೊಂಡಿರುವ ಒತ್ತೆಯಾಳುಗಳ ಬಿಡುಗಡೆಗೆ ಕಾಲ ಸನ್ನಿಹಿತವಾಗಿದೆ ಎನ್ನುವ ಭರವಸೆ ಮಂಗಳವಾರ ಮೂಡಿದೆ.

ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸಿದ್ದ, ಹಮಾಸ್ ಮುಖಂಡರೊಬ್ಬರು, ಸಂಧಾನದ ಸಾಧ್ಯತೆ ನಿಚ್ಚಳವಾಗಿದೆ ಎಂದಿದ್ದಾರೆ.

'ಒತ್ತೆಯಾಳುಗಳ ಬಿಡುಗಡೆ ವಿಚಾರದಲ್ಲಿ ಪ್ರಗತಿ ಕಂಡು ಬಂದಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಹಮಾಸ್‌ನ ನಾಯಕ ಇಸ್ಮಾಯಿಲ್ ಹನಿಯೇಹ್ ಸಹ, 'ನಾವು ಸಂಧಾನ ಪ್ರಕ್ರಿಯೆಯ ಕಡೇ ಹಂತದಲ್ಲಿದ್ದೇವೆ' ಎಂದು ತಿಳಿಸಿದ್ದಾರೆ.

ಅಮೆರಿಕದ ಅಧಿಕಾರಿಯೊಬ್ಬರನ್ನು ಉಲ್ಲೇಖಿಸಿ ಸಿಎನ್‌ಎನ್ ಸುದ್ದಿವಾಹಿನಿಯು, 'ಸಂಧಾನ ಬಹುತೇಕ ಆಗಿದೆ. ಕತಾರ್ ಈ ಕುರಿತಂತೆ ಅಂತಿಮ ಘೋಷಣೆ ಮಾಡಬಹುದು' ಎಂದು ವರದಿ ಮಾಡಿದೆ.

ಹಮಾಸ್‌ನಿಂದ ಒತ್ತೆಯಾಳುಗಳು ಹಾಗೂ ಇಸ್ರೇಲ್‌ನಿಂದ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆಗೆ ಒಪ್ಪಂದವಾಗುವ ಸಾಧ್ಯತೆಗಳಿವೆ. ಜೊತೆಗೆ ಮಾನವೀಯ ನೆರವು ಒದಗಿಸಲು ತಾತ್ಕಾಲಿಕ ಕದನ ವಿರಾಮ ಘೋಷಿಸಬಹುದು ಎಂದು ತಿಳಿಸಿವೆ.

'ರಾಜಿ ಪ್ರಕ್ರಿಯೆ ಬಹುತೇಕ ಮುಗಿದಿದೆ. ಕೆಲ ತಾಂತ್ರಿಕ ಅಂಶಗಳಷ್ಟೇ ಇತ್ಯರ್ಥಗೊಳ್ಳಬೇಕಿದೆ' ಎಂದು ಕತಾರ್ ಭಾನುವಾರ ಪ್ರತಿಕ್ರಿಯಿಸಿತ್ತು.

ಕೈದಿಗಳ ವಿನಿಮಯ ಮತ್ತು ಒತ್ತೆಯಾಳುಗಳ ಬಿಡುಗಡೆ ಕಾರ್ಯದಲ್ಲಿ ಸಾಮಾನ್ಯವಾಗಿ ಭಾಗಿಯಾಗುವ ಅಂತರರಾಷ್ಟ್ರೀಯ ಸಮಿತಿ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಕತಾರ್‌ನಲ್ಲಿ ಹನಿಯೇಹ್ ಅವರನ್ನು ಭೇಟಿಯಾಗಿದ್ದರು ಎಂದು ಹೇಳಿದ್ದು, ಭರವಸೆಯನ್ನು ಹೆಚ್ಚಿಸಿತ್ತು.

4ನೇ ಪುಟ ನೋಡಿ



ಗಾಜಾದಲ್ಲಿ ಒತ್ತೆಯಾಳಾಗಿರುವ ಇಸ್ರೇಲಿಯನ್ನರ ಬಿಡುಗಡೆಗೆ ಆಗ್ರಹಪಡಿಸಿ ಟೆಲ್ ಅವೀವ್‌ನಲ್ಲಿ ಇರುವ ಯುನಿಸೆಫ್ ಕಚೇರಿಯ ಎದುರು ಒತ್ತೆಯಾಳುಗಳ ಕುಟುಂಬ ಸದಸ್ಯರು ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಪ್ಯಾಲೆಸ್ಟೀನ್‌–ಇಸ್ರೇಲ್ ಸಂಘರ್ಷ ಶಮನಕ್ಕೆ ಮಾತುಕತೆ ಮತ್ತು ಒತ್ತೆಯಾಳುಗಳ ಬಿಡುಗಡೆಯೇ ಪರಿಹಾರ

ಷಿ ಜಿನ್‌ಪಿಂಗ್, ಚೀನಾ ಅಧ್ಯಕ್ಷ

ಹಂಸಾಗೆ ‘ಇಂದಿರಾ ರತ್ನ’ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 2023ನೇ ಸಾಲಿನ ‘ಇಂದಿರಾ ರತ್ನ ಪ್ರಶಸ್ತಿ’ಗೆ ಕವಯತ್ರಿ ಆರ್. ಹಂಸಾ ಆಯ್ಕೆಯಾಗಿದ್ದಾರೆ.

‘ಪ್ರಶಸ್ತಿಯು ₹5 ಸಾವಿರ ನಗದು, ಸ್ಮರಣ ಫಲಕವನ್ನೊಳಗೊಂಡಿದೆ. ಆರ್. ಹಂಸಾ ಅವರು ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದು, ಕವಯತ್ರಿಯಾಗಿ ಮಾಡಿದ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆಯ್ಕೆ ಸಮಿತಿಯಲ್ಲಿ ಲೇಖಕಿಯರ ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಖಜಾಂಚಿ ಮಂಜುಳಾ ಶಿವಾನಂದ ಕಾರ್ಯಕಾರಿ ಸಮಿತಿಯ ಸದಸ್ಯರಿದ್ದರು’ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ತಿಳಿಸಿದ್ದಾರೆ.


ಆರ್. ಹಂಸಾ

‘ಇದೇ 24ರಂದು ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಿರೂಪಕಿ ಅಪರ್ಣಾ ವಸ್ತಾರೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿ.ವಿ. ಪುರ ‘ಫುಡ್ ಸ್ಟ್ರೀಟ್’: ಕಾಮಗಾರಿ ವಿಳಂಬ, ವ್ಯಾಪಾರಿಗಳಿಗೆ ಸಂಕಷ್ಟ

‘ತಿಂಡಿ ಬೀದಿ’: ಆರು ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿ.ವಿ ಪುರದಲ್ಲಿರುವ ತಿಂಡಿ ಬೀದಿ (ಫುಡ್ ಸ್ಟ್ರೀಟ್) ಹೊಸತನದೊಂದಿಗೆ ಆರಂಭವಾಗಲು ಇನ್ನೂ ಆರು ವಾರ ಕಾಯಬೇಕು ಎಂದು ಬಿಬಿಎಂಪಿ ಹೊಸ ಗಡುವು ನೀಡಿದೆ.

ಕಮರ್ಷಿಯಲ್ ಸ್ಟ್ರೀಟ್ ಹಾಗೂ ಚರ್ಚ್ ಸ್ಟ್ರೀಟ್‌ಗಿಂತ ಭಿನ್ನವಾಗಿ ತಿಂಡಿ ಬೀದಿಯನ್ನು ನಿರ್ಮಿಸುವ ಯೋಜನೆಯೊಂದಿಗೆ ಕಳೆದ ಡಿ.13ರಂದು ಕಾಮಗಾರಿಯನ್ನು ಆರಂಭಿಸಲಾಗಿತ್ತು. ಬಹುತೇಕ ಒಂದು ವರ್ಷವಾಗುತ್ತಿದ್ದರೂ ಸುಮಾರು ₹6 ಕೋಟಿ ವೆಚ್ಚದ ಕಾಮಗಾರಿ ಮುಗಿಯುವ ಲಕ್ಷಣಗಳಿಲ್ಲ.

ಆರು ತಿಂಗಳಲ್ಲಿ ಕಾಮಗಾರಿ ಮುಗಿಯುವ ಭರವಸೆ ನೀಡಲಾಗಿತ್ತು. ಆದರೆ, ಅದು ವಿಳಂಬವಾಗಿ ಆಗಸ್ಟ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳುವುದಾಗಿ ಹೇಳಲಾಗಿತ್ತು. ಇದೀಗ, ಡಿಸೆಂಬರ್ ಅಂತ್ಯಕ್ಕೆ ಹೊಸ ಗಡುವು ನೀಡಲಾಗಿದೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿ.ವಿ ಪುರದಲ್ಲಿನ ‘ತಿಂಡಿ ಬೀದಿಯನ್ನು ಬಿಬಿಎಂಪಿ ದಕ್ಷಿಣ ವಲಯದ ಅಂದಿನ ಆಯುಕ್ತ ಜಯರಾಮ್ ರಾಯಪುರ ಅವರು, ‘ಮೂಲಸೌಕರ್ಯಗಳ ಜತೆಗೆ ಜನರನ್ನು ಆಕರ್ಷಿಸಲು ಸಜ್ಜನ್ ರಾವ್ ವೃತ್ತ ಮತ್ತು ಮಿನರ್ವ ವೃತ್ತದ ನಡುವಿನ ಸುಮಾರು 209 ಮೀಟರ್ ಉದ್ದದ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು’ ಎಂದು ತಿಳಿಸಿದ್ದರು.

ಅಲ್ಲಲ್ಲಿ ಆಸನಗಳ ವ್ಯವಸ್ಥೆ, ರಸ್ತೆಯ ಎರಡೂ ಬದಿ ಆರ್.ಸಿ.ಸಿ ಕಾಲುವೆ, 6 ಕಡೆ ಕೈತೊಳೆಯುವ ವ್ಯವಸ್ಥೆ, ಎರಡೂ ಕಡೆ ಒಳಚರಂಡಿ ಪೈಪ್‌ಲೈನ್ ಅಳವಡಿಕೆ, ಆಕರ್ಷಕ ಬೀದಿ ದೀಪ, ಎರಡೂ ಕಡೆ ಮಳಿಗೆಗಳ ಮುಂಭಾಗ ಕೆನೊಪಿಗಳ ಅಳವಡಿಕೆ, ಹಸಿ ಕಸ/ಒಣ ಕಸ ಹಾಕಲು ಬಿನ್ ವ್ಯವಸ್ಥೆ, ಎರಡೂ ಕಡೆ ಡಕ್ಟ್ ನಿರ್ಮಿಸಲಾಗುತ್ತದೆ. ಅಲಂಕಾರಿಕ ಸಸಿಗಳನ್ನು ನೆಟ್ಟು, ಬೀದಿ ನಾಟಕ ಮಾಡಲು ಸ್ಥಳಾವಕಾಶ ಕಲ್ಪಿಸಲಾಗುವುದು. ರಸ್ತೆಯನ್ನು 7 ಮೀಟರ್‌ನಿಂದ 5 ಮೀಟರ್‌ಗೆ ಕಿರಿದಾಗಿಸಿ, ಎರಡೂ ಬದಿ ಸುಮಾರು 3.5 ಮೀ. ವಿಶಾಲವಾದ ಪಾದಚಾರಿ ಮಾರ್ಗ ನಿರ್ಮಾಣ ಮಾಡುವ ಯೋಜನೆ ಇದಾಗಿದೆ.

ಅವ್ಯವಸ್ಥೆ: ‘ತಿಂಡಿ ಬೀದಿ ಮಾಡುವುದಾಗಿ ಇರುವುದನ್ನೆಲ್ಲ ಕೆಡವಿ, ಕಾಂಕ್ರೀಟ್ ತ್ಯಾಜ್ಯದ ರಸ್ತೆಯನ್ನಾಗಿ ಮಾಡಿದ್ದಾರೆ. ದೂಳು, ತ್ಯಾಜ್ಯ ಹೆಚ್ಚಿರುವುದರಿಂದ ಗ್ರಾಹಕರಿಗೆ ಬರಲು ಸಮಸ್ಯೆಯಾಗುತ್ತಿದೆ. ನಮಗೆ ವ್ಯಾಪಾರವಿಲ್ಲದೆ ಸಂಕಷ್ಟ ಎದುರಾಗಿದೆ. ಇಲ್ಲಿ ನಮ್ಮ ಸಂಕಷ್ಟ ಕೇಳುವವರು ಯಾರೂ ಇಲ್ಲ’ ಎಂದು ದೋಸೆ ಅಂಗಡಿ ಮಾಲೀಕ ರಮೇಶ್ ಹೇಳಿದರು.


ವಿ.ವಿ ಪುರದಲ್ಲಿನ ‘ತಿಂಡಿ ಬೀದಿ’ ನವೀಕರಣ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದೆ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ

ತುರ್ತಾಗಿ ಮುಗಿಯಲ್ಲ: ಮುಖ್ಯ ಎಂಜಿನಿಯರ್

‘ವಿ.ವಿ ಪುರಂನಲ್ಲಿನ ‘ತಿಂಡಿ ಬೀದಿ’ಯ ಕಾಮಗಾರಿ ಇನ್ನೂ ನಡೆಯುತ್ತಿದೆ. ಕಾರ್ತಿಕ ಮಾಸದ ಕೊನೆಯ ಸೋಮವಾರ ನಡೆಯುವ ಕಡಲೆಕಾಯಿ ಪರಿಷೆ ಸಮಯಕ್ಕೆ ಕಾಮಗಾರಿ ಮುಗಿಯುವುದಿಲ್ಲ. ‘ಫಿನಿಶಿಂಗ್’ ಕೆಲಸಗಳು ನಡೆಯುತ್ತಿದ್ದು, ಕನಿಷ್ಠ ಇನ್ನೂ ಆರು ವಾರವಾದರೂ ಬೇಕು. ಗುತ್ತಿಗೆದಾರರ ಮುಷ್ಕರದಿಂದ ಕಾಮಗಾರಿ ವಿಳಂಬವಾಗಿದೆ’ ಎಂದು ಬಿಬಿಎಂಪಿ ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ಎಸ್.ವಿ. ರಾಜೇಶ್ ತಿಳಿಸಿದರು.

‘ಶಾಸಕರು, ಕಾರ್ಯಕರ್ತರಿಗೆ ಸ್ಥಾನ’

ನಿಗಮ-ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷ ಸಂಘಟನೆ ಮತ್ತು ನಿಗಮ ಮಂಡಳಿಗಳಿಗೆ ಶಾಸಕರು ಮತ್ತು ಕಾರ್ಯಕರ್ತರ ನೇಮಕ ಕುರಿತು ನಮ್ಮ ನಾಯಕರ ಜೊತೆ ಚರ್ಚೆ ಮಾಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಹೇಳಿದರು.

ನಿಗಮ- ಮಂಡಳಿ ನೇಮಕ ಮತ್ತಿತರ ವಿಚಾರಗಳ ಕುರಿತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಸಮಾಲೋಚನೆ ನಡೆಸಿದ ನಂತರ ತಾಜ್ ವೆಸ್ಟೆಂಡ್ ಬಳಿ ಮಂಗಳವಾರ ಮಧ್ಯರಾತ್ರಿ ಅವರು ಮಾತನಾಡಿದರು.

'ಶಾಸಕರಿಗೆ ಜವಾಬ್ದಾರಿ ನೀಡುವ ಬಗ್ಗೆ ಮೊದಲ ಸುತ್ತಿನ ಚರ್ಚೆ ಆಗಿದ್ದು, ಈಗಿನ ಪಟ್ಟಿಯನ್ನು ಕೇಂದ್ರ ನಾಯಕರು ಪರಿಶೀಲಿಸಲಿದ್ದಾರೆ. ನಂತರ ಎರಡನೇ ಸುತ್ತಿನ ಚರ್ಚೆ ಆಗಲಿದೆ' ಎಂದರು

ನೇಮಕ ಪ್ರಕ್ರಿಯೆ ಪೂರ್ಣಗೊಳ್ಳಲು ಎಷ್ಟು ಸಮಯಾವಕಾಶ ಬೇಕು ಎಂಬ ಪ್ರಶ್ನೆಗೆ, 'ಪಂಚರಾಜ್ಯ ಚುನಾವಣೆ ನಡೆಯುತ್ತಿದ್ದು, ಮುಖ್ಯಮಂತ್ರಿ ಮತ್ತು ನಾನು ಪ್ರಚಾರಕ್ಕೆ ಹೋಗಬೇಕಿದೆ. ಆದಷ್ಟು ಬೇಗ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದರು.

ಗೃಹ ಸಚಿವ ಜಿ. ಪರಮೇಶ್ವರ ಮುನಿಸಿಕೊಂಡಿದ್ದಾರೆ ಎಂಬ ಬಗ್ಗೆ ಚರ್ಚೆ ಆಗುತ್ತಿದೆಯಲ್ಲ ಎಂದು ಕೇಳಿದಾಗ, 'ಗೃಹಸಚಿವರು ಕೂಡ ಈ ಸಭೆಯಲ್ಲಿ ಭಾಗವಹಿಸಿದ್ದರು. ಬೆಳಗಾವಿಯಿಂದ ಬಂದು ಚರ್ಚೆ ಮಾಡಿದ್ದಾರೆ. ಅವರು ಯಾಕೆ ಮುನಿಸಿಕೊಳ್ಳುತ್ತಾರೆ' ಎಂದು ಕೇಳಿದರು.

'ಯಲಬುರ್ಗಾ ಶಾಸಕ ಬಸರಾಜ ರಾಯರಡ್ಡಿ ಅವರನ್ನು ಸಭೆಗೆ ಕರೆಸಿಕೊಂಡು, ನಿಗಮ- ಮಂಡಳಿಯ ಅಧ್ಯಕ್ಷ ಸ್ಥಾನದ ಆಯ್ಕೆಗೆ ಮುಕ್ತ ಅವಕಾಶ ನೀಡಿದರು. ಆದರೆ, ನಿಗಮ ಮಂಡಳಿ ಸ್ಥಾನ ವಹಿಸಿಕೊಳ್ಳಲು ಸ್ಪಷ್ಟವಾಗಿ ನಿರಾಕರಿಸಿರುವ ರಾಯರಡ್ಡಿ, ಸಚಿವ ಸ್ಥಾನವೇ ಬೇಕೆಂದು ಪಟ್ಟು ಹಿಡಿದಿದ್ದಾರೆ. ಇಂತದ್ದೇ ಖಾತೆ ಬೇಕೆಂದೇನೂ ಇಲ್ಲ. ಯಾವುದೇ ಸೌಲಭ್ಯವೂ ಬೇಕಿಲ್ಲ. ಆದರೆ, ಮಂತ್ರಿ ಮಾಡಿ ಎಂದಿದ್ದಾರೆ' ಎಂದು ಮೂಲಗಳು ಹೇಳಿವೆ.

ಸತೀಶ ಕೆಎಸ್‌ಐಐಡಿ ವ್ಯವಸ್ಥಾಪಕ ನಿರ್ದೇಶಕ

ಬೆಂಗಳೂರು: ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕ ಬಿ.ಸಿ.ಸತೀಶ ಅವರನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ. ಎಂ.ಆರ್ ರವಿ ಅವರು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

‘ಎಚ್‌ಡಿಕೆ ನೋಡಿ ಜನ ನಗುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುಮಾರಸ್ವಾಮಿ ಏನೇನೋ ಮಾತನಾಡಿ ತಮ್ಮ ಗೌರವವನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಜನ ಅವರನ್ನು ನೋಡಿ ನಗುತ್ತಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಟೆಂಟ್‌ಗಳಲ್ಲಿ ನೀಲಿಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತೆ ಆರೋಪಿಸಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, ‘ಹತಾಶೆಯು ಅವರನ್ನು ಈ ರೀತಿಯಾಗಿ ಮಾತನಾಡಿಸುತ್ತಿದೆ’ ಎಂದರು.

‘ಡಿ.ಕೆ. ಶಿವಕುಮಾರ್ ಹೀಗೆ ಮಾಡಿದ್ದರೇ ಎಂದು ಕನಕಪುರದ ಜನರನ್ನು ಕುಮಾರಸ್ವಾಮಿ ಕೇಳಲಿ. ನಾನು ಈ ರೀತಿಯ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದೆ ಎಂದು ಕ್ಷೇತ್ರದ ಜನರು ಹಾಗೂ ನಿಮ್ಮ (ಜೆಡಿಎಸ್) ಕಾರ್ಯಕರ್ತರು ಹೇಳಿದರೆ, ಈ ಕೂಡಲೇ ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ. ಆಗ ನೀವೇನು (ಕುಮಾರಸ್ವಾಮಿ) ಮಾಡುತ್ತೀರಾ’ ಎಂದು ಪ್ರಶ್ನಿಸಿದರು.

‘ಕುಮಾರಸ್ವಾಮಿಯವರು, ಅವರ ತಂದೆ ನನ್ನ ವಿರುದ್ಧ ಚುನಾವಣೆಗೆ ನಿಂತಿದ್ದಾಗ ಯಾಕೆ ಈ ವಿಚಾರ ಎತ್ತಲಿಲ್ಲ? ಈಗ ಏಕೆ ಈ ರೀತಿ ಮಾತನಾಡುತ್ತಿದ್ದಾರೆ. ನಾನು ಇಂದಿರಾ ಗಾಂಧಿ ಅವರ ನೆನಪಿನಲ್ಲಿ ಟೆಂಟ್‌ಗಳನ್ನು ತೆರೆದಿದ್ದವನು’ ಎಂದು ತಿರುಗೇಟು ನೀಡಿದರು.

‘ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಭಿತ್ತಿಪತ್ರಗಳನ್ನು ಹಾಕಿದ್ದಾರೆ’ ಎಂದಾಗ ‘ಯಾರು ಹಾಕಿದ್ದರೂ ತಪ್ಪೇ. ನಾನು ಇಂತಹ ಕೀಳುಮಟ್ಟದ ರಾಜಕಾರಣಕ್ಕೆ ಇಳಿಯುವುದಿಲ್ಲ’ ಎಂದರು.

ಪೋಸ್ಟರ್ ರಾಜಕಾರಣ ತಡೆಯಿರಿ: ಗೃಹ ಇಲಾಖೆಗೆ ಜೆಡಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಪೋಸ್ಟರ್ ರಾಜಕಾರಣವನ್ನು ಗೃಹ ಇಲಾಖೆ ತಕ್ಷಣ ತಡೆಯಬೇಕು. ಇಲ್ಲವಾದರೆ ತಮ್ಮ ಪಕ್ಷವೂ ಅದೇ ಹಾದಿ ತುಳಿಯಲಿದೆ’ ಎಂದು ಜೆಡಿಎಸ್ ಹೇಳಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಶಾಸಕರಾದ ಎ. ಮಂಜುನಾಥ್, ಅಶ್ವಿನ್ ಕುಮಾರ್ ಮತ್ತು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ‘ಜನರ ಪರ ಪ್ರಶ್ನೆ ಎತ್ತುತ್ತಿರುವ ಕುಮಾರಸ್ವಾಮಿ ಅವರನ್ನು ಕೀಳಾಗಿ ಬಿಂಬಿಸುವ ಪೋಸ್ಟರ್‌ಗಳನ್ನು ಕಾಂಗ್ರೆಸ್ ಪಕ್ಷದವರು ಅಂಟಿಸುತ್ತಿದ್ದಾರೆ. ಅವರು ಒಂದು ಪೋಸ್ಟರ್ ಅಂಟಿಸಿದರೆ ಹತ್ತು ಪೋಸ್ಟರ್ ಅಂಟಿಸುವ ಶಕ್ತಿ ನಮಗೂ ಇದೆ’ ಎಂದರು.

‘ಕಾಂಗ್ರೆಸ್ ಪಕ್ಷವು ಹಣ ಬಲದದಲ್ಲಿ ಇಂತಹ ಕೆಲಸ ಮಾಡಿಸಲು ಏಜೆನ್ಸಿಯೊಂದನ್ನು ನೇಮಿಸಿಕೊಂಡಿದ್ದಾರೆ. ಆ ಬಗ್ಗೆ ನಮಗೆ ಮಾಹಿತಿ ಇದೆ. ಗೃಹ ಸಚಿವರು ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರು ತಕ್ಷಣ ಮಧ್ಯಪ್ರವೇಶ ಮಾಡಬೇಕು. ಮುಂದೆ ಪೋಸ್ಟರ್ ರಾಜಕಾರಣದಲ್ಲಿ ಮಾರಾಮಾರಿ ನಡೆದರೆ ಸರ್ಕಾರವೇ ಹೊಣೆ’ ಎಂದು ಮಂಜುನಾಥ್ ಹೇಳಿದರು.

ಕಾಂಗ್ರೆಸ್‌ನ ಎಲ್ಲ ನಾಯಕರು ಈ ಕೃತ್ಯದಲ್ಲಿ ಭಾಗಿಯಾಗಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಅವರ ಹಿಂಬಾಲಕರು ಈ ಕೆಲಸ ಮಾಡುತ್ತಿದ್ದಾರೆ. ಗೃಹ ಇಲಾಖೆಯು ಇಂತಹ ದುಷ್ಕೃತ್ಯವನ್ನು ನಿಲ್ಲಿಸದಿದ್ದರೆ ರಾಜ್ಯವು ಕೆಟ್ಟ ರೀತಿಯ ಪೋಸ್ಟರ್ ಅಭಿಯಾನಕ್ಕೆ ಸಾಕ್ಷಿಯಾಗಲಿದೆ ಎಂದರು.

‘ಕೊಳವೆ ಬಾವಿಯಿಂದ ನೀರು ಪೂರೈಕೆ’

ಪೀಣ್ಯ ದಾಸರಹಳ್ಳಿ: ನೀರಿನ ಅಭಾವ ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಲು ಕೊಳವೆಬಾವಿ ಕೊರೆಸಿ ನೀರು ನೀಡಲಾಗುತ್ತಿದೆ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು. ಮಲ್ಲಸಂದ್ರದ ಬಿ.ಎಚ್.ಇ.ಎಲ್ ಮಿನಿ ಕಾಲೊನಿಯಲ್ಲಿ ಕೊಳವೆಬಾವಿ ನೀರಿನ ಪೂರೈಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಮಲ್ಲಸಂದ್ರದ ಮುನೇಶ್ವರ ಬಡಾವಣೆ ಬಿಎಚ್‌ಇಎಲ್ ಮಿನಿ ಕಾಲೊನಿ ಪೈಪ್ಲೈನ್ ರಸ್ತೆ ಸುತ್ತಮುತ್ತಲ ಪ್ರದೇಶದ ಜನರಿಗೆ ಕಾವೇರಿ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲ. ಈಗ ಕೊಳವೆ ಬಾವಿಯಲ್ಲಿ ನೀರು ಸಿಕ್ಕಿದೆ. ಸ್ವಲ್ಪಮಟ್ಟಿಗೆ ಆದರೂ ಸಮಸ್ಯೆ ಬಗೆಹರಿಯಲಿದೆ’ ಎಂದರು.

‘ಪ್ರತಿರೋಧಕ ಬೆಳೆಸಿಕೊಂಡ ಸೂಕ್ಷ್ಮಜೀವಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಬಗೆಯ ಸೂಕ್ಷ್ಮಜೀವಿಗಳು ಪ್ರತಿರೋಧಕ ಶಕ್ತಿ ಬೆಳೆಸಿಕೊಂಡಿರುವುದು ಗಂಭೀರ ಬೆಳವಣಿಗೆ. ಇದರಿಂದ ಸಾರ್ವಜನಿಕ ಆರೋಗ್ಯ ಏರುಪೇರಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ರಾಜ್ಯದಲ್ಲೂ ಈ ಸಮಸ್ಯೆ ಗಂಭೀರವಾಗಿದೆ. ಇದರ ಪರಿಣಾಮ ಸಾಮಾನ್ಯ ಸೋಂಕುಗಳಿಗೂ ನೀಡುವ ಚಿಕಿತ್ಸೆ ಮತ್ತು ಔಷಧಗಳು ಪರಿಣಾಮ ಬೀರುತ್ತಿಲ್ಲ. ಇದರಿಂದ ಹೆಚ್ಚಿನ ಸಾವುಗಳು ಸಂಭವಿಸುತ್ತಿವೆ ಎಂದು ವಿಶ್ವ ಸೂಕ್ಷ್ಮಜೀವಿಗಳ ಪ್ರತಿರೋಧಕ ಜಾಗೃತಿ ಸಪ್ತಾಹದ ಸಂದರ್ಭದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ರೈತರು ಯಾವುದೇ ನಿಯಂತ್ರಣವಿಲ್ಲದೇ, ರಸಗೊಬ್ಬರ, ಔಷಧ ಬಳಸುತ್ತಿದ್ದಾರೆ. ಕೋಳಿ ಫಾರಂಗಳಲ್ಲಿ ಇವುಗಳ ಬಳಕೆಗೆ ಯಾವುದೇ ಲಗಾಮು ಇಲ್ಲ. ಇಂತಹ ಔಷಧಗಳ ಖರೀದಿಯ ಮೇಲೂ ಕಡಿವಾಣ ಹಾಕಬೇಕು ಎಂದು ದಿನೇಶ್ ಹೇಳಿದರು.

ಕೆ.ಆರ್. ಪುರ ಪೊಲೀಸ್ ಠಾಣೆಯಿಂದ ಕೊಳತ್ತೂರು ಜಂಕ್ಷನ್‌ವರೆಗೆ 15 ಕಿ.ಮೀ ಕ್ಯಾರಿಯೇಜ್‌ವೇ

ಅತಿ ಉದ್ದದ ಮೇಲ್ಸೇತುವೆಗೆ ಯೋಜನೆ

• ಮುತೀಉರ್ ರಹ್ಮಾನ್ ಸಿದ್ದೀಕೀ

ಬೆಂಗಳೂರು: ನಗರದಲ್ಲಿನ ಅತಿ ಉದ್ದವಾದ ಮೇಲ್ಸೇತುವೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಮಿಸಲು ಯೋಜಿಸಿದ್ದು, ಇದರಿಂದ ವಾಹನ ದಟ್ಟಣೆ ಸಾಕಷ್ಟು ಕಡಿಮೆಯಾಗುವುದಾಗಿ ಹೇಳಿದೆ.


ಕೆ.ಆರ್. ಪುರ ಪೊಲೀಸ್ ಠಾಣೆಯಿಂದ ಕೊಳತ್ತೂರು ಜಂಕ್ಷನ್‌ವರೆಗೆ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದೆ.

ಬೆಂಗಳೂರು ಪೂರ್ವ ಭಾಗದಲ್ಲಿ ಅತ್ಯಂತ ಹೆಚ್ಚಿನ ವಾಹನ ದಟ್ಟಣೆಯಿರುವ ಹಳೇ ಮದ್ರಾಸ್ ರಸ್ತೆ ಮೂಲಕ ಸಾಗುವ 15 ಕಿ.ಮೀ ಉದ್ದದ ಮೇಲ್ಸೇತುವೆ ಇದಾಗಲಿದೆ. ಟಿ.ಸಿ. ಪಾಳ್ಯ ಮತ್ತು ಭಟ್ಟರಹಳ್ಳಿಯ ಪ್ರಮುಖ ಜಂಕ್ಷನ್‌ಗಳ ವಾಹನ ದಟ್ಟಣೆಯನ್ನು ಈ ಮೇಲ್ಸೇತುವೆ ನಿವಾರಿಸಲಿದೆ.

‘ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇಗೆ ಸಂಪರ್ಕ ಕಲ್ಪಿಸುವ ಈ ಮೇಲ್ಸೇತುವೆ, ಹಳೆ ಮದ್ರಾಸ್ ರಸ್ತೆಯ ವಾಹನ ದಟ್ಟಣೆ ನಿವಾರಿಸುತ್ತದೆ. ಅಲ್ಲದೇ, ಈ ರಸ್ತೆಗೆ ಹೊಂದಿಕೊಂಡಿರುವ ಹಲವು ಭಾಗಗಳ ದಟ್ಟಣೆಯೂ ನಿವಾರಣೆಯಾಗಲಿದೆ’ ಎಂದು ಎನ್‌ಎಚ್‌ಎಐನ ಬೆಂಗಳೂರು ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ತಿಳಿಸಿದರು.

‘ಹೊಸ ಮೇಲ್ಸೇತುವೆಯಲ್ಲಿ ಆರು ಪಥಗಳಲ್ಲಿರಲಿದ್ದು, ಇದು ನಗರದ ಉದ್ದವಾದ ಕ್ಯಾರಿಯೇಜ್ ವೇ ಆಗಲಿದೆ. ಹೊಸೂರು ರಸ್ತೆ (ರಾಷ್ಟ್ರೀಯ ಹೆದ್ದಾರಿ–4)ಯಲ್ಲಿರುವ ಎಲೆಕ್ಟ್ರಾನಿಕ್ ಸಿಟಿ ಎಕ್ಸ್‌ಪ್ರೆಸ್ 9.98 ಕಿ.ಮೀ ಉದ್ದವಿದ್ದು, ಇದು ಈವರೆಗಿನ ಅತಿದೊಡ್ಡ ಮೇಲ್ಸೇತುವೆಯಾಗಲಿದೆ’ ಎಂದು ಮಾಹಿತಿ ನೀಡಿದರು.

‘ಕೆ.ಆರ್. ಪುರದ ಕೇಬಲ್ ಮೇಲ್ಸೇತುವೆಯಿಂದ ಈ ಹೊಸ ಮೇಲ್ಸೇತುವೆಗೆ ಸಂಪರ್ಕ ನೀಡಬೇಕು ಎಂದು ಸ್ಥಳೀಯರು ಬಯಸುತ್ತಿದ್ದರೂ, ಅಧಿಕಾರಿಗಳು ಇದು ಸಾಧ್ಯವಿಲ್ಲ ಎಂದಿದ್ದಾರೆ. ಹಳೆ ಮದ್ರಾಸ್ ರಸ್ತೆಯಲ್ಲಿರುವ ಕಾಟಮಲ್ಲೂರು, ಹೊಸಕೋಟೆ ಜಂಕ್ಷನ್ ಮತ್ತು ಕೊಳತ್ತೂರು ಬಳಿಯ ಎಂವಿಜೆ ಆಸ್ಪತ್ರೆ ಬಳಿಯ ಮೂರು ಪ್ರಮುಖ ಕೆಳಸೇತುವೆಗಳನ್ನು ಈ ಹೊಸ ಮೇಲ್ಸೇತುವೆ ಸಂಪರ್ಕಿಸಲಿದೆ. ಈ ಮೂರು ಕೆಳಸೇತುವೆಗಳನ್ನು ತೆರವುಗೊಳಿಸುವುದಿಲ್ಲ, ಬದಲಿಗೆ ಅವುಗಳನ್ನು ಹೊಸ ಸೇತುವೆ ಜೊತೆಗೆ ಸೇರಿಸಿಕೊಳ್ಳಲಿದ್ದೇವೆ’ ಎಂದು ಜಯಕುಮಾರ್ ಹೇಳಿದರು.



‘ಹೊಸಕೋಟೆ ಟೋಲ್ ಪ್ಲಾಜಾ ಬಗ್ಗೆಯೂ ಚರ್ಚೆ ನಡೆಯುತ್ತಿದ್ದು, ಕೊಳತ್ತೂರಿಗೆ ಟೋಲ್ ಪ್ಲಾಜಾ ಸ್ಥಳಾಂತರಿಸಲು ಸಾಧ್ಯವಿಲ್ಲ. ಈ ಟೋಲ್ ಸಂಗ್ರಹ ಕೇಂದ್ರದ ಮೇಲೆ ಹೊಸ ಮೇಲ್ಸೇತುವೆ ಬರಲಿದೆ. ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ’ ಎಂದು ಅಧಿಕಾರಿಗಳು ತಿಳಿಸಿದರು.

‘ಮೇಲ್ಸೇತುವೆಯ ವೆಚ್ಚವನ್ನು ₹1,500 ಕೋಟಿ ಎಂದು ಅಂದಾಜಿಸಿದ್ದು, ಹೈಬ್ರಿಡ್ ಆ್ಯನ್ಯುಟಿ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಎನ್‌ಎಚ್‌ಎಐ ಮತ್ತು ಗುತ್ತಿಗೆದಾರರು ವೆಚ್ಚವನ್ನು ಹಂಚಿಕೊಳ್ಳಲಿದ್ದಾರೆ. ಹೆಚ್ಚುವರಿ ಭೂಸ್ವಾಧೀನದ ಅಗತ್ಯ ಇಲ್ಲ’ ಎಂದು ಜಯಕುಮಾರ್ ಮಾಹಿತಿ ನೀಡಿದರು.

ಎನ್‌ಎಚ್‌ಎಐ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸುತ್ತಿದ್ದು, ಇದು 2024ರ ಮಾರ್ಚ್ ವೇಳೆಗೆ ಮುಗಿಯಲಿದೆ ಎಂದು ಹೇಳಿದರು.

‘ಪೂರ್ವ ಭಾಗದ ಬೆಂಗಳೂರಿಗೆ ಈ ಮೇಲ್ಸೇತುವೆ ಕೊಡುಗೆಯಾಗಲಿದೆ. ಶುಲ್ಕ ಪಾವತಿಸಿ ಮೇಲ್ಸೇತುವೆಯನ್ನು ಬಳಸಬೇಕಿದ್ದು, ಕೆಳಭಾಗದ ರಸ್ತೆ ಮುಕ್ತವಾಗಿರುತ್ತದೆ’ ಎಂದು ಸಂಸದ ಪಿ.ಸಿ. ಮೋಹನ್ ಹೇಳಿದರು.

ವಿದ್ಯುತ್ ಅವಘಡ: ಮುಂಜಾಗ್ರತಾ ಕ್ರಮ ಕೈಗೊಳ್ಳಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ತಂತಿ ತುಳಿದು ತಾಯಿ–ಮಗು ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಇಂಧನ ಇಲಾಖೆ, ಮುಂಬರುವ ದಿನಗಳಲ್ಲಿ ಇಂಥ ಅವಘಡಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ವಿದ್ಯುತ್ ಪ್ರಸರಣ ನಿಗಮಗಳಿಗೆ ನಿರ್ದೇಶನ ನೀಡಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಇಂಧನ ಇಲಾಖೆ, ‘ತಾಯಿ–ಮಗು ಸಾವಿಗೆ ಸುರಕ್ಷತಾ ಕ್ರಮಗಳ ನಿರ್ಲಕ್ಷ್ಯ ಕಾರಣವೆಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಅವಘಡ ಅತ್ಯಂತ ದುರದೃಷ್ಟಕರ. ಇಂಥ ಅವಘಡಗಳಲ್ಲಿ ಜೀವಹಾನಿ ಆಗುತ್ತಿರುವ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ’ ಎಂದು ಹೇಳಿದರು.

ಸರ್ಕಾರ ನೀಡಿರುವ ನಿರ್ದೇಶನಗಳು:

- ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತಿಳಿವಳಿಕೆ ತರಬೇತಿ ನೀಡಬೇಕು
- ವಿದ್ಯುತ್ ಅವಘಡಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ವಾಹಿನಿಗಳು, ರೇಡಿಯೊ, ಪತ್ರಿಕೆಗಳು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಮಾಡಬೇಕು
- ಸುರಕ್ಷತಾ ನಿಯಮಗಳ ಅನ್ವಯ ಕಾಲ ಕಾಲಕ್ಕೆ ತಪಾಸಣೆ ನಡೆಸಬೇಕು. ನ್ಯೂನತೆಗಳು ಇದ್ದರೆ, ವರದಿ ಸಿದ್ಧಪಡಿಸಿ ಸಲ್ಲಿಸಬೇಕು
- ವಿದ್ಯುತ್ ಜಾಲ ಹಾಗೂ ಉಪಕರಣಗಳನ್ನು ಕಾಲ ಕಾಲಕ್ಕೆ ನಿರ್ವಹಣೆ ಮಾಡಬೇಕು
- ಉಪಕೇಂದ್ರಗಳ ವ್ಯಾಪ್ತಿಯಲ್ಲಿ 11 ಕೆ.ವಿ ಮಾರ್ಗಗಳು ಒಸಿಆರ್ ಮತ್ತು ಇಎಫ್‌ಆರ್ ಮೂಲಕ ಟ್ರಿಪ್ ಆದಾಗ ಸಂಬಂಧಪಟ್ಟ ಶಾಖಾಧಿಕಾರಿ/ಉಪವಿಭಾಗಾಧಿಕಾರಿ ಸಂಪರ್ಕಿಸಿ ಅವರ ಸಹಮತದೊಂದಿಗೆ ಟೆಸ್ಟ್ ಚಾರ್ಜ್ ಮಾಡಬೇಕು
- ತಿಂಗಳಿಗೊಮ್ಮೆ ಸುರಕ್ಷತಾ ದಿನ ಕಾರ್ಯಕ್ರಮ ಹಮ್ಮಿಕೊಳ್ಳಬೇಕು

ಶರಣರ ವಿರುದ್ಧದ ಪ್ರಕರಣಗಳ ವಿಚಾರಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಚಿತ್ರದುರ್ಗ ಜಿಲ್ಲಾ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ಮುಂದಿರುವ ಪ್ರಕರಣಗಳ ವಿಚಾರಣೆಗೆ ತಡೆ ನೀಡುವಂತೆ ಕೋರಿ ಶರಣರು ಸಲ್ಲಿಸಿದ್ದ ನಾಲ್ಕು ಅರ್ಜಿಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಚಿತ್ರದುರ್ಗ ಜಿಲ್ಲಾ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ಮುಂದಿರುವ ಶರಣರ ವಿರುದ್ಧದ ಪ್ರಕರಣಗಳ ಕಡತಗಳನ್ನು ತರಿಸಿಕೊಂಡು ಪರಿಶೀಲಿಸಿ ವರದಿ ಸಲ್ಲಿಸುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶನ ನೀಡಿತು. ಅಂತೆಯೇ ಸ್ಥಳೀಯ ಪಬ್ಲಿಕ್ ಪ್ರಾಸಿಕ್ಯೂಟರ್ ವಿರುದ್ಧ ಇಲಾಖಾ ತನಿಖೆ ನಡೆಸುವಂತೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಗೆ ಆದೇಶಿಸಿತು. ನಾಲ್ಕೂ ಅರ್ಜಿಗಳ ವಿಲೇವಾರಿ ಆಗುವ ತನಕ ಅವುಗಳ ಮುಂದಿನ ವಿಚಾರಣೆಗೆ ತಡೆ ನೀಡಿತು.

ವಿಚಾರಣೆ ವೇಳೆ ಶರಣರ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಈ ಪ್ರಕರಣದ ವಿಚಾರಣೆಯಲ್ಲಿ ಜಿಲ್ಲಾ ನ್ಯಾಯಾಧೀಶರು ಪೂರ್ವಗ್ರಹ ಪೀಡಿತ ಮನೋಭಾವದಿಂದ ವರ್ತಿಸುತ್ತಿದ್ದಾರೆ’ ಎಂದು ಆರೋಪಿಸಿದರು.



‘ಹೈಕೋರ್ಟ್ ಜಾಮೀನು ನೀಡಿದರೂ ತಕ್ಷಣವೇ ಆರೋಪಿಯ ಬಿಡುಗಡೆಗೆ ಆದೇಶಿಸಲಿಲ್ಲ. ಇದರಿಂದಾಗಿ ಶರಣರು ಮೂರು ದಿನಗಳ ಕಾಲ ಜೈಲಿನಲ್ಲಿ ಇರಬೇಕಾಯ್ತು’ ಎಂದರು.

‘ವಿಚಾರಣೆ ಮುಂದೂಡುವಂತೆ ಹೈಕೋರ್ಟ್ ಆದೇಶ ಇದ್ದರೂ ವಿಚಾರಣೆ ನಡೆಸಲಾಗಿದೆ. ಚಿತ್ರದುರ್ಗಕ್ಕೆ ಬರದಂತೆ ಹೈಕೋರ್ಟ್ ಷರತ್ತು ವಿಧಿಸಿದ್ದರೂ ವಾರಂಟ್ ಮೂಲಕ ಅವರನ್ನು ಚಿತ್ರದುರ್ಗ ಜಿಲ್ಲೆಗೆ ಕರೆತರುವಂತೆ ಆದೇಶಿಸಿದ್ದಾರೆ. ಪಾಸ್ ಪೋರ್ಟ್ ವಶಕ್ಕೆ ನೀಡಿದಾಗಲೂ ಅದರ ಪರಿಶೀಲನೆಗೆ ಕಳುಹಿಸಿದ್ದಾರೆ. ಹೈಕೋರ್ಟ್ ಆದೇಶ ವಿಫಲಗೊಳಿಸಲು ಬಂಧನಕ್ಕೆ ಆದೇಶಿಸಿದ್ದಾರೆ. ಹೀಗಾಗಿ, ಸಾಕ್ಷ್ಯ ವಿಚಾರಣೆಯನ್ನು ಬೇರೆ ಕೋರ್ಟ್‌ಗೆ ವರ್ಗಾಯಿಸಲು ಆದೇಶಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಜಿಲ್ಲಾ ನ್ಯಾಯಾಧೀಶರು ಪ್ರಾಸಿಕ್ಯೂಟರ್ ಸಲ್ಲಿಸಿದ ಮೆಮೊ ಅನ್ನು ಕಣ್ಣು ಮುಚ್ಚಿ ಅಂಗೀಕರಿಸಿದ್ದಾರೆ. ಆರೋಪಿಯನ್ನು ಬಿಡುಗಡೆ ಮಾಡಿದ ಜೈಲು ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶಿಸಿದ್ದಾರೆ. ಹೈಕೋರ್ಟ್ ಆದೇಶವನ್ನು ಪಾಲಿಸದೇ ಇರುವ ಅವರ ಈ ಕ್ರಮ ಸರಿಯಲ್ಲ. ಹೈಕೋರ್ಟ್ ಆದೇಶದ ಬಗ್ಗೆ ಅವರು ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಸಾಲು ಸಾಲಾಗಿ ತಪ್ಪುಗಳನ್ನು ಮಾಡಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿತು.

‘ಆರೋಪಿ ಯಾರೇ ಆಗಿರಲಿ ನಮಗದು ಮುಖ್ಯವಲ್ಲ. ಆರೋಪಿಯನ್ನು ತರಾತುರಿಯಲ್ಲಿ ಬಂಧಿಸಿದ ಕ್ರಮ ಸರಿಯಲ್ಲ. ಹೈಕೋರ್ಟ್ ಆದೇಶ ನಿಷ್ಫಲಗೊಳಿಸುವ ಯತ್ನವನ್ನು ಒಪ್ಪಲಾಗುವುದಿಲ್ಲ’ ಎಂದು ನುಡಿಯಿತು.

ಅತ್ಯಾಚಾರ: ಸಂತ್ರಸ್ತೆ ಜೊತೆ ಆರೋಪಿ ಮದುವೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಎಸಗಿದ ಸಂತ್ರಸ್ತೆಯನ್ನು ಮದುವೆ ಆಗುವುದಾಗಿ ಭರವಸೆ ನೀಡಿದ ಮತ್ತು ಮದುವೆಗೆ ಸಂತ್ರಸ್ತೆ ಒಪ್ಪಿದ ಕಾರಣ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಆರೋಪದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ತನ್ನ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಆರೋಪಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆರೋಪಿಯನ್ನು ಮದುವೆ ಆಗುವುದಾಗಿ ದೃಢೀಕರಿಸಿ ಸಂತ್ರಸ್ತೆ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಮತ್ತೊಂದೆಡೆ ಆರೋಪಿಯೂ ಸಂತ್ರಸ್ತೆಯನ್ನು ಮದುವೆ ಆಗುವುದಾಗಿ ಒಪ್ಪಿಕೊಂಡಿದ್ದಾರೆ’ ಎಂದು ನ್ಯಾಯಪೀಠ ಹೇಳಿದೆ.

‘ಅತ್ಯಾಚಾರ ನಡೆದಾಗ ಸಂತ್ರಸ್ತೆ ಬಾಲಕಿಯಾಗಿದ್ದರು. ಸಂತ್ರಸ್ತೆ ಲೈಂಗಿಕ ಸಂಭೋಗಕ್ಕೆ ಗುರಿಯಾಗಿದ್ದಾಳೆ ಎಂಬುದಾಗಿ ವೈದ್ಯಕೀಯ ದಾಖಲೆಗಳು ಬಹಿರಂಗಪಡಿಸುತ್ತವೆ. ಇದು ಒಪ್ಪಿತ ಸಂಭೋಗ ಎಂದು ಆರೋಪಿ ಹೇಳಿಕೆ ನೀಡಿದ್ದಾರೆ’ ಎಂದು ನ್ಯಾಯಪೀಠ ಹೇಳಿದೆ.

‘ವಿಚಾರಣೆ ವೇಳೆ ಸಂತ್ರಸ್ತೆ ಪ್ರತಿಕೂಲ ಸಾಕ್ಷ್ಯ ನುಡಿದ್ದಾರೆ. ಪ್ರಾಸಿಕ್ಯೂಷನ್ ಅನ್ನು ಬೆಂಬಲಿಸುವ ಯಾವೊಂದು ಸಾಕ್ಷ್ಯವನ್ನೂ ಪಾಟಿ ಸವಾಲಿನಲ್ಲಿ ಸಂತ್ರಸ್ತೆ ದಾಖಲಿಸಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆರೋಪಿ ವಿರುದ್ಧದ ಕ್ರಿಮಿನಲ್ ವಿಚಾರಣಾ ಪ್ರಕ್ರಿಯೆ ಮುಂದುವರಿದರೆ ಕಾನೂನು ಪ್ರಕ್ರಿಯೆಯ ದುರುಪಯೋಗ ಆಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಜಾತಿವಾರು ಜನಗಣತಿ ವರದಿ ಸಲ್ಲಿಕೆಗೆ ಆಗ್ರಹ

ಬೆಂಗಳೂರು: ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿವಾರು ಜನಗಣತಿ) ವರದಿಯನ್ನು ತ್ವರಿತವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ನಿಯೋಗ ಒತ್ತಾಯಿಸಿದೆ.

ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ನೇತೃತ್ವದ ನಿಯೋಗವು ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಭೇಟಿಮಾಡಿ, ಜಾತಿವಾರು ಜನಗಣತಿ ವರದಿಯನ್ನು ಸರ್ಕಾರಕ್ಕೆ ನೀಡುವಂತೆ ಮನವಿ ಸಲ್ಲಿಸಿತು.

‘ಎಚ್. ಕಾಂತರಾಜ ನೇತೃತ್ವದ ಆಯೋಗವು ಸಮೀಕ್ಷೆಯನ್ನು ಪೂರ್ಣಗೊಳಿಸಿತ್ತು. ಈವರೆಗೂ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿಲ್ಲ. ಈ ವರದಿ ಸರ್ಕಾರಕ್ಕೆ ಸಲ್ಲಿಸಿದರೆ ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿ ಆಗುವ ಲೋಪಗಳನ್ನು ಸರಿಪಡಿಸಲು ಅನುಕೂಲ ಆಗುತ್ತದೆ. ಹಿಂದುಳಿದ ವರ್ಗಗಳ ಪಟ್ಟಿಯ ಪರಿಷ್ಕರಣೆಗೂ ಪೂರಕವಾಗುತ್ತದೆ. ಆದ್ದರಿಂದ ವಿಳಂಬ ಮಾಡದೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು’ ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಮಚಂದ್ರಪ್ಪ, ‘ವರದಿಯನ್ನು ಅಂಗೀಕರಿಸಿ ಎಂದು ಸರ್ಕಾರದ ಎದುರು ನಾವು ಬೇಡಿಕೆ ಇಡುತ್ತಿಲ್ಲ. ಆಯೋಗವು ವರದಿ ಸಲ್ಲಿಸಲಿ. ಬಳಿಕ ಅದನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲಿ’ ಎಂದರು.

‘ಮನೆಯಲ್ಲಿ ಕುಳಿತು ವರದಿ ಸಿದ್ಧಪಡಿಸಲಾಗಿದೆ ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಆರೋಪದಲ್ಲಿ ಸತ್ಯಾಂಶವಿಲ್ಲ. ಆಗ ಶಾಮನೂರು ಸಚಿವರಾಗಿದ್ದರು. ಗಣತಿ ಸರಿಯಾಗಿ ನಡೆಯದಿದ್ದರೆ ಆಗಲೇ ಪ್ರಶ್ನಿಸಬೇಕಿತ್ತು’ ಎಂದರು.

ಚಿತ್ರಾವಳಿ



ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ ಆಗಮಿಕರ ಮತ್ತು ಉಪಾದಿವಂತರ ಒಕ್ಕೂಟದವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಸನ್ಮಾನಿಸಿದರು. ಇದೇ ವೇಳೆ ಅರ್ಚಕರ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿ, ಫೆಬ್ರುವರಿಯಲ್ಲಿ ನಡೆಯುವ ಸಮಾವೇಶಕ್ಕೆ ಆಹ್ವಾನಿಸಿದರು.



ಬಾಹ್ಯಾಕಾಶ ಶಿಕ್ಷಣ ಕ್ಷೇತ್ರದ ಪ್ರತಿಭಾವಂತ ವಿದ್ಯಾರ್ಥಿಗಳಾದ ತರುಣ್ ಶ್ರೀವಿಜಯ್, ವಿಹಾನ್ ಸತೀಶ್, ಕೀರ್ತನ್ ಕುಮಾರ್, ಜಯೇಶ್ ಕುಮಾರ್, ಯದೀದಿಯಾ, ಧೀರಜ್, ಬಿ.ಶಾನ್, ಬಿ.ಶರ್ವಿನ್, ಇಂದ್ರನೀಲ್ ರೆಡ್ಡಿ ಸೋಮವಾರ ತಮ್ಮ ಪೋಷಕರೊಂದಿಗೆ ರಾಜಭವನಕ್ಕೆ ಭೇಟಿ ನೀಡಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಚಿಲ್ಡ್ರನ್ ಸ್ಪೇಸ್ ಕ್ಲಬ್ ಆಫ್ ಇಂಡಿಯಾ ಅಧ್ಯಕ್ಷ ಜಿ.ಶಾಂತಮೂರ್ತಿ ಇದ್ದರು.



ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಆಯೋಜಿಸಿರುವ ಅಧ್ಯಯನ ವಿದೇಶ ಪ್ರವಾಸ ಕಾರ್ಯಕ್ರಮದಡಿ ಸಿಂಗಪುರಕ್ಕೆ ತೆರಳುತ್ತಿರುವ 37 ಮಂದಿ ಪೌರ ಕಾರ್ಮಿಕರಿಗೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸೋಮವಾರ ನಡೆದ ಸಮಾರಂಭದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಶುಭ ಕೋರಿ ಬೀಳ್ಕೊಟ್ಟರು

ಜಿತೇಂದ್ರಕುಮಾರ್‌ಗೆ 'ಆದರ್ಶ ಜೈನ ಸಮಾಜ ರತ್ನ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಉತ್ತರ ಕರ್ನಾಟಕ ಜೈನ ಬಾಂಧವರು, ಜಿನಗೌಡ ಸುಭಾಶ ಪಿ. ಟ್ರಸ್ಟ್ ಸಹಯೋಗದಲ್ಲಿ ನೀಡುವ 'ಆದರ್ಶ ಜೈನ ಸಮಾಜ ರತ್ನ ಪ್ರಶಸ್ತಿ'ಗೆ ಎಸ್. ಜಿತೇಂದ್ರಕುಮಾರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು, ಸ್ಮರಣ ಫಲಕವನ್ನೊಳಗೊಂಡಿದೆ. ಜೈನ ಸಮಾಜಕ್ಕೆ ಸಲ್ಲಿಸಿದ ಗಣಮೀಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

2024ರ ಜನವರಿ 14ರಂದು ಸಂಕ್ರಾಂತಿ ಹಬ್ಬದಂದು ನಡೆಯುವ ಕಾರ್ಯಕ್ರಮದಲ್ಲಿ ಡಿ. ಸುರೇಂದ್ರ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಹಾರದಲ್ಲಿ ಮೀಸಲಾತಿ ಹೆಚ್ಚಳ ಅಧಿಸೂಚನೆ ಪ್ರಕಟ

ಪಟ್ನಾ (ಪಿಟಿಐ): ಬಿಹಾರದಲ್ಲಿ ಶೈಕ್ಷಣಿಕ ಪ್ರವೇಶ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗದವರ ಮೀಸಲಾತಿ ಪ್ರಮಾಣವನ್ನು ಶೇ 50ರಿಂದ 65ಕ್ಕೆ ಹೆಚ್ಚಿಸಿ ಸರ್ಕಾರ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಈ ಕುರಿತ ಬಿಹಾರ ಮೀಸಲಾತಿ (ಸರ್ಕಾರಿ ಉದ್ಯೋಗಗಳಿಗೆ ನೇಮಕಾತಿ) ತಿದ್ದುಪಡಿ ಕಾಯ್ದೆ ಮತ್ತು ಬಿಹಾರ ಮೀಸಲಾತಿ (ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ) ತಿದ್ದುಪಡಿ ಮಸೂದೆಗೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅಂಕಿತ ಹಾಕಿದ್ದರು.


ಸೌಲಭ್ಯಗಳ ಕೊರತೆ: ಬಿಡಿಎ ಫ್ಲ್ಯಾಟ್ ಖರೀದಿಸಿದ್ದರೂ ವಾಸಕ್ಕೆ ಯೋಗ್ಯ ಇಲ್ಲ

ಅವ್ಯವಸ್ಥೆ ಆಗರ: ನಿವಾಸಿಗಳು ಹೈರಾಣ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ







1. ತ್ಯಾಜ್ಯದ ತಾಣವಾಗಿರುವ ಅಪಾರ್ಟ್‌ಮೆಂಟ್ ಆವರಣ 2. ಅಪಾಯ ಆಹ್ವಾನಿಸುತ್ತಿರುವ ವಿದ್ಯುತ್ ವೈರ್‌ಗಳು 3. ಲಿಫ್ಟ್ ವ್ಯವಸ್ಥೆ ಕಾಣದ ಅಪಾರ್ಟ್‌ಮೆಂಟ್

ಬೆಂಗಳೂರು: ಅಪಾಯ ಆಹ್ವಾನಿಸುತ್ತಿರುವ ವಿದ್ಯುತ್ ವೈರ್‌ಗಳು, ಮಳೆ ಬಂದರೆ ತಲೆದೋರುವ ಪ್ರವಾಹ ಸ್ಥಿತಿ, ಭದ್ರತಾ ಸಿಬ್ಬಂದಿಯಿಲ್ಲದೆ ನಿವಾಸಿಗಳಿಗೆ ಭಯದ ವಾತಾವರಣ, ಶಾಶ್ವತ ವಿದ್ಯುತ್ ಸಂಪರ್ಕವಿಲ್ಲದೇ ಪರಿತಪಿಸುತ್ತಿರುವ ನಿವಾಸಿಗಳು, ಕುಡಿಯುವ ನೀರಿಗೂ ತತ್ವಾರ...

– ಇದು ಗುಂಜೂರುಪಾಳ್ಯ ರಸ್ತೆಯ ಬಳಗೆರೆಯಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ವಸತಿ ಸಮುಚ್ಚಯದ ನಿವಾಸಿಗಳು ಎದುರಿಸುತ್ತಿರುವ ನಿತ್ಯದ ಗೋಳು.

'ಅಪಾರ್ಟ್‌ಮೆಂಟ್ ಸ್ಥಿತಿ ಶೋಚನೀಯವಾಗಿದೆ. ಇಲ್ಲಿ ಫ್ಲ್ಯಾಟ್ ಖರೀದಿಸಲೇ ಬಾರದಿತ್ತು' ಎಂದು ಹೇಳುವ ನಿವಾಸಿಗಳು, ಅವ್ಯವಸ್ಥೆಯ ಕುರಿತು ಆಕ್ರೋಶ ಹೊರಹಾಕುತ್ತಿದ್ದಾರೆ. ಸಾಕಷ್ಟು ಬಾರಿ ಹೋರಾಟ ನಡೆಸಿದ್ದರೂ ಸೌಲಭ್ಯಗಳು ಮರೀಚಿಕೆಯಾಗಿವೆ. ಅಪಾರ್ಟ್‌ಮೆಂಟ್ ನಿರ್ಮಾಣ ಕಾರ್ಯ ಆರಂಭವಾಗಿ 10 ವರ್ಷ ಕಳೆದಿದ್ದರೂ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಂಡಿಲ್ಲ. ಸಂಕಷ್ಟಗಳ ನಡುವೆ ಕೆಲವರು ವಾಸಿಸುತ್ತಿದ್ದಾರೆ. ಉಳಿದವರು ಫ್ಲ್ಯಾಟ್ ಖರೀದಿಸಿದ್ದರೂ ಅಲ್ಲಿ ನೆಲೆಸಿಲ್ಲ.

ಸುಸಜ್ಜಿತ ಅಪಾರ್ಟ್‌ಮೆಂಟ್ ನಿರ್ಮಿಸಿ, ಕೊಡುವುದಾಗಿ ಬಿಡಿಎ ಭರವಸೆ ನೀಡಿತ್ತು. ಆದರೆ, ಇದುವರೆಗೂ ಕಾಮಗಾರಿಗಳು ಮುಕ್ತಾಯಗೊಂಡಿಲ್ಲ ಎಂದು ನಿವಾಸಿಗಳು ದೂರುತ್ತಾರೆ.

'2017ರಲ್ಲಿ ಮೂಲಸೌಕರ್ಯ ಕಲ್ಪಿಸುವಂತೆ ಮೇವರಿಕ್ ಹೋಲ್ಡಿಂಗ್ಸ್ ಕಂಪನಿಗೆ ಗುತ್ತಿಗೆ ಕೊಡಲಾಗಿತ್ತು. ಒಂದು ವರ್ಷದ ಕಾಲಮಿತಿ ನೀಡಲಾಗಿತ್ತು. ಆದರೆ, ಇದುವರೆಗೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಹೋರಾಟ ನಡೆಸಿ ಮನವಿ ಸಲ್ಲಿಸಿದ್ದರೂ ಸಮಸ್ಯೆ ಬಗೆಹರಿದಿಲ್ಲ. ಮಧ್ಯಮ ವರ್ಗಕ್ಕೆ ವಸತಿ ಸೌಲಭ್ಯಕ್ಕೆ ಅಪಾರ್ಟ್‌ಮೆಂಟ್ ನಿರ್ಮಿಸಲಾಗಿತ್ತು. ಅದು ಸಾಕಾರಗೊಂಡಿಲ್ಲ' ಎಂದು ನಿವಾಸಿ ನಾರಾಯಣ ಶೆಟ್ಟಿ ಅಳಲು ತೋಡಿಕೊಳ್ಳುತ್ತಾರೆ.

ಸದ್ಯ 200 ಫ್ಲ್ಯಾಟ್‌ಗಳಲ್ಲಿ ಮಾತ್ರ ಖರೀದಿದಾರರು ವಾಸವಿದ್ದಾರೆ. ವಾಸಕ್ಕೆ ಯೋಗ್ಯವಿಲ್ಲವೆಂದು 400 ಫ್ಲ್ಯಾಟ್‌ಗಳ ಮಾಲೀಕರು ಬಾಡಿಗೆ ಮನೆಗಳಲ್ಲಿಯೇ ಉಳಿದಿದ್ದಾರೆ. ಬಿಡಿಎ ಫ್ಲ್ಯಾಟ್ ಖರೀದಿಸಿದ್ದರೂ ವಾಸದ ಭಾಗ್ಯ ಸಿಕ್ಕಿಲ್ಲ.

ಏನೆಲ್ಲಾ ಅವ್ಯವಸ್ಥೆ?: ಬ್ಲಾಕ್–3ರಲ್ಲಿ ಲಿಫ್ಟ್ ಸೇವೆ ಇನ್ನೂ ಆರಂಭಗೊಂಡಿಲ್ಲ. ಕೆಲವು ಬ್ಲಾಕ್‌ಗಳಲ್ಲಿ ಲಿಫ್ಟ್ ಯಂತ್ರದ ಒಳಗೆ ಮಳೆ ನೀರು ಸೇರಿ ಕೆಟ್ಟು ಹೋಗಿದೆ. ಎರಡು ವರ್ಷವಾದರೂ ದುರಸ್ತಿ ಪಡಿಸಿಲ್ಲ. ವೃದ್ಧರು ಮೆಟ್ಟಿಲುಗಳನ್ನೇ ಆಶ್ರಯಿಸಿ ತಮ್ಮ ಫ್ಲ್ಯಾಟ್‌ಗಳಿಗೆ ತೆರಳುತ್ತಿದ್ದಾರೆ. ಅಪಾರ್ಟ್‌ಮೆಂಟ್ ಆವರಣಕ್ಕೆ ಜನರೇಟರ್ ತಂದಿಟ್ಟು ನಾಲ್ಕು ವರ್ಷಗಳು ಕಳೆದಿದೆ. ಬಳಕೆ ಮಾಡುತ್ತಿಲ್ಲ. ಅವುಗಳು ತುಕ್ಕು ಹಿಡಿಯುತ್ತಿವೆ.

ಏನೆಲ್ಲಾ ಸಮಸ್ಯೆಯಿದೆ...

- ವಾಹನ ನಿಲುಗಡೆಗೆ ಜಾಗ ಖರೀದಿಸಿದ್ದರೂ ಅದನ್ನು ಬಳಕೆ ಮಾಡಿಕೊಳ್ಳುತ್ತಿಲ್ಲ
- ಏಳು ಅಂತಸ್ತಿನ ಕಟ್ಟಡದ ಯಾವ ಭಾಗದಲ್ಲೂ ಅಗ್ನಿ ಸುರಕ್ಷತಾ ಪರಿಕರ ಅಳವಡಿಸಿಲ್ಲ.
- ಚರಂಡಿ ವ್ಯವಸ್ಥೆ ಹದಗೆಟ್ಟಿದ್ದು, ಮಳೆಯ ನೀರು ಸರಾಗವಾಗಿ ಹರಿಯುತ್ತಿಲ್ಲ.
- ಕಲುಷಿತ ನೀರು ಶುದ್ಧೀಕರಣ ಘಟಕ ನಿರ್ಮಿಸಿ ನಾಲ್ಕು ವರ್ಷ ಕಳೆದಿದ್ದರೂ ಕಾರ್ಯಾರಂಭ ಮಾಡಿಲ್ಲ.

> ವಸತಿ ಸಮುಚ್ಚಯದ ಆವರಣ ತ್ಯಾಜ್ಯದ ತಾಣವಾಗಿದೆ. ಭದ್ರತೆಯೂ ಇಲ್ಲ. ಇಲ್ಲಿ ಫ್ಲ್ಯಾಟ್ ಖರೀದಿಸಿ ಸಂಕಷ್ಟ ಎದುರಿಸುತ್ತಿದ್ದೇವೆ
> **ನಾರಾಯಣ ಶೆಟ್ಟಿ,** ನಿವಾಸಿ

ಅಲ್ಲದೇ ಕಟ್ಟಡಕ್ಕೆ ಶಾಶ್ವತ ವಿದ್ಯುತ್ ಸಂಪರ್ಕವೇ ಇಲ್ಲ ಎಂದು ಅಪಾಯಕ್ಕೆ ಬಾಯ್ತೆರೆದಿರುವ ವಿದ್ಯುತ್ ತಂತಿಗಳನ್ನು ನಿವಾಸಿಗಳು ತೋರಿಸುತ್ತಾರೆ.

ಲಕ್ಷಾಂತರ ರೂಪಾಯಿ ನೀಡಿ ಒಂದು, ಎರಡು, ಮೂರು ಮಲಗುವ ಕೋಣೆಯುಳ್ಳ ಫ್ಲ್ಯಾಟ್ ಖರೀದಿಸಿದ್ದರೂ ಸಮಸ್ಯೆಗಳು ಕಾಡುತ್ತಿವೆ. ಎರಡು ವರ್ಷಗಳ ಹಿಂದೆ ಕೊಳವೆಬಾವಿ ಕೊರೆಸಿದ್ದರೂ ಸಂಪರ್ಕ ಕಲ್ಪಿಸಿಲ್ಲ.

ಸುದ್ದಿ 2 ನಿಮಿಷ


ಥೀಮ್‌ಪಾರ್ಕ್ ಕಾಮಗಾರಿ ಆರಂಭಕ್ಕೆ ಆಗ್ರಹ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡ ಥೀಮ್‌ಪಾರ್ಕ್ ನಿರ್ಮಾಣ ಯೋಜನೆ ಸ್ಥಗಿತಗೊಂಡಿದ್ದು, ತಕ್ಷಣವೇ ಕಾಮಗಾರಿಯನ್ನು ಆರಂಭಿಸಬೇಕು ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಪ್ರೇರಣೆಯಾಗಿ ಪಡೆದು ಕರುನಾಡನ್ನು ಪ್ರಗತಿಯತ್ತ ಕೊಂಡೊಯ್ಯಬೇಕು ಎನ್ನುವ ಸದುದ್ದೇಶದಿಂದ ಕೆಂಪೇಗೌಡ ಪ್ರತಿಮೆ ಸ್ಥಾಪಿಸಲಾಯಿತು. ಅವರ ದೂರದೃಷ್ಟಿ ಪ್ರತಿಬಿಂಬಿಸುವ ಥೀಮ್ ಪಾರ್ಕ್ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅದನ್ನು ಸ್ಥಗಿತಗೊಳಿರುವುದು ಬೇಸರದ ಸಂಗತಿ' ಎಂದು ಅವರು ಹೇಳಿದ್ದಾರೆ.

ಕನ್ನಡದ ಸೌಹಾರ್ದ ಪರಂಪರೆ ಉಳಿಯಲಿ: ಮಾವಳ್ಳಿ ಶಂಕರ್



ಬೆಂಗಳೂರು: ಕನ್ನಡ ಸಾಹಿತ್ಯದ ಸೌಹಾರ್ದ ಪರಂಪರೆ ಉಳಿಯಬೇಕು ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ 'ಹೆಸರಾಯಿತು ಕರ್ನಾಟಕ ಸುವರ್ಣ ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಕನ್ನಡ ಶಾಲೆ, ಸಾಹಿತ್ಯ ಮತ್ತು ಸಂಸ್ಕೃತಿ ಪರಂಪರೆಯ ಬೆಳವಣಿಗೆಗೆ ಸರ್ಕಾರ ಹೆಚ್ಚು ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಜಿ. ಅಶ್ವತ್ಥನಾರಾಣಯಣ, 'ಅನಕೃ ಅವರು ಕೇವಲ ಕಾದಂಬರಿ ಸಾರ್ವಭೌಮರಾಗಿರದೆ ಕನ್ನಡದ ಸಕಲ ಕಲಾವಲ್ಲಭನಾಗಿ, ಕನ್ನಡ ತೋಟದ ಮಾಲಿಯಾಗಿ ಜನಪ್ರಿಯತೆ ಪಡೆದುಕೊಂಡಿದ್ದರು. ಕನ್ನಡದ ಪುಸ್ತಕಗಳನ್ನು ಓದದ ಕನ್ನಡದ ಗೀತೆಗಳನ್ನು ಕೇಳದ, ಕನ್ನಡದ ಚಲನಚಿತ್ರಗಳನ್ನು ನೋಡದ, ಕನ್ನಡದ ಧ್ವಜವನ್ನು ಹಾರಿಸದ ಯಾರೂ ನೈಜ ಕನ್ನಡಿಗರಲ್ಲ ಎಂಬ ಸ್ವಾಭಿಮಾನ ಪೂರಕವಾದ ಮಾತುಗಳ ಮೂಲಕ ಕನ್ನಡಿಗರನ್ನು ಪ್ರೇರೇಪಿಸಿದ್ದರು' ಎಂದು ಸ್ಮರಿಸಿದರು.

ಬೆಂಗಳೂರು ನಗರ ಜಿಲ್ಲಾ ಕಸಾಪದ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಅನಕೃ ಅವರ ಸೊಸೆ ಶೋಭ ಗೌತಮ್, ಪ್ರಾಧ್ಯಾಪಕ ರುದ್ರೇಶ್ ಅದರಂಗಿ ಇದ್ದರು.

ಸುಶೀಲಾ, ಪ್ರೇಮಲತಾಗೆ ಎಚ್‌.ಗಿರಿಜಮ್ಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಪ್ರೇಮಲತಾ



ಸುಶೀಲಾ

ಬೆಂಗಳೂರು: ಡಾ.ಕೆ.ಸುಶೀಲಾ ಹಾಗೂ ಡಾ.ಬಿ.ಪ್ರೇಮಲತಾ ಅವರಿಗೆ 'ಡಾ.ಎಚ್.ಗಿರಿಜಮ್ಮ ಪ್ರಶಸ್ತಿ' ದೊರೆತಿದೆ.

ಸುಶೀಲಾ ಅವರ 'ವೈದ್ಯೆಯೊಬ್ಬರ ನೆನಪಿನ ಅಂಗಳದಿಂದ' ಪ್ರೇಮಲತಾ ಅವರ 'ಐದು ಬೆರಳುಗಳು' ಕಥಾ ಸಂಕಲನಗಳು ಪ್ರಶಸ್ತಿಗೆ ಆಯ್ಕೆಯಾಗಿವೆ. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

2022ರಲ್ಲಿ ವೈದ್ಯ ಲೇಖಕಿಯರು ಪ್ರಕಟಿಸಿದ ವೈದ್ಯ ಹಾಗೂ ವೈದ್ಯೇತರ ಸಾಹಿತ್ಯ ವಿಭಾಗದಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ವೈದ್ಯರಾದ ಸಿ.ಆರ್.ಚಂದ್ರಶೇಖರ್, ಆರ್.ಕೆ.ಸರೋಜಾ, ನಾ.ಸೋಮಶೇಖರ್, ಕವಯತ್ರಿ ಎಚ್.ಎಲ್.ಪುಷ್ಪಾ ಅವರನ್ನು ಒಳಗೊಂಡ ಸಮಿತಿ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಡಿ.9ರಂದು ನಡೆಯುವ ಸಮಾರಂಭದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದು ಡಾ.ಎಚ್.ಗಿರಿಜಮ್ಮ ಸ್ನೇಹ ಬಳಗದ ಸಂಚಾಲಕಿ ಡಾ.ವಸುಂಧರಾ ಭೂಪತಿ ಮಾಹಿತಿ ನೀಡಿದ್ದಾರೆ.

ವಿಶ್ವ ಮೀನುಗಾರಿಕೆ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೀನುಗಾರಿಕಾ ವಿವಿ: ಮುಂದಿನ ವರ್ಷ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀನುಗಾರಿಕಾ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಮುಂದಿನ ವರ್ಷ ವಿಚಾರ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ವಿಶ್ವ ಮೀನುಗಾರಿಕೆ ದಿನಾಚರಣೆ ಅಂಗವಾಗಿ ಮೀನುಗಾರರಿಗೆ ಮತ್ಸ್ಯ ವಾಹಿನಿ ಪರಿಸರ ಸ್ನೇಹಿ ತ್ರಿಚಕ್ರ ವಾಹನಗಳನ್ನು ವಿತರಿಸಿದ ಬಳಿಕ ಮಾತನಾಡಿದ ಅವರು, 'ಮೀನುಗಾರ ಸಮುದಾಯದ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಬದ್ಧವಾಗಿದ್ದು, ಮೀನಿನ ಸಂತತಿ ಮತ್ತು ಪ್ರಮಾಣ ಹೆಚ್ಚಿಸಲು ಎಲ್ಲ ರೀತಿಯ ನೆರವು ನೀಡಲಾಗುವುದು' ಎಂದರು.

'ಮೀನುಗಾರರ ಸಮಸ್ಯೆಗಳ ಪರಿಹಾರಕ್ಕೆ ವಿರೋಧ ಪಕ್ಷದ ನಾಯಕನಾಗಿ ಇದ್ದಾಗಿನಿಂದಲೂ ಅಧಿವೇಶನದಲ್ಲಿ ಹೋರಾಟ ನಡೆಸಿದ್ದೆ. ಆದರೂ ಹಿಂದಿನ ಸರ್ಕಾರ ಮತ್ತು ಸರ್ಕಾರದಲ್ಲಿದ್ದ ಸಚಿವರು ಪರಿಹಾರ ಒದಗಿಸಲಿಲ್ಲ. ರಿಯಾಯಿತಿಯಲ್ಲಿ ಡೀಸೆಲ್ ಕೊಡುವಂತೆ ಹೋರಾಟ ಮಾಡಿದರೂ ಸ್ಪಂದಿಸಲಿಲ್ಲ. ಹೀಗಾಗಿ, ನಾವು ಅಧಿಕಾರಕ್ಕೆ ಬಂದ ಬಳಿಕ ಈ ಬೇಡಿಕೆ ಈಡೇರಿಸಿದ್ದೇವೆ. ಮೀನುಗಾರ ಸಮುದಾಯದ ಮಹಿಳೆಯರಿಗೆ ನೀಡಲಾಗುವ ಸಹಾಯಧನವನ್ನು ₹ 50 ಸಾವಿರದಿಂದ 3 ಲಕ್ಷಕ್ಕೆ ಏರಿಸಿದ್ದು ನಮ್ಮ ಸರ್ಕಾರ. ಮುಂದಿನ ವರ್ಷದಿಂದ ಮೀನುಗಾರ ಸಮುದಾಯಕ್ಕೆ ಮನೆ ಕಟ್ಟಿಸಿ ಕೊಡುತ್ತೇವೆ' ಎಂದು ವಿವರಿಸಿದರು.

'ಮೀನುಗಾರ ಸಮುದಾಯದ ಸಮಸ್ಯೆಗಳನ್ನು ಆಲಿಸಿ ಎಲ್ಲ ಸಮಸ್ಯೆಗಳಿಗೆ ಕಾಲಮಿತಿಯಲ್ಲಿ ಪರಿಹಾರ ಒದಗಿಸಲು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ಮೀನುಗಾರ ಸಮುದಾಯಕ್ಕೆ ಮತ್ತು ಸಮುದಾಯದ ಮಕ್ಕಳಿಗೆ ನೀಡಿರುವ ಸರ್ಕಾರ ನೀಡುತ್ತಿರುವ ಸವಲತ್ತುಗಳ ಕುರಿತು ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಾಳ ವೈದ್ಯ ವಿವರಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಇದ್ದರು.



ವಿಧಾನಸೌಧದ ಆವರಣದಲ್ಲಿ ಮಂಗಳವಾರ ನಡೆದ ವಿಶ್ವ ಮೀನುಗಾರಿಕೆ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ವಿವಿಧ ಮೀನುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವೀಕ್ಷಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ

'5 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಚಿನ್ನದ ಆಮದು ಅಡ್ಡಿ'

ಮುಂಬೈ (ಪಿಟಿಐ): ಚಿನ್ನವನ್ನು ಆಮದು ಮಾಡಿಕೊಳ್ಳುವ ಚಾಳಿ ಇಲ್ಲದೇ ಇದ್ದಿದ್ದರೆ ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಯನ್ನು ಭಾರತ ಬಹಳ ಹಿಂದೆ ತಲುಪುತ್ತಿತ್ತು ಎಂದು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಸಮಿತಿಯ ಸದಸ್ಯ ನೀಲೇಶ್ ಶಾ ಹೇಳಿದ್ದಾರೆ.

'21 ವರ್ಷಗಳಲ್ಲಿ ಭಾರತವು ₹41.50 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದು ಮಾಡಿಕೊಂಡಿದೆ. ಚಿನ್ನ ಆಮದು ಮಾಡಿಕೊಳ್ಳವ ಈ ಒಂದು ಚಾಳಿ ಇಲ್ಲದೇ ಇದ್ದಿದ್ದರೆ ಬಹಳ ಹಿಂದೆಯೇ ಆ ಗುರಿಯನ್ನು ನಾವು ತಲುಪುತ್ತಿದ್ದೆವು' ಎಂದು ಅವರು ತಿಳಿಸಿದ್ದಾರೆ.

ಹೆಲಿಕಾಪ್ಟರ್ ಏರಲು ಹೋಗಿ ಹಣ ಕಳೆದುಕೊಂಡ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇದಾರನಾಥ್ ಯಾತ್ರೆಗೆ ತೆರಳಲು ಸಜ್ಜಾಗಿದ್ದ ನಗರದ ಮಹಿಳೆಯೊಬ್ಬರು ಹೆಲಿಕಾಪ್ಟರ್‌ನಲ್ಲಿ ಸೀಟು ಕಾಯ್ದಿರಿಸಲು ಹೋಗಿ ₹ 30 ಸಾವಿರ ಕಳೆದುಕೊಂಡಿದ್ದಾರೆ. ಈ ವಂಚನೆ ಸಂಬಂಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕುಮಾರಸ್ವಾಮಿ ಲೇಔಟ್ ನಿವಾಸಿಯಾಗಿರುವ 37 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆ ಕೇದಾರನಾಥ್ ಯಾತ್ರೆಗೆ ಹೊರಟಿದ್ದರು. ಯಾವ ರೀತಿ ಹೋಗಬೇಕು? ಹೆಲಿಕಾಪ್ಟರ್ ಸೀಟು ಕಾಯ್ದಿರಿಸುವುದು ಹೇಗೆ? ಎಂಬ ಬಗ್ಗೆ ಆನ್‌ಲೈನ್‌ನಲ್ಲಿ ಹುಡುಕಾಡಿದ್ದರು. ಇದೇ ವೇಳೆ, ‘ಸರ್ಕಾರ ನಿಗದಿಪಡಿಸಿರುವ ದರದಲ್ಲಿ ಮುಂಗಡವಾಗಿ ಹೆಲಿಕಾಪ್ಟರ್ ಸೀಟು ಕಾಯ್ದಿರಿಸಿ’ ಎಂಬ ಜಾಹೀರಾತು ನೋಡಿದ್ದರು.’

‘ಜಾಹೀರಾತಿನಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದ ಮಹಿಳೆ, ಮುಂಗಡವಾಗಿ ಸೀಟು ಕಾಯ್ದಿರಿಸುವ ಬಗ್ಗೆ ಮಾತನಾಡಿದ್ದರು. ‘ಗುಪ್ತ ಕಾಶಿಯಿಂದ ಕೇದರನಾಥ ದೇವಸ್ಥಾನಕ್ಕೆ ತೆರಳಲು 2023ರ ಸೆ. 12ರಂದು ನಿಮಗೊಂದು ಸೀಟು ಕಾಯ್ದಿರಿಸಲಾಗಿದೆ. ಹಣ ಪಾವತಿ ಮಾಡಿ’ ಎಂದು ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ಮಹಿಳೆ, ಹಂತ ಹಂತವಾಗಿ ₹ 30,970 ಪಾವತಿಸಿದ್ದರು. ಇದಾದ ನಂತರ ಆರೋಪಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ನಿಗದಿಗಿಂತ ಹೆಚ್ಚು ಮಕ್ಕಳನ್ನು ಕರೆದೊಯ್ಯುವ ವಾಹನಗಳ ಪತ್ತೆ

ಶಾಲಾ ವಾಹನಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವಕ್ಕೆ ಅಪತ್ತು ತರುವ ರೀತಿಯಲ್ಲಿ ನಿಗದಿಗಿಂತ ಹೆಚ್ಚು ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳನ್ನು ಪತ್ತೆ ಮಾಡಲು ಸಂಚಾರ ಪೊಲೀಸರು ಮಂಗಳವಾರ ವಿಶೇಷ ಕಾರ್ಯಾಚರಣೆ ನಡೆಸಿದರು.

ನಗರದ ಪ್ರಮುಖ ರಸ್ತೆಗಳು ಹಾಗೂ ಒಳ ರಸ್ತೆಗಳಲ್ಲಿ ವಾಹನಗಳನ್ನು ತಡೆದು ತಪಾಸಣೆ ನಡೆಸಿದ ಪೊಲೀಸರು, ನಿಯಮ ಉಲ್ಲಂಘಿಸಿದವರಿಗೆ ಸ್ಥಳದಲ್ಲೇ ದಂಡ ವಿಧಿಸಿದರು. ದಂಡ ಪಾವತಿಸಲು ಸಾಧ್ಯವಾಗದ ಚಾಲಕರಿಗೆ ನೋಟಿಸ್ ನೀಡಿದರು.

‘ಆಟೊ, ಓಮ್ನಿ, ವ್ಯಾನ್ ಹಾಗೂ ಇತರೆ ಪ್ರಕಾರಗಳ ವಾಹನಗಳಲ್ಲಿ ಮಕ್ಕಳನ್ನು ಮನೆಯಿಂದ ಶಾಲೆಗೆ–ಶಾಲೆಯಿಂದ ಮನೆಗೆ ಕರೆದೊಯ್ಯಲಾಗುತ್ತದೆ. ಹಲವು ಚಾಲಕರು ಹಣದ ಆಸೆಗಾಗಿ, ನಿಗದಿಗಿಂತ ಹೆಚ್ಚು ಮಕ್ಕಳನ್ನು ವಾಹನದಲ್ಲಿ ಹತ್ತಿಸಿಕೊಳ್ಳುತ್ತಾರೆ. ಕೆಲವರಂತೂ ಉಸಿರಾಡಲು ಸಾಧ್ಯವಾಗದ ರೀತಿಯಲ್ಲಿ ಮಕ್ಕಳನ್ನು ವಾಹನದಲ್ಲಿ ಕೂರಿಸಿರುತ್ತಾರೆ’ ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ನಗರದ ಆನಂದರಾವ್ ವೃತ್ತದಲ್ಲಿ ಶಾಲಾ ವಾಹನಗಳನ್ನು ತಡೆದು ಸಂಚಾರ ಪೊಲೀಸರು ಮಂಗಳವಾರ ತಪಾಸಣೆ ನಡೆಸಿದರು

‘ವಾಹನಗಳು ಅಪಘಾತವಾದರೆ ಅಥವಾ ಯಾವುದಾದರೂ ಅವಘಡ ಸಂಭವಿಸಿದರೆ, ಮಕ್ಕಳು ವಾಹನದಿಂದ ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಚಾಲಕರ ವರ್ತನೆಯಿಂದ ಮಕ್ಕಳ ಜೀವಕ್ಕೆ ಕುತ್ತು ಬರುವ ಸಂಭವ ಹೆಚ್ಚು. ಇದೇ ಕಾರಣಕ್ಕೆ ವಾಹನಗಳನ್ನು ತಡೆದು ಚಾಲಕರಿಗೆ ದಂಡ ವಿಧಿಸಲಾಗುತ್ತಿದೆ’ ಎಂದು ತಿಳಿಸಿದರು.

ನೋಟಿಸ್ ನೀಡಿ ಎಚ್ಚರಿಕೆ: ‘ಉಪ್ಪಾರಪೇಟೆ, ಹೈಗ್ರೌಂಡ್ಸ್, ಮಲ್ಲೇಶ್ವರ ಹಾಗೂ ಸುತ್ತಮುತ್ತ ಠಾಣೆಗಳ ವ್ಯಾಪ್ತಿಯಲ್ಲಿ ಮಂಗಳವಾರ ಬೆಳಿಗ್ಗೆ, ಸಂಜೆ ಹಾಗೂ ಮಧ್ಯಾಹ್ನ ಪ್ರತ್ಯೇಕ ತಂಡಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಹಲವು ವಾಹನಗಳಲ್ಲಿ ಹೆಚ್ಚುವರಿಯಾಗಿ ಮಕ್ಕಳನ್ನು ಕೂರಿಸಿಕೊಂಡಿದ್ದು ಕಂಡುಬಂತು’ ಎಂದು ಸಂಚಾರ ಪೊಲೀಸರು ಹೇಳಿದರು.

‘ತಪ್ಪಿತಸ್ಥ ವಾಹನಗಳ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಮುಂದಿನ ದಿನಗಳಲ್ಲಿ ಹೆಚ್ಚುವರಿಯಾಗಿ ಮಕ್ಕಳನ್ನು ಕರೆದೊಯ್ಯದಂತೆ ಎಚ್ಚರಿಕೆ ಸಹ ನೀಡಲಾಯಿತು. ವಾಹನಗಳ ಪತ್ತೆ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ತಿಳಿಸಿದರು.

₹ 1.15 ಕೋಟಿ ಮೌಲ್ಯದ ವಸ್ತುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗ ವ್ಯಾಪ್ತಿಯ ಠಾಣೆಗಳಲ್ಲಿ ದಾಖಲಾಗಿದ್ದ ಹಲವು ಅಪರಾಧ ಪ್ರಕರಣಗಳನ್ನು ಭೇದಿಸಿರುವ ಪೊಲೀಸರು, ಆರೋಪಿಗಳನ್ನು ಬಂಧಿಸಿ ₹ 1.15 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

‘ಗೋವಿಂದರಾಜನಗರ, ಅನ್ನಪೂರ್ಣೇಶ್ವರಿನಗರ, ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. 1 ಕೆ.ಜಿ 215 ಗ್ರಾಂ ಚಿನ್ನಾಭರಣ ಮತ್ತು 3 ಕೆ.ಜಿ 500 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಕಮಿಷನರ್ ಬಿ. ದಯಾನಂದ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೋಟೆಲ್‌ನಲ್ಲಿ ನಷ್ಟವಾಗಿದ್ದರಿಂದ ಕಳ್ಳತನ: ‘ಬಸವೇಶ್ವರ ನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ಸುನೀಲ್‌ನನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

‘ಆರೋಪಿ ಸುನೀಲ್, ಹೋಟೆಲ್ ವ್ಯವಹಾರ ನಡೆಸುತ್ತಿದ್ದ. ಅದರಲ್ಲಿ ನಷ್ಟ ಅನುಭವಿಸಿದ್ದ. ನಂತರ, ಮನೆಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅದೇ ಮನೆಯಲ್ಲಿ 97 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಿದ್ದ. ಮನೆ ಮಾಲೀಕ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದರು.

ಮಣ್ಣಿನಲ್ಲಿ ಹೂತಿಟ್ಟಿದ್ದವನ ಬಂಧನ: ‘ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿ ಪರಾರಿಯಾಗಿದ್ದ ಕಾರ್ತಿಕ್ ಅಲಿಯಾಸ್ ಎಸ್ಕೇಪ್‌ನನ್ನು ಬಂಧಿಸಲಾಗಿದೆ. ಈತನಿಂದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾರ್ತಿಕ್ ವಿರುದ್ಧ ಕರ್ನಾಟಕ ಹಾಗೂ ಇತರೆ ರಾಜ್ಯಗಳಲ್ಲಿ 80 ಪ್ರಕರಣಗಳು ದಾಖಲಾಗಿದ್ದವು. ಬಂಧನ ವಾರೆಂಟ್ ಸಹ ಜಾರಿಯಲ್ಲಿದ್ದವು. ಕಳ್ಳತನ ಮಾಡಿದ್ದ ಚಿನ್ನಾಭರಣವನ್ನು ಮಣ್ಣಿನಲ್ಲಿ ಹೂತಿಟ್ಟು ಆರೋಪಿ ತಲೆಮರೆಸಿಕೊಂಡು ಸುತ್ತಾಡುತ್ತಿದ್ದ. ಇತ್ತೀಚೆಗೆ ಈತನನ್ನು ಗೋವಾದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಈತನ ಸಮ್ಮುಖದಲ್ಲಿಯೇ ಮಣ್ಣಿನಲ್ಲಿ ಹೂತಿಟ್ಟಿದ್ದ ಚಿನ್ನಾಭರಣವನ್ನು ಹೊರಗೆ ತೆಗೆಯಲಾಯಿತು’ ಎಂದರು.

ಕ್ರಿಕೆಟ್ ಬೆಟ್ಟಿಂಗ್: 10 ಚಿನ್ನದ ಬಿಸ್ಕತ್ ಜಪ್ತಿ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ 10 ಚಿನ್ನದ ಬಿಸ್ಕತ್‌ಗಳನ್ನು ಜಪ್ತಿ ಮಾಡಿದ್ದಾರೆ.

‘ಸಾಕೇತ್ ಹಾಗೂ ರಿಷಭ್ ಬಂಧಿತರು. ರಾಜರಾಜೇಶ್ವರಿನಗರ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್ ಮೇಲೆ ಇತ್ತೀಚೆಗೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘₹ 65 ಲಕ್ಷ ಮೌಲ್ಯದ 10 ಚಿನ್ನದ ಬಿಸ್ಕತ್, 3 ಲ್ಯಾಪ್‌ಟಾಪ್, 1 ಟ್ಯಾಬ್, 3 ಮೊಬೈಲ್ ಹಾಗೂ ₹ 2,341 ಜಪ್ತಿ ಮಾಡಲಾಗಿದೆ’ ಎಂದರು.

‘ಕ್ರಿಕೆಟ್ ಬೆಟ್ಟಿಂಗ್ ಜಾಲತಾಣ ಹಾಗೂ ಆ್ಯಪ್‌ಗಳಲ್ಲಿ ಆರೋಪಿಗಳು ಖಾತೆ ತೆರೆದಿದ್ದರು. ಅದೇ ಖಾತೆಗಳ ಸಹಾಯದಿಂದ ಬೆಟ್ಟಿಂಗ್ ನಡೆಸುತ್ತಿದ್ದರು. ಸೋಲು–ಗೆಲುವು ಲೆಕ್ಕಾಚಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಜೊತೆಗೆ, ಸಹಚರರ ಮೂಲಕವೇ ಬೆಟ್ಟಿಂಗ್ ಆಡಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಮತ್ತೊಂದು ಲೈಂಗಿಕ ದೌರ್ಜನ್ಯ

‘ನಮ್ಮ ಮೆಟ್ರೊ’: ದಟ್ಟಣೆ ಅವಧಿಯಲ್ಲಿ ಯುವತಿಯರಿಗೆ ತೊಂದರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಟ್ಟಣೆ ಅವಧಿಯಲ್ಲಿ ‘ನಮ್ಮ ಮೆಟ್ರೊ’ ರೈಲಿನಲ್ಲಿ ಪ್ರಯಾಣಿಸುವ ಯುವತಿಯರು ಹಾಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಬಿಎಂಆರ್‌ಸಿಎಲ್ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ. ಹಲವರು ಸಾಮಾಜಿಕ ಮಾಧ್ಯಮದಲ್ಲಿ ಭದ್ರತಾ ವೈಫಲ್ಯದ ಬಗ್ಗೆ ಪ್ರಶ್ನೆ ಮಾಡುತ್ತಿದ್ದಾರೆ.

ಕೆಲವು ದಿನಗಳ ಹಿಂದೆ ‘ನಮ್ಮ ಮೆಟ್ರೊ’ದಲ್ಲಿ ಪ್ರಯಾಣಿಸುವಾಗ ಆಗಿರುವ ಲೈಂಗಿಕ ದೌರ್ಜನ್ಯ ಪ್ರಕರಣವೊಂದರ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಆಕೆಯ ಸ್ನೇಹಿತರೊಬ್ಬರು ಘಟನೆ ಕುರಿತು ಬರೆದುಕೊಂಡಿದ್ದಾರೆ. ಇದನ್ನು ಗಮನಿಸಿದ ಹಲವರು ದೌರ್ಜನ್ಯ ಎಸಗಿದ ವ್ಯಕ್ತಿಯ ಪತ್ತೆಗೆ ಹಲವು ರೀತಿಯಲ್ಲಿ ಸಲಹೆ ನೀಡಿದ್ದರು. ಆರೋಪಿ ವಿರುದ್ಧ ಕ್ರಮಕ್ಕೂ ಆಗ್ರಹಿಸಿದ್ದಾರೆ.



ಅಂದು ಏನಾಗಿತ್ತು?: ‘ಆಕೆ ನಿತ್ಯ ಕಾಲೇಜಿಗೆ ಬಸ್‌ನಲ್ಲೇ ತೆರಳುತ್ತಿದ್ದರು. ಆದರೆ, ಅಂದು ಬೆಳಿಗ್ಗೆ 8.30ರ ಸುಮಾರಿಗೆ ಮೆಟ್ರೊದಲ್ಲಿ ಪ್ರಯಾಣಿಸಲು ಮೆಜೆಸ್ಟಿಕ್‌ಗೆ ಬಂದಿದ್ದರು. ಮೆಟ್ರೊ ಏರುವಾಗ ದಟ್ಟಣೆಯಿತ್ತು. ರೈಲು ಏರಿದ ಮೇಲೆ ಕೆಂಪು ಅಂಗಿ ಧರಿಸಿದ್ದ ವ್ಯಕ್ತಿಯೊಬ್ಬ ಹಿಂದಿನಿಂದ ಸ್ಪರ್ಶಿಸಿದ್ದಾನೆ. ಆರಂಭದಲ್ಲಿ ಆಕೆಗೆ ಏನಾಗುತ್ತಿದೆ ಎಂಬ ಅರಿವು ಇರಲಿಲ್ಲ. ಮುಂದಕ್ಕೆ ತೆರಳಿ ಸಹಾಯಕ್ಕೆ ಕೋರಿದ್ದರೂ ಮೆಟ್ರೊ ಪ್ರಯಾಣಿಕರು ನೆರವಿಗೆ ಬಂದಿರಲಿಲ್ಲ’ ಎಂದು ಬರೆದುಕೊಂಡಿದ್ದಾರೆ.

> **ಘಟನೆ ಕುರಿತು ಇದುವರೆಗೂ ಯಾರೂ ದೂರು ನೀಡಿಲ್ಲ. ದೂರು ನೀಡಿದರೆ ತಕ್ಷಣವೇ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ**
> **ಅಂಜುಂ ಪರ್ವೇಜ್**
> ವ್ಯವಸ್ಥಾಪಕ ನಿರ್ದೇಶಕ

ಇದನ್ನು ಗಮನಿಸಿದ ಹಲವರು ಮೆಟ್ರೊ ಸಂಪೂರ್ಣ ಸಿಸಿ ಟಿ.ವಿ ಕ್ಯಾಮೆರಾದ ಕಣ್ಗಾವಲಿನಲ್ಲಿದೆ. ದೂರು ಸಲ್ಲಿಸಿದರೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ ಎಂದು ಸಲಹೆ ನೀಡಿದ್ದಾರೆ. ಜತೆಗೆ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರನ್ನೂ ಸಂಪರ್ಕಿಸಿ ದೂರು ನೀಡಬಹುದು ಎಂದು ಕೆಲವರು ಸಲಹೆ ನೀಡಿದ್ದಾರೆ.

ಕಳೆದ ಸೆ.9ರಂದು ಇಂತಹದ್ದೇ ಘಟನೆಯೊಂದು ನಡೆದಿತ್ತು. ನಗರದ ಕಾಲೇಜೊಂದರ 20 ವರ್ಷದ ವಿದ್ಯಾರ್ಥಿನಿ, ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ್ದರು. ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು, ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಹಲಸೂರು ಗೇಟ್ ಠಾಣೆಗೆ ಇತ್ತೀಚೆಗೆ ವರ್ಗಾಯಿಸಲಾಗಿತ್ತು.

‘ಸ್ನೇಹಿತೆ ಜೊತೆ ಮೆಜೆಸ್ಟಿಕ್‌ಗೆ ಹೋಗಲು, ಎಂ.ಜಿ. ರಸ್ತೆಯಲ್ಲಿರುವ ಮೆಟ್ರೊ ನಿಲ್ದಾಣದಲ್ಲಿ ರೈಲು ಹತ್ತಿದ್ದೆ. ಸೆಂಟ್ರಲ್ ಕಾಲೇಜು ನಿಲ್ದಾಣ ಬಳಿ ರೈಲು ಚಲಿಸುತ್ತಿದ್ದಾಗ, ಹಿಂದಿನಿಂದ ಆರೋಪಿ ತನ್ನ ಖಾಸಗಿ ಭಾಗವನ್ನು ತಾಗಿಸಿ ಅನುಚಿತವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದ’ ಎಂದು ಉಲ್ಲೇಖಿಸಿ ದೂರು ನೀಡಿದ್ದರು.

ಕಳೆದ ಕೆಲವು ದಿನಗಳ ಹಿಂದೆ ಪ್ರಯಾಣಿಕರೊಬ್ಬರ ಪರ್ಸ್ ಸಹ ಕಳವು ಮಾಡಲಾಗಿತ್ತು. ಅವರು ಉಪ್ಪಾರಪೇಟೆ ಠಾಣೆಗೆ ದೂರು ನೀಡಿದ್ದರು. ಈ ಎರಡು ಘಟನೆಗಳು ನಡೆದ ಮೇಲೆ ದಟ್ಟಣೆ ಅವಧಿಯಲ್ಲಿ ಮಹಿಳಾ ಭದ್ರತಾ ಸಿಬ್ಬಂದಿ ರೈಲು ಚಲಿಸುವ ಸಂದರ್ಭದಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಂಗನವಾಡಿ: ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ.

‘ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 430 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 1,198 ಸಹಾಯಕಿಯರ ಹುದ್ದೆಗಳು ಖಾಲಿ ಇವೆ’ ಎಂದು ಪ್ರತಿಭಟನಾಕಾರರು ದೂರಿದರು.

ಸತ್ತಂತೆ ಬಿಂಬಿಸಿ ನಾಪತ್ತೆಯಾಗಿದ್ದ ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಬಂಧನದಿಂದ ತಪ್ಪಿಸಿಕೊಳ್ಳಲು ಸತ್ತಂತೆ ಬಿಂಬಿಸಿ ದಾಖಲೆಗಳನ್ನು ಸೃಷ್ಟಿಸಿ ತಲೆಮರೆಸಿಕೊಂಡಿದ್ದ ರೌಡಿ ಮಲ್ಲಿಕಾರ್ಜುನ್ ಅಲಿಯಾಸ್ ಮಲ್ಲಿಯನ್ನು ಸಿಸಿಬಿ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ.

‘ಎರಡು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಮಲ್ಲಿ ಹೆಸರು ವೈಟ್‌ಫೀಲ್ಡ್ ಠಾಣೆಯ ರೌಡಿ ಪಟ್ಟಿಯಲ್ಲಿತ್ತು. ಎರಡು ವರ್ಷಗಳಿಂದ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ ಮಲ್ಲಿ, ವಿಚಾರಣೆಗೆ ಗೈರಾಗುತ್ತಿದ್ದ. ಈತನ ಬಂಧನಕ್ಕೆ ಪೊಲೀಸರು ಶೋಧ ಆರಂಭಿಸಿದ್ದರು. ‘ಮಲ್ಲಿ ಸತ್ತಿದ್ದಾನೆ’ ಎಂಬುದಾಗಿ ಕುಟುಂಬಸ್ಥರು ಹೇಳಲಾರಂಭಿಸಿದ್ದರು. ಮರಣದ ದಾಖಲೆಗಳನ್ನು ತೋರಿಸುತ್ತಿದ್ದರು.‘ಮಲ್ಲಿ ಜೀವಂತವಿರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಅವುಗಳ ಸುಳಿವಿನಿಂದ ಮಲ್ಲಿ ಸಿಕ್ಕಿಬಿದ್ದ’ ಎಂದರು

ಚುಡಾಯಿಸಿದ್ದಕ್ಕೆ ಕೊಲೆ: ತಂದೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯ ಸುಬ್ಬಣ್ಣ ಗಾರ್ಡನ್ ಬಳಿ ಡೇವಿಡ್ ಅವರನ್ನು ಕೊಲೆ ಮಾಡಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ವಿನಾಯಕನಗರದ ನಿವಾಸಿ ಡೇವಿಡ್, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಸ್ಥಳೀಯ ಬಾಲಕಿಯನ್ನು ಹಿಂಬಾಲಿಸುತ್ತ ಚುಡಾಯಿಸುತ್ತಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕೆ ಕೋಪಗೊಂಡ ಬಾಲಕಿಯ ತಂದೆಯೇ ಈ ಕೊಲೆ ಮಾಡಿದ್ದಾರೆ. ಇದೊಂದು ಬಾಲಕಿಗೆ ಸಂಬಂಧಪಟ್ಟ ಪ್ರಕರಣವಾಗಿರುವುದರಿಂದ ತಂದೆ ಹೆಸರು ಬಹಿರಂಗ ಪಡಿಸಲಾಗದು’ ಎಂದು ಪೊಲೀಸರು ಹೇಳಿದರು.

‘ಚಾಲಕನಾಗಿರುವ ಆರೋಪಿ, ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಇವರ ಮಗಳ ಹಿಂದೆ ಬಿದ್ದಿದ್ದ ಡೇವಿಡ್, ನಿತ್ಯವೂ ಚುಡಾಯಿಸುತ್ತಿದ್ದ. ಎಚ್ಚರಿಕೆ ನೀಡಿದರೂ ಸುಧಾರಿಸಿರಲಿಲ್ಲ. ಇದರಿಂದ ಬಾಲಕಿ ತಂದೆ ಕೋಪಗೊಂಡಿದ್ದರು.’

‘ಬಾಲಕಿ ಜೊತೆ ಫೋಟೊ ಕ್ಲಿಕ್ಕಿಸಿಕೊಂಡಿದ್ದ ಡೇವಿಡ್, ಅದನ್ನು ತೋರಿಸಿ ತಂದೆಯನ್ನು ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ಬಾಲಕಿಯನ್ನು ತನ್ನ ಜೊತೆ ಮದುವೆ ಮಾಡಿಕೊಡುವಂತೆ ಒತ್ತಾಯಿಸಲಾರಂಭಿಸಿದ್ದರು. ಇದು ತಂದೆಗೆ ಮತ್ತಷ್ಟು ಕೋಪ ತರಿಸಿತ್ತು’ ಎಂದು ಪೊಲೀಸರು ತಿಳಿಸಿದರು.

ಮಾತುಕತೆಗೆ ಕರೆದು ಕೊಲೆ: ‘ಬಾಲಕಿಯ ಮದುವೆ ಬಗ್ಗೆ ಮಾತನಾಡೋಣವೆಂದಿದ್ದ ತಂದೆ, ಡೇವಿಡ್ ಅವರನ್ನು ಸೋಮವಾರ ರಾತ್ರಿ ಮನೆಗೆ ಕರೆಸಿಕೊಂಡಿದ್ದ. ಇದೇ ಸಂದರ್ಭದಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು’ ಎಂದು ಪೊಲೀಸರು ಹೇಳಿದರು.

‘ಆರೋಪಿ ತಂದೆ, ಚಾಕುವಿನಿಂದ ಡೇವಿಡ್ ಅವರಿಗೆ ಹಲವು ಬಾರಿ ಇರಿದಿದ್ದ. ಕುಸಿದು ಬಿದ್ದ ಡೇವಿಡ್ ತಲೆ ಮೇಲೆ ಕಲ್ಲು ಎತ್ತಿ ಹಾಕಿದ್ದ. ತೀವ್ರ ಗಾಯಗೊಂಡು ಡೇವಿಡ್ ಸ್ಥಳದಲ್ಲೇ ಮೃತಪಟ್ಟಿದ್ದ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು’ ಎಂದು ತಿಳಿಸಿದರು.

ಅತ್ತೆ ಮನೆಯಲ್ಲಿ ಕಳ್ಳತನ: ಅಳಿಯ ಸೆರೆ

ಬೆಂಗಳೂರು: ಹಲಸೂರು ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಪ್ರದೀಪ್‌ಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಪ್ರದೀಪ್, ತನ್ನ ಅತ್ತೆ ರೆಜಿನಾ (ಪತ್ನಿಯ ತಾಯಿ) ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ. ಅತ್ತೆ ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಪ್ರದೀಪ್‌ನನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹಲಸೂರು ಠಾಣೆ ವ್ಯಾಪ್ತಿಯ ನಿವಾಸಿ ರೆಜಿನಾ ಅವರ ಮಗಳು ಹಾಗೂ ಪ್ರದೀಪ್ ಪರಸ್ಪರ ಪ್ರೀತಿಸುತ್ತಿದ್ದರು. ಅವರಿಬ್ಬರು ಒಂದೂವರೆ ವರ್ಷದ ಹಿಂದೆ ಮನೆ ಬಿಟ್ಟು ಹೋಗಿದ್ದರು. ಯುವತಿ ನಾಪತ್ತೆ ಬಗ್ಗೆ ಪ್ರಕರಣವೂ ದಾಖಲಾಗಿತ್ತು’ ಎಂದರು.

‘ರೆಜಿನಾ ಅವರು ಅಕ್ಟೋಬರ್‌ನಲ್ಲಿ ಹೊರ ರಾಜ್ಯದ ಪ್ರವಾಸಕ್ಕೆ ಹೋಗಿದ್ದರು. ಮನೆಯಲ್ಲಿ ಯಾರೂ ಇರಲಿಲ್ಲ. ಅ. 30ರಂದು ಮನೆಗೆ ಹೋಗಿದ್ದ ಆರೋಪಿ, ಮನೆಯಲ್ಲಿದ್ದ ಎಲ್ಲ ವಸ್ತುಗಳನ್ನು ವಾಹನದಲ್ಲಿ ಸಾಗಿಸುತ್ತಿದ್ದ. ಅದನ್ನು ನೋಡಿದ್ದ ಪಕ್ಕದ ಮನೆಯವರು, ಫೋಟೊ ತೆಗೆದು ರೆಜಿನಾ ಅವರಿಗೆ ಕಳುಹಿಸಿದ್ದರು. ಆದರೆ, ಪ್ರವಾಸದಲ್ಲಿದ್ದ ರೆಜಿನಾ ನೆಟ್‌ವರ್ಕ್ ಸಮಸ್ಯೆಯಿಂದ ಫೋಟೊ ನೋಡಿರಲಿಲ್ಲ. ವಸ್ತುಗಳ ಸಮೇತ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ’ ಎಂದು ಹೇಳಿದರು.

‘ಪ್ರವಾಸ ಮುಗಿಸಿ ರೆಜಿನಾ ಮನೆಗೆ ವಾಪಸು ಬಂದಿದ್ದರು. ಅಳಿಯ ಮನೆಗೆ ಬಂದು ಹೋಗಿದ್ದನ್ನು ಸ್ಥಳೀಯರು ತಿಳಿಸಿದ್ದರು. ಮನೆಯಲ್ಲಿ ಪರಿಶೀಲಿಸಿದಾಗ ₹ 40 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಇತರೆ ವಸ್ತುಗಳು ಕಳ್ಳತನ ಆಗಿತ್ತು ಗೊತ್ತಾಗಿತ್ತು. ಬಳಿಕ ಠಾಣೆಗೆ ದೂರು ನೀಡಿದ್ದರು’ ಎಂದು ತಿಳಿಸಿದರು.

PUBLIC NOTICE

Our client ('**Client**') is desirous of entering into certain transaction in connection with the immovable properties morefully described in the '**Schedule**' hereto and hereinafter collectively referred to as '**Schedule Properties**' with: (i) Mrs. Saroj Goyal, wife of Mr. Rajendra Goyal; (ii) Mr. Satish Kumar Goyal & Mr. Anil Goyal, both sons of Late Vidhya Rani Goyal; and (iii) Mr. Subhash Chandra Goyal, son of Mr. Mothi Ram Goyal, all residing at Bengaluru ('**Owners**'). The Owners have represented to our Client that they are the absolute owners of their respective portions of the Schedule Properties (mentioned herein below), with unrestricted rights of alienation over the same.

Notice is hereby given to the general public that any person/s other than the Owners, asserting any right, title, charge, lien, claim/s or any interest whatsoever in respect of the Schedule Properties are hereby called upon to submit to the undersigned, their claim/s, if any, over the Schedule Properties or their objections, if any, to the aforementioned transaction. The said claim/s or objections must be in writing, together with documentary proof of such claim/s or objections, so as to reach us at the address given below within a period of 15 (Fifteen) days from the date of publication of this Notice. If no such claim/s or objections are received, it shall be deemed that no one else other than the Owners has/ have any right, title, interest or claim/s in respect of the Schedule Properties and our Client would be at liberty to proceed with the said transaction in connection with the Schedule Properties.

SCHEDULE
(Description of the Schedule Properties)

All that piece and parcel of immovable properties, totally admeasuring 03 Acres, situated at Hoodi Village, K. R. Puram Hobli, Bengaluru East Taluk and Bengaluru Urban District, described in the table below:

Sl. No.	Survey No.	Extent	Boundaries		Owner's name
1	Portion of Survey No. 129/1A	01 Acre	East by	Land bearing Survey No. 129/B1;	Mrs. Saroj Goyal, wife of Mr. Rajendra Goyal
			West by	Remaining portion of land bearing Survey No. 129/1A;	
			North by	Land bearing Survey No. 129/1C; and	
			South by	Government Land. The approach to this land is by 30 feet wide road from Krishnarajapura to Whitefield road.	
2	Portion of Survey No. 129/1A	01 Acre 20 Guntas	East by	Remaining portion of the land bearing Survey No. 129/1A;	Mr. Satish Kumar Goyal & Mr. Anil Goyal, both sons of Late Vidhya Rani Goyal
			West by	Remaining portion of the land bearing Survey No. 129/1A belonging to Mrs. Vidya Rani Goyal;	
			North by	Land bearing Survey No. 129/1C; and	
			South by	Government Land. The approach to this land is by 30 feet wide road from Krishnarajapura to Whitefield road.	
3	Portion of Survey No. 129/1A	20 Guntas	East by	Remaining portion of the land bearing Survey No. 129/1A belonging to Mr. Subash Chandra Goyal;	Mr. Subhash Chandra Goyal
			West by	Lands bearing Survey Nos. 126 & 128;	
			North by	Land bearing Survey No. 129/1C; and	
			South by	Government Land. The approach to this land is by 30 feet wide road from Krishnarajapura to Whitefield road.	

Sd/-
Mr. Srinivas B.R. & Ms. Brijita Prakash, Partners
DSK Legal,
Prestige Loka, No. 201, 2nd Floor, No. 7/1 & 7/7, Brunton Road,
Craig Park Layout, Bengaluru – 560025. Tel: 080-69548770.

Date: 22.11.2023
Place : Bengaluru

ಪೇಯಿಂಗ್ ಗೆಸ್ಟ್ ಮಾಹಿತಿ ದಾಖಲಿಸಲು ‘ವೆಬ್‌ಪೋರ್ಟಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿರುವ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡಗಳ ಬಗ್ಗೆ ಮಾಹಿತಿ ದಾಖಲಿಸಲು ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದ್ದು, ಮಾಹಿತಿ ಭರ್ತಿ ಮಾಡಲು ಕಟ್ಟಡಗಳ ಮಾಲೀಕರಿಗೆ ಸೂಚನೆ ನೀಡಲಾಗಿದೆ’ ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಾರತ್‌ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಇದು ಯಶಸ್ವಿಯಾದರೆ, ನಗರದ ಎಲ್ಲ ಕಡೆಯೂ ವಿಸ್ತರಣೆ ಮಾಡಲಾಗುವುದು’ ಎಂದರು.

‘ನಗರದಲ್ಲಿ ಸುಮಾರು 5 ಸಾವಿರ ಪೇಯಿಂಗ್ ಗೆಸ್ಟ್ ಕಟ್ಟಡಗಳಿವೆ. ಇದರಲ್ಲಿ ಸುಮಾರು 4 ಲಕ್ಷ ಮಂದಿ ವಾಸಿಸುತ್ತಿದ್ದಾರೆ. ಅವರು ಯಾರು ? ಯಾವ ಕಾರಣಕ್ಕೆ ವಾಸವಿದ್ದಾರೆ ? ಏನು ಮಾಡುತ್ತಾರೆ ? ಸೇರಿದಂತೆ ಯಾವ ಮಾಹಿತಿಯೂ ನಿಖರವಾಗಿ ಲಭ್ಯವಿಲ್ಲ. ಈ ಎಲ್ಲ ಮಾಹಿತಿ ದಾಖಲಿಸಿಕೊಳ್ಳುವ ಉದ್ದೇಶದಿಂದಲೇ ಇದೀಗ ವೆಬ್ ಪೋರ್ಟಲ್ ಆರಂಭಿಸಲಾಗಿದೆ’ ಎಂದು ಹೇಳಿದರು.

‘ಮಾರತ್‌ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಸುಮಾರು 167 ಪೇಯಿಂಗ್ ಗೆಸ್ಟ್ ಕಟ್ಟಡಗಳಿವೆ. ಮಾಲೀಕರು, ಕಟ್ಟಡದಲ್ಲಿರುವ ವಾಸಿಗಳ ಬಗ್ಗೆ ಮಾಹಿತಿ ದಾಖಲಿಸುತ್ತಿದ್ದಾರೆ. ಪೊಲೀಸರು ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ’ ಎಂದು ತಿಳಿಸಿದರು.

ಕುಡಿಯುವ ನೀರಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುಡಿಯುವ ನೀರಿನ ಸೌಲಭ್ಯ ಮತ್ತು ವಿವಿಧ ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ವಿವಿಧ ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಹಾಗೂ ನಾಗರಿಕರು ಬಿಬಿಎಂಪಿ ಮಹದೇವಪುರ ವಲಯ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಆರು ತಿಂಗಳಿಂದ ಮಹದೇವಪುರ ಕ್ಷೇತ್ರದ ವೈಟ್‌ಫೀಲ್ಡ್, ಕಾಡುಗೋಡಿ, ಹೂಡಿ ಸೇರಿದಂತೆ ಬಹುತೇಕ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಅಧಿಕಾರಿಗಳು ನೀರಿನ ಸಮಸ್ಯೆ ಪರಿಹರಿಸದೇ ಕಾಲಹರಣ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಿಪಬ್ಲಿಕನ್ ಸೇನೆಯ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಬೆಳತ್ತೂರು ವೆಂಕಟೇಶ ದೂರಿದರು.

ಸರ್ಕಾರದ ವಿಶೇಷ ಅನುದಾನ ಯಾರ ಜೇಬಿಗೆ ಹೋಗುತ್ತಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು ಅನುಸೂಚಿತ ಜಾತಿಗಳ ಏಕತಾ ಸಮಿತಿ ರಾಜ್ಯಾಧ್ಯಕ್ಷ ಬಿ. ಕೃಷ್ಣಪ್ಪ ಆರೋಪಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಕಿಡಿ

ತಹಶೀಲ್ದಾರ್ ಕಚೇರಿಯಲ್ಲಿ ಅವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಯಲಹಂಕ: ಯಲಹಂಕ ತಹಶೀಲ್ದಾರ್ ಕಚೇರಿಯು ಅವ್ಯವಸ್ಥೆಯ ಆಗರವಾಗಿದೆ. ಈ ಬಗ್ಗೆ ಸಾರ್ವಜನಿಕರಿಂದಲೂ ಸಾಕಷ್ಟು ದೂರಗಳು ಕೇಳಿಬಂದಿವೆ. ಅಧಿಕಾರಿಗಳ ಹಂತದಲ್ಲಿ ಇದನ್ನು ಸರಿಪಡಿಸುವ ಪ್ರಯತ್ನ ಆಗುತ್ತಿಲ್ಲ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಕಿಡಿಕಾರಿದರು.

ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಪೂರ್ಣಗೊಂಡಿರುವ ವಿವಿಧ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

15 ವರ್ಷಗಳಿಂದ ತಾಲ್ಲೂಕು ಕಚೇರಿಯಲ್ಲಿ ಅವ್ಯವಸ್ಥೆ ಮುಂದುವರಿದಿದೆ. ಇದರಿಂದ ರೈತರು ಹಾಗೂ ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ. ಸೂಕ್ತಕ್ರಮ ಕೈಗೊಳ್ಳುವ ಮೂಲಕ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು ಎಂದರು.


ತರಹುಣಿಸೆ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಕೃಷ್ಣ ಬೈರೇಗೌಡ ಅವರು 94ಸಿಸಿ ಅಡಿಯಲ್ಲಿ ಫಲಾನುಭವಿಗಳಿಗೆ ತಾತ್ಕಾಲಿಕ ಹಕ್ಕುಪತ್ರ ವಿತರಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಂ.ನಾಗೇಶ್, ಸದಸ್ಯರಾದ ಬಿ.ಆರ್.ಪ್ರವೀಣ್, ಟಿ.ಎಸ್.ನವೀನ್, ಕುದುರೆಗೆರೆ ಕೃಷ್ಣಮೂರ್ತಿ ಇದ್ದರು.

ಪಂಚಾಯಿತಿ ವ್ಯಾಪ್ತಿಯ ಗಡೇನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಅಂಗನವಾಡಿ ಕಟ್ಟಡ, ನಾರಾಯಣಪುರ ಮತ್ತು ಬೆಟ್ಟಹಲಸೂರು ಗ್ರಾಮಗಳಲ್ಲಿ ಸ್ತ್ರೀಶಕ್ತಿಭವನ ಹಾಗೂ ನಾರಾಯಣಪುರ ಗ್ರಾಮದ ಸಿ.ಟಿ.ಆರ್ ರಸ್ತೆಯಲ್ಲಿ ನಿರ್ಮಿಸಿರುವ ‘ನಮ್ಮ ಮೆಡಿಕಲ್ಸ್’ ಔಷಧ ಅಂಗಡಿಗೆ ಚಾಲನೆ ನೀಡಲಾಗಿದೆ. ಇದರಿಂದ ಗ್ರಾಮೀಣಭಾಗದ ಬಡಜನರು ರಿಯಾಯಿತಿ ದರದಲ್ಲಿ ಔಷಧಗಳನ್ನು ಖರೀದಿಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ವಿವಿಧ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಂ. ನಾಗೇಶ್, ಸದಸ್ಯರಾದ ಬಿ.ಆರ್. ಪ್ರವೀಣ್, ಟಿ.ಎಸ್. ನವೀನ್, ಅಮರ್, ಸುಮಿತ್ರ ರಾಜಣ್ಣ, ಬಾಲರಾಜ್, ಮೋಹನ್ ಸಿದ್ದರಾಜು, ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ದಾನೇಗೌಡ, ಕೆ. ಅಶೋಕನ್, ಬಿ.ಕೆ. ಮಂಜುನಾಥಗೌಡ, ನಾರಾಯಣಗೌಡ, ಬಿ.ಎನ್. ಮಂಜುನಾಥ್ ಇದ್ದರು.

ಅಶ್ಲೀಲ ವಿಡಿಯೊ: ಹುಡುಕಾಟ

ಬೆಂಗಳೂರು: ಮಕ್ಕಳ ಅಶ್ಲೀಲ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿರುವ ಆರೋಪದಡಿ ನಗರದ ಮಹಿಳೆಯೊಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಮಹಿಳೆಯ ಪತ್ತೆಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

‘ಬಿಟಿಎಂ ಮೊದಲ ಹಂತದ ನಿವಾಸಿ ಎನ್ನಲಾದ 40 ವರ್ಷದ ಮಹಿಳೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆದರೆ, ಸದ್ಯಕ್ಕೆ ಅವರು ತಮ್ಮ ವಿಳಾಸದಲ್ಲಿ ಇಲ್ಲ. ಅವರನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಮಾಜಿಕ ಮಾಧ್ಯಮಗಳಲ್ಲಿ ಖಾತೆ ಹೊಂದಿರುವ ಮಹಿಳೆ, ಮಕ್ಕಳ ಅಶ್ಲೀಲ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ್ದರು. ಇದೇ ವಿಡಿಯೊವನ್ನು ಹಲವರು ವೀಕ್ಷಿಸಿದ್ದಾರೆ. ಇಂಥ ವಿಡಿಯೊ ಅಪ್‌ಲೋಡ್ ಮಾಡುವುದು ಹಾಗೂ ನೋಡುವುದು ಅಪರಾಧ’ ಎಂದು ಮೂಲಗಳು ತಿಳಿಸಿವೆ.

ಪುರಾವೆ ನೀಡಿರುವ ಎನ್‌ಸಿಆರ್‌ಬಿ: ‘ಮಹಿಳೆಯ ಕೃತ್ಯವನ್ನು ಪತ್ತೆ ಮಾಡಿದ್ದ ಎನ್‌ಸಿಆರ್‌ಬಿ (ರಾಷ್ಟ್ರೀಯ ಅಪರಾಧ ದಾಖಲೆಗಳ ಘಟಕ), ಐ.ಪಿ ವಿಳಾಸ ಸಮೇತ ಪುರಾವೆಗಳನ್ನು ನೀಡಿದೆ. ಅದೇ ಮಾಹಿತಿ ಆಧರಿಸಿ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.


ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,

ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ಫೋನ್: 23300497 41159606 , ಫ್ಯಾಕ್ಸ್: 23359600 ಇ–ಮೇಲ್: vjn@jscbl.com

ಸ್ವಾಧೀನ ಸೂಚನೆ ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **10.08.2022** ರಂದು ಇದ್ದಂತೆ **ರೂ. 91,06,942/–** (ರೂಪಾಯಿ ತೊಂಭತ್ತೊಂದು ಲಕ್ಷದ ಆರು ಸಾವಿರದ ಒಂಬೈನೂರ ನಲವತ್ತೆರಡು ಮಾತ್ರ) ಪಾವತಿ ಮಾಡಲು **ಸಾಲಗಾರರಾದ: ಶ್ರೀಮತಿ. ರಂಗಮ್ಮ** ಕೋಂ ಲೇಟ್. ನರಸಿಂಹಯ್ಯ ಜಿ. **2) ಶ್ರೀ. ರಂಗನಾಥ್ ಎನ್**. ಬಿನ್ ಲೇಟ್. ನರಸಿಂಹಯ್ಯ ಜಿ. ಇವರಿಬ್ಬರ ವಿಳಾಸ: ನಂ.06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ ಎ ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು–560040. **ಜಾಮೀನುದಾರರು: ಶ್ರೀ. ಸಂದೀಪ್ ಆರ್**. ಬಿನ್ ರಂಗನಾಥ ಎನ್. ನಂ.06, 1ನೇ ಮಹಡಿ, ವೆಂಕಟಮ್ಮ ಕಾಂಪೌಂಡ್, 2ನೇ ಎ ಮುಖ್ಯರಸ್ತೆ, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು–560040.ಇವರಿಗೆ ದಿನಾಂಕ: **11.08.2022** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.


ಶ್ರೀಮತಿ. ರಂಗಮ್ಮ ಕೋಂ ಲೇಟ್. ನರಸಿಂಹಯ್ಯ ಜಿ.


ಶ್ರೀ. ರಂಗನಾಥ್ ಎನ್. ಬಿನ್ ಲೇಟ್. ನರಸಿಂಹಯ್ಯ ಜಿ.


ಶ್ರೀ. ಸಂದೀಪ್ .ಆರ್ ಬಿನ್ ರಂಗನಾಥ್ ಎನ್.

ಸಾಲಗಾರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(4) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 20.11.2023** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ವಿಜಯನಗರ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಸಾಲ ಮತ್ತು **ಎಂಟಿಎಲ್–90 ವಿಜಯನಗರ** ಮೊತ್ತ ಮೊಬಲಗು **ರೂ. 71,84,018/– (ರೂಪಾಯಿ ಎಪ್ಪತ್ತೊಂದು ಲಕ್ಷದ ಎಂಭತ್ತನಾಲ್ಕು ಸಾವಿರದ ಹದಿನೆಂಟು ಮಾತ್ರ)** ದಿನಾಂಕ **20/11/2023** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

(ಹೈಪೋಥಿಕೇಟೆಡ್ ಸ್ವತ್ತುಗಳ ವಿವರಗಳು ಮತ್ತು ಸಾಲಗಾರನ ಅಡಮಾನ ಆಸ್ತಿಗಳ ವಿವರಗಳು)

ಸಕಲ ಸಮಸ್ತವೂ ಸೇರಿದ ಆಸ್ತಿಯ ಹೊಸ ನಂ. 4/1–1, 1ನೇ ಅಡ್ಡರಸ್ತೆ, ತಿಮ್ಮೇನಹಳ್ಳಿ, ಬಿಎಂಪಿ ವಾರ್ಡ್ ನಂ. 36, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (80+72)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (41+41)/2 ಅಡಿ ಒಟ್ಟು 3116.00 ಚ.ಅಡಿ., ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಗೋವಿಂದಪ್ಪರವರ ಮನೆ, ಉತ್ತರಕ್ಕೆ: ಕಾರ್ಪೋರೇಷನ್ ನಂ. 4ರ 2ನೇ ಭಾಗದ 2ನೇ ಷೆಡ್ಯೂಲ್‌ನ 4ನೇ ಐಟಂ ಆಸ್ತಿ, ದಕ್ಷಿಣಕ್ಕೆ: ರಸ್ತೆ.

ಗಮನಿಸಿ: ದಿನಾಂಕ 16.10.2023 ರಂದು ಸ್ವಾಧೀನದ ಸೂಚನೆಯನ್ನು ಹಿಂತೆಗೆದುಕೊಳ್ಳಲಾಗಿದೆ

ದಿನಾಂಕ : 20.11.2023
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ವಿಭಜಕವಿಲ್ಲದ ಜಯಮಹಲ್ ಮುಖ್ಯರಸ್ತೆ: ಸವಾರರ ಪರದಾಟ, ಪಾದಚಾರಿ ಮಾರ್ಗದ ಕಾಮಗಾರಿ ಸ್ಥಗಿತ

3 ವರ್ಷವಾದರೂ ಮುಗಿಯದ ಕಾಮಗಾರಿ!

• ಖಲೀಲಅಹ್ಮದ ಶೇಖ

ಬೆಂಗಳೂರು: ಕಿತ್ತು ಹೋದ ಡಾಂಬರು. ಅಲ್ಲಲ್ಲಿ ಬಿದ್ದಿರುವ ಗುಂಡಿಗಳು. ವಿಭಜಕವಿಲ್ಲದ ರಸ್ತೆಯಲ್ಲಿ ಮಿಂಚಿನ ವೇಗದಲ್ಲಿ ಸಂಚರಿಸುವ ವಾಹನಗಳು...

ಇದು ಕಂಟೋನ್ಮೆಂಟ್ ರೈಲ್ವೆ ಕೆಳಸೇತುವೆಯ ಜಯಮಹಲ್ ರಸ್ತೆಯ ಮೂಲಕ ಮೇಖ್ರಿ ವೃತ್ತದವರೆಗಿನ ಮುಖ್ಯರಸ್ತೆಯ ದುಃಸ್ಥಿತಿ.

ಜಯಮಹಲ್ ರಸ್ತೆ (ಮೇಖ್ರಿ ವೃತ್ತದಿಂದ ಜಯಮಹಲ್ ಪ್ಯಾಲೇಸ್ ಹೋಟೆಲ್‌ವರೆಗೆ) ಹಾಗೂ ಬಳ್ಳಾರಿ ರಸ್ತೆ (ಬಿಡಿಎ ವೃತ್ತದಿಂದ ಮೇಖ್ರಿ ವೃತ್ತದವರೆಗೆ) 2.3 ಕಿ.ಮೀ ರಸ್ತೆ ಮತ್ತು ಪಾದಚಾರಿ ಮಾರ್ಗದ ಅಭಿವೃದ್ಧಿ ಕಾಮಗಾರಿಯನ್ನು ₹52.81 ಕೋಟಿ ವೆಚ್ಚದಲ್ಲಿ 2020–21ರಲ್ಲಿ ಆರಂಭಿಸಲಾಗಿದ್ದು, 9 ತಿಂಗಳಲ್ಲಿ ಪೂರ್ಣಗೊಳಿಸಬೇಕಿತ್ತು. ಆದರೆ, ಇದುವರೆಗೂ ಪೂರ್ಣಗೊಂಡಿಲ್ಲ. ಅತೀ ಹೆಚ್ಚು ವಾಹನಗಳ ಸಂಚರಿಸುವ ಈ ರಸ್ತೆಯಲ್ಲಿ ನಿಧಾನ ಕಾಮಗಾರಿಯಿಂದ ಪ್ರತಿನಿತ್ಯ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ. ದೂಳು–ಗುಂಡಿಗಳ ನಡುವೆ ವಾಹನ ಸವಾರರು ಹರಸಾಹಸ ಪಡುತ್ತಿದ್ದಾರೆ.



ಜಯಮಹಲ್ ಹಾಗೂ ಮೇಖ್ರಿ ವೃತ್ತದ ಸಂಪರ್ಕ ರಸ್ತೆಯ ಅವ್ಯವಸ್ಥೆಯಿಂದಾಗಿ ಜನರ ಸಂಚಾರಕ್ಕೆ ತೊಂದರೆಯಾಗಿದೆ



ಜಯಮಹಲ್ ರಸ್ತೆಯಿಂದ ಮೇಖ್ರಿ ವೃತ್ತದ ಸಂಪರ್ಕ ರಸ್ತೆಯ ಡಾಂಬರು ಕಿತ್ತು ಹೋಗಿರುವುದು ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

'ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಕೆಳಸೇತುವೆಯಲ್ಲಿ ಮಳೆಯಾದರೆ ನೀರು ನಿಲ್ಲುವುದರಿಂದ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಈ ಸೇತುವೆಯ ಹೊರಭಾಗದ ರಸ್ತೆಗೆ ಅಳವಡಿಸಿರುವ ಕಬ್ಬಿಣದ ಸರಳುಗಳು ಎತ್ತರದಲ್ಲಿದ್ದು, ವಾಹನ ಸಂಚಾರಕ್ಕೆ ತೊಡಕಾಗಿವೆ. ಜಯಮಹಲ್ ಹಾಗೂ ಬಳ್ಳಾರಿ ರಸ್ತೆಯಲ್ಲಿ ಬೀದಿ ದೀಪಗಳಿಲ್ಲದ ಕಾರಣ ರಾತ್ರಿ ಸಮಯದಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡು ವಾಹನ ಚಲಾಯಿಸಬೇಕು. ಇದು ಅತ್ಯಂತ ಅಪಾಯಕಾರಿಯಾಗಿದೆ' ಎಂದು ದ್ವಿಚಕ್ರ ವಾಹನ ಸವಾರ ಮುಜಿಬ್ ತಿಳಿಸಿದರು.

ಮುಖ್ಯಾಂಶಗಳು
- ಮಂದಗತಿಯಲ್ಲಿ ಸಾಗುತ್ತಿರುವ ಕಾಮಗಾರಿ
- ₹52.81 ಕೋಟಿ ವೆಚ್ಚ
- ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯ

'ಈ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ, ರಸ್ತೆಯ ಎರಡು ಬದಿಯ ಡಾಂಬರು ಸಂಪೂರ್ಣವಾಗಿ ಕಿತ್ತು ಕೊಂಡು ಹೋಗಿದೆ. ರಸ್ತೆ ಮಧ್ಯದಲ್ಲಿರುವ ಮ್ಯಾನ್‌ಹೋಲ್‌ಗಳು ವಾಹನ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿವೆ. ಸಮತಟ್ಟಾಗಿಲ್ಲದ ಈ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ಹಂಪ್ಸ್‌ಗಳನ್ನು ಹಾಕಲಾಗಿದೆ. ರಸ್ತೆ ನಡುವೆ ವಿಭಜಕವೇ ಇಲ್ಲ, ಪೊಲೀಸರು ತಾತ್ಕಾಲಿಕ ಬ್ಯಾರಿಕೇಡ್‌ಗಳನ್ನು ಹಾಕಿದ್ದರೂ ವಾಹನ ಸವಾರರು ಮನಬಂದಂತೆ ವಾಹನ ಚಲಾವಣೆ ಮಾಡುತ್ತಾರೆ. ಇದು ಅಪಘಾತಗಳು ಸಂಭವಿಸಲು ಮುಖ್ಯ ಕಾರಣ' ಎಂದು ಸಂಚಾರ ಪೊಲೀಸರು ತಿಳಿಸಿದರು.

'ಸಚಿವರ ನಿವಾಸಗಳಿರುವ ಜಯಮಹಲ್ ಮುಖ್ಯರಸ್ತೆಯಲ್ಲಿ ಬಾಯ್ದೆರೆದ ಗುಂಡಿಗಳು ಮತ್ತು ಹದಗೆಟ್ಟಿರುವ ಪಾದಚಾರಿ ಮಾರ್ಗದ ಬಗ್ಗೆಯೇ ತಲೆಕೆಡಿಸಿಕೊಳ್ಳದ ಅಧಿಕಾರಿಗಳು ಇತರ ರಸ್ತೆಗಳಲ್ಲಿನ ಹೊಂಡ ಮುಚ್ಚಲು ಕ್ರಮಕೈಗೊಳ್ಳುತ್ತಾರೆಯೇ' ಎಂಬುದು ಸ್ಥಳೀಯರ ಪ್ರಶ್ನೆ.

'ಜಯಮಹಲ್ ಮತ್ತು ಬಳ್ಳಾರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೆಲವೇ ದಿನಗಳಲ್ಲಿ ಪೂರ್ಣಗೊಳಿಸಿ, ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು' ಎಂದು ಬಿಬಿಎಂಪಿ ಎಂಜಿನಿಯರೊಬ್ಬರು ತಿಳಿಸಿದರು.

'ಕಾಮಗಾರಿ ಪೂರ್ಣಗೊಳಿಸಿ'



'ಜಯಮಹಲ್ ರಸ್ತೆಯಿಂದ ಮೇಖ್ರಿ ವೃತ್ತದವರೆಗಿನ ಎರಡೂ ಬದಿಯ ಪಾದಚಾರಿ ಮಾರ್ಗದ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಳಿಸಲಾಗಿದೆ. ನೀರಿನ ಪೈಪ್ ಅಳವಡಿಸಲು ಪಾದಚಾರಿ ಮಾರ್ಗವನ್ನು ಅಗೆದು ಪೈಪ್‌ಗಳನ್ನು ಅಳವಡಿಸಿ, ಹಾಗೆಯೇ ಬಿಡಲಾಗಿದೆ. ಇದರಿಂದ, ವೃದ್ಧರು ಮತ್ತು ಮಹಿಳೆಯರು ಮತ್ತು ಮಕ್ಕಳು ಓಡಾಡುವುದೇ ಕಷ್ಟವಾಗಿದೆ' ಎಂದು ಸ್ಥಳೀಯ ನಿವಾಸಿ ಶಾಂತಕುಮಾರ್ ವಿವರಿಸಿದರು.

'ಸದಾಶಿವ, ಕಾಂತರಾಜ ವರದಿ ಜಾರಿಗೊಳಿಸಿ'

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಮತ್ತು ಕಾಂತರಾಜ ಆಯೋಗದ ವರದಿಗಳನ್ನು ಕೂಡಲೇ ಜಾರಿಗೊಳಿಸುವಂತೆ ಒತ್ತಾಯಿಸಿ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಸದಸ್ಯರು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ರಾಜ್ಯದ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸದಾಶಿವ ಮತ್ತು ಕಾಂತರಾಜ ವರದಿಗಳು ಸಹಾಯಕವಾಗಿವೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮೊದಲ ಸಚಿವ ಸಂಪುಟ ಸಭೆಯಲ್ಲಿ ಸದಾಶಿವ ಆಯೋಗದ ವರದಿ ಜಾರಿಗೊಳಿಸುವ ಘೋಷಣೆ ಮಾಡಿತ್ತು. ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಇದುವರೆಗೂ ಮೌನವಹಿಸಿದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಕ್ರಮ ಕೈಗೊಳ್ಳದ ಸರ್ಕಾರ
- ಎರಡು ದಶಕಗಳಿಂದ ಒಳ ಮೀಸಲಿಗೆ ಹೋರಾಟ
- ಎಲ್ಲಾ ರಂಗದಲ್ಲೂ ಪ್ರಾತಿನಿಧ್ಯ ಕಲ್ಪಿಸಲು ಮನವಿ

'ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 101 ಜಾತಿಗಳ ಪೈಕಿ ಮಾದಿಗ ಮತ್ತು ಮಾದಿಗ ಸಂಬಂಧಿತ 49 ಜಾತಿಗಳ ಜನಸಂಖ್ಯೆ ಹೆಚ್ಚಿದೆ. ಇವರಿಗೆ ಶಿಕ್ಷಣ, ಸರ್ಕಾರಿ ಸೇವೆ ಮತ್ತು ರಾಜಕೀಯ ಸೇರಿದಂತೆ ಎಲ್ಲ ರಂಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಇಲ್ಲದೇ ತೀರಾ ಹಿಂದುಳಿದಿದ್ದಾರೆ. ಈ ಅನ್ಯಾಯವನ್ನು ವಿರೋಧಿಸಿ ಹಲವು ಬಾರಿ ಪ್ರತಿಭಟನೆ ನಡೆಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ' ಎಂದು ತಿಳಿಸಿದರು.

'20 ವರ್ಷಗಳಿಂದ ಒಳಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದೇವೆ. ದಶಕದ ಹಿಂದೆ ಸದಾಶಿವ ಆಯೋಗ ವರದಿ ನೀಡಿದ್ದರೂ ಇದುವರೆಗೂ ಅನುಷ್ಠಾನಗೊಂಡಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಆಶ್ವಾಸನೆ ನೀಡುವುದನ್ನು ಬಿಟ್ಟು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ' ಎಂದು ಆರೋಪಿಸಿದರು.

ಪ್ರತಿಭಟನಕಾರರು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.



ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಮಂಗಳವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಸದಸ್ಯರು –ಪ್ರಜಾವಾಣಿ ಚಿತ್ರ

'ಸರ್ಕಾರವನ್ನು ಪ್ರಶ್ನಿಸುವುದು ನಾನೊಬ್ಬನೇ'

ರಾಮನಗರ: 'ಎಲ್ಲರೂ ಮೌನಕ್ಕೆ ಶರಣಾಗಿದ್ದಾಗ ಸರ್ಕಾರದ ತಪ್ಪುಗಳನ್ನು ಏಕಾಂಗಿಯಾಗಿ ಪ್ರಶ್ನಿಸುವುದು ಕುಮಾರಸ್ವಾಮಿ ಒಬ್ಬನೇ. ಇಲ್ಲಿಯವರೆಗೂ ನಾನು ಎತ್ತಿದ ಒಂದೇ ಒಂದು ಪ್ರಶ್ನೆಗೂ ಸರ್ಕಾರ ಇನ್ನೂ ಉತ್ತರ ಕೊಟ್ಟಿಲ್ಲ' ಎಂದು ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ಮುಂದುವರಿಸಿದ್ದಾರೆ.

'ಸರ್ಕಾರದ ವರ್ಗಾವಣೆ ದಂಧೆ, ಅಕ್ರಮ ಸಂಪತ್ತು ಮುಂತಾದ ವಿಷಯಗಳ ಬಗ್ಗೆ ಧ್ವನಿ ಎತ್ತಿದ್ದು ನಾನು. ಸರ್ಕಾರದ ಅಕ್ರಮಗಳ ಕುರಿತು ಪ್ರಶ್ನೆ ಮಾಡಿದರೆ ನನ್ನ ವಿರುದ್ಧ ಪೋಸ್ಟರ್ ಅಂಟಿಸುತ್ತಾರೆ. ಸರ್ಕಾರದ ತಪ್ಪುಗಳನ್ನು ಪ್ರಶ್ನಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

ತಾಲ್ಲೂಕಿನ ದಾಸೇಗೌಡನದೊಡ್ಡಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ₹33 ಸಾವಿರ ಕೋಟಿ ಮೌಲ್ಯದ ಬೆಳೆ ನಷ್ಟವಾಗಿದೆ. ಜಿಲ್ಲಾಧಿಕಾರಿಗಳ ಬ್ಯಾಂಕ್ ಖಾತೆಗಳಲ್ಲಿ ₹800 ಕೋಟಿ ಇದೆ ಎನ್ನುವ ಸರ್ಕಾರ ರೈತರಿಗೆ ಯಾಕಿನ್ನೂ ಪರಿಹಾರ ಕೊಟ್ಟಿಲ್ಲ ಎಂದರು.

ಸುದ್ದಿ 2 ನಿಮಿಷ

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಸೋಮಶೇಖರ್ ನೇಮಕ

ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ನಿವೃತ್ತ ಐ.ಎ.ಎಸ್. ಅಧಿಕಾರಿ ಸಿ.ಸೋಮಶೇಖರ್ ನೇಮಕವಾಗಿದ್ದಾರೆ.



'ಸಾಹಿತಿಯೂ ಆಗಿರುವ ಸೋಮಶೇಖರ್ ಗಡಿನಾಡು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

ನ.23ರಂದು ಮಧ್ಯಾಹ್ನ 3ಕ್ಕೆ ಅಧಿಕಾರ ಸ್ವೀಕರಿಸಲಿದ್ದು, ಪರಿಷತ್ತಿನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ ಹಾಗೂ ಅಧ್ಯಕ್ಷ ಅಪ್ಪಾರಾವ ಅಕ್ಕೋಣೆ ಉಪಸ್ಥಿತರಿರಲಿದ್ದಾರೆ' ಎಂದು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪರಮೇಶ್ವರಗೌಡ ಶಿ.ಎರೇಸೀಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ಪಠ್ಯದಲ್ಲಿ ರಾಮಾಯಣ, ಮಹಾಭಾರತ ಸೇರ್ಪಡೆಗೆ ಶಿಫಾರಸು

ನವದೆಹಲಿ: ಪ್ರಾಥಮಿಕ ಶಾಲಾ ಹಂತದ ಸಮಾಜ ವಿಜ್ಞಾನದ ಪರಿಷ್ಕೃತ ಪಠ್ಯಕ್ರಮದಲ್ಲಿ ಭಾರತದ ಮಹಾಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ' ವಿಷಯ ಸೇರ್ಪಡೆಗೊಳಿಸಲು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ರಚಿಸಿದ್ದ ಉನ್ನತಮಟ್ಟದ ಸಮಿತಿ ಶಿಫಾರಸು ಮಾಡಿದೆ.

ಅಲ್ಲದೇ, ಶಾಲಾ ಕೊಠಡಿಯ ಗೋಡೆಗಳ ಮೇಲೆ ಸಂವಿಧಾನದ ಪ್ರಸ್ತಾವನೆಯನ್ನು ಬರೆಯಬೇಕೆಂದು ಶಿಫಾರಸು ಮಾಡಲಾಗಿದೆ ಎಂದು ಸಮಿತಿಯ ಮುಖ್ಯಸ್ಥ ಸಿ.ಐ. ಐಸಾಕ್ ತಿಳಿಸಿದ್ದಾರೆ.

ಏಳು ಮಂದಿ ಸದಸ್ಯರು ಹಾಗೂ 25 ಪರಿಣತರನ್ನು ಒಳಗೊಂಡ ಈ ಸಮಿತಿಯು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ಶಿಫಾರಸುಗಳನ್ನು ಮಾಡಿದೆ. ಸಮಿತಿ ಸೂಚಿಸಿರುವ ಶಿಫಾರಸುಗಳು ಎನ್‌ಸಿಇಆರ್‌ಟಿಯ ಹೊಸ ಪಠ್ಯಪುಸ್ತಕಗಳಲ್ಲಿ ಕಾರ್ಯರೂಪಕ್ಕೆ ಬರಲಿವೆ. ಆದರೆ, ಮಂಡಳಿಯು ಈ ಶಿಫಾರಸುಗಳನ್ನು ಅಂಗೀಕರಿಸಿಲ್ಲ. 'ಹದಿಹರೆಯದ ವಯಸ್ಸಿನಲ್ಲಿ ವಿದ್ಯಾರ್ಥಿಗಳಲ್ಲಿ ಸ್ವಗೌರವ, ದೇಶಪ್ರೇಮ ಬೆಳೆಸಲು ಅನುಕೂಲವಾಗುವಂತೆ ಈ ಮಹಾಗ್ರಂಥಗಳ ಬಗ್ಗೆ ಪಠ್ಯಕ್ರಮದಲ್ಲಿ ಅಳವಡಿಸಲು ನಿರ್ಧರಿಸಲಾಗಿದೆ' ಎಂದು ಐಸಾಕ್ ತಿಳಿಸಿದ್ದಾರೆ.


ಅನಾಥಾಶ್ರಮ ವಿರುದ್ಧ ಎಫ್‌ಐಆರ್‌ಗೆ ರಾಷ್ಟ್ರೀಯ ಮಕ್ಕಳ ಆಯೋಗ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿಯಮಾವಳಿಗಳನ್ನು ಪಾಲಿಸದ ಕಾರಣಕ್ಕೆ ಬೆಂಗಳೂರು ಮೂಲದ ಅನಾಥಾಶ್ರಮ ದಾರುಲ್ ಉಲೂಮ್ ಸಯಿದಿಯಾ ಯತೀಂಖಾನಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೂಚಿಸಿದೆ.

'ಬಾಲನ್ಯಾಯ ಕಾಯ್ದೆಯಡಿ ಈ ಅನಾಥಾಶ್ರಮ ನೋಂದಣಿಯಾಗಿಲ್ಲ. ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ ಮತ್ತು ಮೂಲಸೌಕರ್ಯ ಹೊಂದಿಲ್ಲ' ಎಂದು ಆಯೋಗ ತಿಳಿಸಿದೆ.

'ಕಾನೂನುಬಾಹಿರವಾಗಿ ನಡೆಸುತ್ತಿರುವ ಅನಾಥಾಶ್ರಮಕ್ಕೆ ಹಠಾತ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಇಲ್ಲಿ ಮಕ್ಕಳು ಮಧ್ಯಕಾಲೀನ ತಾಲಿಬಾನ್ ಜೀವನ ನಡೆಸುತ್ತಿದ್ದಾರೆ' ಎಂದು ಆಯೋಗದ ಮುಖ್ಯಸ್ಥ ಪ್ರಿಯಾಂಕ್ ಕನುಂಗೊ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಸುಮಾರು 200 ಅನಾಥ ಮಕ್ಕಳು ಇಲ್ಲಿದ್ದಾರೆ. 100 ಚದರ ಅಡಿ ಕೋಣೆಯಲ್ಲಿ 8 ಮಕ್ಕಳನ್ನು ಇರಿಸಲಾಗಿದೆ. ಅಂತಹ 5 ಕೊಠಡಿಗಳಲ್ಲಿ 40 ಮಕ್ಕಳು ವಾಸಿಸುತ್ತಿದ್ದಾರೆ ಮತ್ತು 16 ಮಕ್ಕಳು ಕಾರಿಡಾರ್‌ನಲ್ಲಿ ವಾಸಿಸುತ್ತಿದ್ದಾರೆ. ಉಳಿದ 150 ಮಕ್ಕಳು ಹಾಲ್‌ಗಳಲ್ಲಿ ಮಲಗುತ್ತಾರೆ' ಎಂದು ಅವರು ಹೇಳಿದ್ದಾರೆ.



ಕಂಬಳಕ್ಕೆ ಸಿದ್ಧತೆ

ತುಳು ಕೂಟದ 50ನೇ ವರ್ಷಾಚರಣೆ ಅಂಗವಾಗಿ ನ.25–26ರಂದು ನಡೆಯಲಿರುವ ಬೆಂಗಳೂರು ಕಂಬಳಕ್ಕೆ ಅರಮನೆ ಮೈದಾನದಲ್ಲಿ 'ಕರೆ' ನಿರ್ಮಾಣಗೊಂಡಿದೆ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ತಿಪಟೂರು: ಆಹಾರ ಅರಸಿ ಬಂದು ಬಾವಿಗೆ ಬಿದ್ದ ಚಿರತೆ

ಪ್ರಜಾವಾಣಿ ವಾರ್ತೆ

ತಿಪಟೂರು: ಆಹಾರ ಅರಸಿ ಬಂದ ಚಿರತೆಯೊಂದು ಸೋಮವಾರ ತಡರಾತ್ರಿ ನೀರಿಲ್ಲದ ಹಾಳು ಬಾವಿಗೆ ಬಿದ್ದಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ರಕ್ಷಣೆಗೆ ಕಾರ್ಯಾಚರಣೆ ನಡೆಸಿದ್ದಾರೆ.

ತಾಲ್ಲೂಕಿನ ಮಾರನಗೆರೆ ಎಂ.ಆರ್. ರಾಮಣ್ಣ ಎಂಬುವರ ತೋಟದ ಬಾವಿಗೆ ಚಿರತೆ ಬಿದ್ದಿದೆ. ಬಾವಿ 25ರಿಂದ 30 ಅಡಿ ಆಳ ಇದೆ. ಬಾವಿಯಲ್ಲಿ ನೀರಿಲ್ಲ. ತೆಂಗಿನ ಗರಿ, ಒಣಗಿದ ತೆಂಗಿನಕಾಯಿಗಳಿವೆ. ಚಿರತೆ ರಕ್ಷಣೆಗೆ ಅರಣ್ಯ ಇಲಾಖೆ ಕಾರ್ಯೋನ್ಮುಖವಾಗಿದೆ ಎಂದು ಅರಣ್ಯಾಧಿಕಾರಿ ಮಧು ತಿಳಿಸಿದ್ದಾರೆ.

ಬಾವಿಗೆ ಬಿದ್ದ ಚಿರತೆ ನೋಡಲು ಸುತ್ತಮುತ್ತಲಿನ ಗ್ರಾಮಸ್ಥರ ದಂಡು ಬಾವಿ ಸುತ್ತ ನೆರೆದಿದೆ. ಜನರ ಹಿಂಡು ಕಂಡು ಚಿರತೆ ಬೆದರಿದ್ದು, ಕಾರ್ಯಾಚರಣೆಗೆ ಅಡ್ಡಿಯಾಗಿದೆ. ತಡರಾತ್ರಿಯೂ ಕಾರ್ಯಾಚರಣೆ ಮುಂದುವರಿದಿದೆ.



ಮಾರನಗೆರೆ ತೋಟವೊಂದರ ಬಾವಿಗೆ ಬಿದ್ದಿರುವ ಚಿರತೆ

ನಗರದಲ್ಲಿ ಇಂದು

'ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಸುಸ್ಥಿರ ಅಭಿವೃದ್ಧಿ' ಕುರಿತು ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಎನ್. ಎಸ್. ಬೋಸರಾಜು, ಅತಿಥಿಗಳು: ಶಾಲಿನಿ ರಜನೀಶ್, ಏಕ್ ರೂಪ್ ಕೌರ್, ಎಸ್. ಬೃಂದಾ, ವಿನಯ್ ಕುಮಾರ ಧದ್ವಾಲ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಯು. ಆರ್. ರಾವ್ ವಿಜ್ಞಾನ ಭವನ, ಜಿ.ಕೆ.ವಿ.ಕೆ. ಆವರಣ, ಬೆಳಿಗ್ಗೆ 10.30

ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟ: ಉದ್ಘಾಟನೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಸಿ. ಶ್ರೀನಿವಾಸ್, ಸುನಿತಾ ಎಂ., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗ, ಸ್ಥಳ: ಭಾರತೀಯ ಕ್ರೀಡಾ ಪ್ರಾಧಿಕಾರ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಮುಲಾಯಂ ಸಿಂಗ್ ಯಾದವ್ ಅವರ ಜಯಂತಿ: ಉದ್ಘಾಟನೆ: ರಾಜೀವ್ ರೈ, ಅತಿಥಿಗಳು: ಎನ್. ಮಂಜಪ್ಪ, ಸತೀಶ್ ಜಾರಕಿಹೊಳಿ, ಸಿ.ಎಂ. ಇಬ್ರಾಹಿಂ, ಬಿ.ಕೆ. ಹರಿಪ್ರಸಾದ್, ಬಿ.ಆರ್. ರಾಮೇಗೌಡ, ಬ್ರಿಜೇಶ್ ಕಾಳಪ್ಪ, ಭವ್ಯ, ಮಲ್ಲಿಕಾರ್ಜುನಯ್ಯ, ವಿ.ಜಿ. ಪರಶುರಾಮ್, ಮಂಚೇಗೌಡ ಬಿ.ಎಚ್., ಆಯೋಜನೆ: ಸಮಾಜವಾದಿ ಪಾರ್ಟಿ, ಸ್ಥಳ: ಕಾನಿಷ್ಕ ಹೋಟೆಲ್, ಗಾಂಧಿನಗರ, ಬೆಳಿಗ್ಗೆ 11

ದಾಸವಾಣಿ: ಗಾಯನ: ಚಾಂದಿನಿ ಗರ್ತಿಕೆರೆ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಕಾರ್ಪೊರೇಷನ್ ಬ್ಯಾಂಕ್ ಹತ್ತಿರ, ಕೆಂಗೇರಿ ಉಪನಗರ, ಸಂಜೆ 6.30



ರಾಜ್ಯಮಟ್ಟದ ಬಾಲಕರ ಅಥ್ಲೆಟಿಕ್ಸ್ ಕ್ರೀಡಾಕೂಟ: ಉದ್ಘಾಟನೆ: ಸಿಂಧೂ ಬಿ. ರೂಪೇಶ್, ಅತಿಥಿಗಳು: ಎನ್. ಶಶಿಕುಮಾರ್, ಆನಂದರಾಜು ಎ., ಉಪಸ್ಥಿತಿ: ಗುಬ್ಬಿಗೂಡು ರಮೇಶ್, ಸಂಧ್ಯಾ ಮೆನೆಜಸ್, ಶಿವಾಜಿ ಪಿ.ಎಂ., ಅಧ್ಯಕ್ಷತೆ: ಎನ್. ರಾಜು, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ, ಸಂಪಂಗಿರಾಮ ನಗರ, ಸಂಜೆ 4

ಸುವರ್ಣ ಕರ್ನಾಟಕ ವರ್ಷಾಚರಣೆ ಸಂಭ್ರಮ: ಉದ್ಘಾಟನೆ: ಕೆ.ಜೆ. ಜಾರ್ಜ್, ಅತಿಥಿಗಳು: ಮಹೇಶ ಜೋಶಿ, ಎಲ್. ಹನುಮಂತಯ್ಯ, ಸನ್ಮಾನ: ಪಿ.ಸಿ. ಮೋಹನ್, ಕೆ.ಸಿ. ರಾಮಮೂರ್ತಿ, ದೇವರಾಜ್, ಆಯೋಜನೆ: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ, ಸ್ಥಳ: ಭೈರವೇಶ್ವರ ಬಡಾವಣೆ, ಹೆಣ್ಣೂರು, ಸಂಜೆ 5

ಶಂಕರನಾಗ್ ನಾಟಕೋತ್ಸವ: ಅತಿಥಿಗಳು: ನಾರಾಯಣ ರಾಯಚೂರ್, ಬಿ.ಎಂ. ಗಿರಿರಾಜ್, 'ನಕ್ಷತ್ರದ ದೂಳು' ನಾಟಕ ಪ್ರದರ್ಶನ: ಪ್ರಸ್ತುತಿ: ರಂಗ ಕನಸು, ರಚನೆ: ಹರ್ಷಕುಮಾರ್ ಕುಗ್ವೆ, ನಿರ್ದೇಶನ: ಪ್ರವೀಣ್ ರೆಡ್ಡಿ ಗುಂಜಹಳ್ಳಿ, ರಂಗಗೌರವ: ಬಿ.ವಿ. ರಾಜಾರಾಂ, 'ಗುಲಾಬಿ ಗ್ಯಾಂಗು' ನಾಟಕ ಪ್ರದರ್ಶನ: ರಂಗರೂಪ: ಪ್ರವೀಣ್ ಸೂಡ, ರಚನೆ, ನಿರ್ದೇಶನ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

'ಗೋಕಲ ನಿರ್ಗಮನ' ನಾಟಕ ಪ್ರದರ್ಶನ: ರಚನೆ: ಪು.ತಿ. ನರಸಿಂಹಾಚಾರ್, ನಿರ್ದೇಶನ: ಕೆ. ರಾಮಕೃಷ್ಣಯ್ಯ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕಂಬಳ: ಬ್ರಿಜ್‌ಭೂಷಣ್ ಕೈಬಿಟ್ಟ ಸಂಘಟಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕಂಬಳ'ದಲ್ಲಿ ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಭಾಗವಹಿಸುವುದಕ್ಕೆ ವಿರೋಧ ವ್ಯಕ್ತವಾದ ಬೆನ್ನಲ್ಲೇ ಸಂಘಟಕರು ಅವರ ಹೆಸರನ್ನು ಆಹ್ವಾನ ಪತ್ರಿಕೆಯಿಂದ ಕೈಬಿಟ್ಟಿದ್ದಾರೆ.

ನ.25 ಮತ್ತು 26ರಂದು ಕಂಬಳ ನಡೆಯಲಿದ್ದು, 25ರಂದು ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕುಸ್ತಿಪಟುಗಳನ್ನು ಬ್ರಿಜ್‌ಭೂಷಣ್ ಸನ್ಮಾನಿಸಬೇಕಿತ್ತು. ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿರುವ ಅವರ ಭಾಗವಹಿಸುವಿಕೆಗೆ ವಿವಿಧ ಸಂಘಟನೆಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿತ್ತು.

ಬ್ರಿಜ್‌ಭೂಷಣ್ ಕುಡುಬಿ ಹಾಗೂ ಸಿದ್ದಿ ಜನಾಂಗದವರಿಗೆ ಗೋವಾದಲ್ಲಿ ಕುಸ್ತಿ ತರಬೇತಿ ನೀಡಿದ್ದರು. ಸಿದ್ದಿ ಜನಾಂಗದ ಮುಖಂಡರು ಮಾಡಿದ್ದ ಮನವಿಯಂತೆ ಅವರನ್ನು ಕಂಬಳಕ್ಕೆ ಆಹ್ವಾನಿಸಲಾಗಿತ್ತು. ಎರಡು ದಿನಗಳ ಹಿಂದೆಯೇ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂದು ಮಾಹಿತಿ ನೀಡಿದ್ದರು. ಕೊನೆ ಗಳಿಗೆಯಲ್ಲಿ ಆಹ್ವಾನ ಪತ್ರಿಕೆ ಬದಲಿಸಿ ವಿವಾದಕ್ಕೆ ತೆರೆ ಎಳೆಯಲಾಗಿದೆ ಎಂದು ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷ, ಪುತ್ತೂರು ಕ್ಷೇತ್ರದ ಕಾಂಗ್ರೆಸ್ ಶಾಸಕರೂ ಆಗಿರುವ ಅಶೋಕ್ ಕುಮಾರ್ ರೈ ಪ್ರತಿಕ್ರಿಯೆ ನೀಡಿದರು.

'ಕಂಬಳಕ್ಕೆ ಕಾಂಗ್ರೆಸ್‌ನಿಂದ ವಿರೋಧ ವ್ಯಕ್ತವಾಗಿದೆ ಎನ್ನುವುದು ಸರಿಯಲ್ಲ. ಕಂಬಳ ಸಮಿತಿಯಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ಹಿಂದೆ ಪೇಟಾ ವಿರೋಧ ವ್ಯಕ್ತಪಡಿಸಿದ್ದಾಗ ಸಿದ್ದರಾಮಯ್ಯ ಅವರೇ ಸಹಾಯ ಮಾಡಿದ್ದರು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಮಾಸ್: ಒತ್ತೆಯಾಳುಗಳ ಬಿಡುಗಡೆ ಶೀಘ್ರ?

ಒಂದನೇ ಪುಟದಿಂದ...

₹20.81 ಕೋಟಿ ಭಾರತದ ನೆರವು: ಪ್ಯಾಲೆಸ್ಟೀನ್ ನಿರಾಶ್ರಿತರ ನೆರವಿಗೆ ವಿಶ್ವಸಂಸ್ಥೆಯ ಪರಿಹಾರ ಮತ್ತು ಸೇವಾ ಏಜೆನ್ಸಿಗೆ (ಯುಎನ್‌ಆರ್‌ಡಬ್ಲ್ಯುಎ) ಭಾರತವು ಒಟ್ಟು ₹20.81 ಕೋಟಿ (2.5 ಮಿಲಿಯನ್ ಡಾಲರ್) ನೆರವು ನೀಡಿದೆ. ಭಾರತದ ಕ್ರಮವನ್ನು ಯುಎನ್‌ಆರ್‌ಡಬ್ಲ್ಯುಎ ಸ್ವಾಗತಿಸಿದೆ.

ಸಾವಿನ ಲೆಕ್ಕವೂ ಸಿಗುತ್ತಿಲ್ಲ: ಆರೋಗ್ಯ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ ಮತ್ತು ಇಸ್ರೇಲ್ ಪಡೆಗಳು ವಶಕ್ಕೆ ಪಡೆದಿರುವ ಪ್ರದೇಶಗಳಿಂದ ಮೃತ ದೇಹಗಳನ್ನು ಹೊರತರುವುದು ಕಷ್ಟವಾಗಿರುವುದರಿಂದ ಮೃತರ ಲೆಕ್ಕವೇ ಸಿಗುತ್ತಿಲ್ಲ ಎಂದು ಗಾಜಾದಲ್ಲಿರುವ ಪ್ಯಾಲೆಸ್ಟೀನ್‌ನ ಆರೋಗ್ಯ ಅಧಿಕಾರಿಗಳು ಮಂಗಳವಾರ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಇತ್ತ ಇಸ್ರೇಲ್ ಭೂದಾಳಿಯನ್ನು ತೀವ್ರಗೊಳಿಸಿರುವುದರಿಂದ ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗಿದೆ. ಆದರೆ ಫೋನ್, ಇಂಟರ್‌ನೆಟ್ ಸೇವೆಯಲ್ಲಿ ವ್ಯತ್ಯಯ ಉಂಟಾಗಿದ್ದರಿಂದ ಸಾವಿನ ಸಂಖ್ಯೆಯ ಲೆಕ್ಕ ಹಾಕುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ.

ರೈಲು ನಿಲ್ದಾಣ ಮಹೋತ್ಸವ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್‌ನಲ್ಲಿ 150 ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದ 'ಬೆಂಗಳೂರು ದಂಡು (ಕಂಟೋನ್ಮೆಂಟ್) ರೈಲು ನಿಲ್ದಾಣ'ದಲ್ಲಿ ನಿಲ್ದಾಣ ಮಹೋತ್ಸವವನ್ನು ಸೋಮವಾರ ಆಚರಿಸಲಾಯಿತು.

ರೈಲು ನಿಲ್ದಾಣಗಳ ಇತಿಹಾಸ, ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ನಿಲ್ದಾಣಗಳ ಪಾತ್ರವನ್ನು ಜನರಿಗೆ ತಿಳಿಸಲು ನಿಲ್ದಾಣ ಮಹೋತ್ಸವ ಆಚರಿಸಲಾಗುತ್ತಿದೆ ಎಂದು ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್ ಮಾಹಿತಿ ನೀಡಿದರು.

ರೈಲ್ವೆ ಅಭಿವೃದ್ಧಿಗೆ ಸಂಬಂಧಿಸಿದ ಅಂಚೆ ಚೀಟಿಗಳ ಪ್ರದರ್ಶನವನ್ನು ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ಮ್ಯಾನೇಜರ್ ವಿಜಯಕುಮಾರ್ ಪ್ರದರ್ಶಿಸಿದರು. ರೈಲ್ವೆ ಸ್ಕೌಟ್ಸ್ ಮತ್ತು ಗೈಡ್ಸ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಹಿ ಅಭಿಯಾನ ನಡೆಸಲಾಯಿತು. ಬೆಂಗಳೂರು ವಿಭಾಗೀಯ ವಾಣಿಜ್ಯ ಹಿರಿಯ ವ್ಯವಸ್ಥಾಪಕ ವೇಣು ಯಾದವ್, ವ್ಯವಸ್ಥಾಪಕ ತ್ರಿನೇತ್ರ ಕೆ.ಆರ್. ಹಾಜರಿದ್ದರು.



ರೈಲ್ವೆ ಅಭಿವೃದ್ಧಿಗೆ ಸಂಬಂಧಿಸಿದ ಅಂಚೆ ಚೀಟಿಗಳ ಪ್ರದರ್ಶನವನ್ನು ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ಮ್ಯಾನೇಜರ್ ವಿಜಯಕುಮಾರ್ ಪ್ರದರ್ಶಿಸಿದರು. ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್, ವಿಭಾಗೀಯ ವಾಣಿಜ್ಯ ಹಿರಿಯ ವ್ಯವಸ್ಥಾಪಕ ವೇಣು ಯಾದವ್ ಇದ್ದರು –ಪ್ರಜಾವಾಣಿ ಚಿತ್ರ

ಆಹ್ವಾನ್ ಫೌಂಡೇಷನ್‌ನಿಂದ ನೆರವು

ಗವಿಪುರಂ ಹೆರಿಗೆ ಆಸ್ಪತ್ರೆ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗವಿಪುರಂ ಗುಟ್ಟಹಳ್ಳಿಯಲ್ಲಿರುವ ಹೆರಿಗೆ ಆಸ್ಪತ್ರೆ ಅತ್ಯಾಧುನಿಕ ಯಂತ್ರೋಪಕರಣಗಳೊಂದಿಗೆ ಪುನರ್ ಆರಂಭಗೊಂಡಿದೆ.

ಆಸ್ಪತ್ರೆಯಲ್ಲಿ ದಿನದ 24/7 ಹೆರಿಗೆ ಸೌಲಭ್ಯಗಳಿಗಾಗಿ ಆಹ್ವಾನ್ ಫೌಂಡೇಷನ್ ವತಿಯಿಂದ ಅಂದಾಜು ₹40 ಲಕ್ಷ ಮೊತ್ತದಲ್ಲಿ ಶಸ್ತ್ರಚಿಕಿತ್ಸೆ ಯಂತ್ರೋಪಕರಣ ಗಳು, ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರ, ಆಸ್ಪತ್ರೆಯ ಪೀಠೋಪಕರಣಗಳು ಸೇರಿದಂತೆ ಹಲವು ಪರಿಕರಗಳನ್ನು ಕೊಡುಗೆಯಾಗಿ ನೀಡಲಾಗಿದೆ.

ಗವಿಪುರಂ ಗುಟ್ಟಹಳ್ಳಿಯ ಹೆರಿಗೆ ಆಸ್ಪತ್ರೆ 1963ರಲ್ಲಿ ಸ್ಥಾಪನೆಯಾಗಿದ್ದು, 2020ರವರೆಗೂ ಸಹಜ ಹೆರಿಗೆ ಆರೋಗ್ಯ ಸೇವೆಗಳನ್ನು ನೀಡುತ್ತಿತ್ತು. ಕೋವಿಡ್ ಸಮಯದಲ್ಲಿ ಈ ಆಸ್ಪತ್ರೆಯನ್ನು ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತಿಸಿ 10 ಆಕ್ಸಿಜನ್ ಬೆಡ್ ವ್ಯವಸ್ಥೆ ಮಾಡಲಾಗಿತ್ತು. ಅದಾದ ಬಳಿಕ ಬಿಬಿಎಂಪಿಯ ಅನುದಾನದಲ್ಲಿ ಆಸ್ಪತ್ರೆಯನ್ನು ಪುನರ್ ನವೀಕರಣ ಮಾಡಲಾಗಿದೆ.

ಶಾಸಕ ಉದಯ್ ಬಿ. ಗರುಡಾಚಾರ್ ಅವರು ನವೀಕೃತ ಆಸ್ಪತ್ರೆಯನ್ನು ಸೋಮವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಯರಾಮ್ ರಾಯಪುರ, ದಕ್ಷಿಣ ವಲಯದ ಕ್ಲಿನಿಕಲ್ ಅಧಿಕಾರಿಗಳು, ಆಹ್ವಾನ್ ಫೌಂಡೇಷನ್ ಅಧ್ಯಕ್ಷ ಬ್ರಜ್ ಕಿಶೋರ್, ಡಾ.ಲತಾ ವೆಂಕಟ್ ರಾಮ್ ಇದ್ದರು.

ತಾಯಿ–ಮಕ್ಕಳಿಗೆ ಚಿಕಿತ್ಸೆ: ವಿಮೆನ್ ಹೆಲ್ತ್ ಕೇರ್ ಸಂಸ್ಥೆಯಿಂದ ಡಿ.1ರಿಂದ ಹೆರಿಗೆ ಆಸ್ಪತ್ರೆಯಲ್ಲಿ ದಿನದ 24 ಗಂಟೆಯೂ ಹೆಸರಾಂತ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞ ವೈದ್ಯರಿಂದ ಸಹಜ ಹೆರಿಗೆ ಹಾಗೂ ಸಿಸೇರಿಯನ್ ಹೆರಿಗೆಯಂತಹ ಸೇವೆಗಳನ್ನು ಉಚಿತವಾಗಿ ನೀಡಲು ಪಿಪಿಪಿ ಅಡಿಯಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ.

ಈ ಒಪ್ಪಂದದ ಅನುಸಾರ, ಆಸ್ಪತ್ರೆಯ ಸುತ್ತಮುತ್ತಲಿನ ಕೊಳಚೆ ಪ್ರದೇಶದ ನಿವಾಸಿಗಳ ತಾಯಿ–ಮಕ್ಕಳ ಆರೋಗ್ಯ ಹಿತದೃಷ್ಟಿಯಿಂದ 24 ಗಂಟೆಯೂ ಆರೋಗ್ಯ ಸೇವೆಗಳನ್ನು ನೀಡಲಾಗುತ್ತದೆ.

ಆಸ್ಪತ್ರೆಯಲ್ಲಿ ಪಾಲಿಕೆಯ ವತಿಯಿಂದ ಒಬ್ಬ ಮಕ್ಕಳ ತಜ್ಞ, ಒಬ್ಬ ಅರಿವಳಿಕೆ ತಜ್ಞ ಹಾಗೂ 11 ಅರೆವೈದ್ಯಕೀಯ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಸಹಜ ಹೆರಿಗೆ, ಸಿಸೇರಿಯನ್, ಸ್ತ್ರೀರೋಗ ಸಂಬಂಧಿತ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆ, ವೆಲ್ ವಿಮೆನ್ ಕ್ಲಿನಿಕ್, ಗೈನಕಾಲಜಿ ಸರ್ಜರಿ, ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ, ಮಕ್ಕಳಿಗೆ ಲಸಿಕಾ ವ್ಯವಸ್ಥೆ ಇತ್ಯಾದಿ ಸೇವೆಗಳನ್ನು ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ನವೀಕರಣಗೊಂಡಿರುವ ಗವಿಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ಉದ್ಘಾಟನೆ ಸಮಾರಂಭದಲ್ಲಿ ಯಂತ್ರೋಪಕರಣಗಳ ಬಗ್ಗೆ ಸಿಬ್ಬಂದಿ ಮಾಹಿತಿ ನೀಡಿದರು. ಜಲಸಾರಿಗೆ ಮಂಡಳಿಯ ಸಿಇಒ ಜಯರಾಮ್ ರಾಯಪುರ, ಶಾಸಕ ಉದಯ್ ಬಿ. ಗರುಡಾಚಾರ್, ವೈದ್ಯರು ಇದ್ದರು

12 ವರ್ಷಗಳವರೆಗೆ ಜೈಲು ಶಿಕ್ಷೆಗೆ ಅವಕಾಶ • ಅಪರಾಧಿಗಳ ಆಸ್ತಿ ಮುಟ್ಟುಗೋಲಿಗೂ ಕ್ರಮ

ಪರೀಕ್ಷಾ ಅಕ್ರಮಕ್ಕೆ ₹10 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಎಸಗುವವರಿಗೆ ₹10 ಕೋಟಿಯವರೆಗೆ ದಂಡ ಮತ್ತು 12 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ 'ಸಾರ್ವಜನಿಕ ಪರೀಕ್ಷಾ ಅಕ್ರಮ ನಿಯಂತ್ರಣ ಮಸೂದೆ'ಗೆ ಸಂಪುಟ ಒಪ್ಪಿಗೆ ನೀಡಿದೆ. ಇಂತಹ ಪ್ರಕರಣಗಳ ಅಪರಾಧಿಗಳ ಆಸ್ತಿ ಮುಟ್ಟುಗೋಲಿಗೂ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ.

ರಾಜ್ಯದಲ್ಲಿ ನಿರಂತರವಾಗಿ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆಯುತ್ತಲೇ ಇವೆ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಸಹಾಯಕ ಪ್ರಾಧ್ಯಾಪಕರ ನೇಮಕಾತಿ, ಇತ್ತೀಚೆಗೆ ನಡೆದ ಪ್ರಥಮ ದರ್ಜೆ ಸಹಾಯಕರ ಪರೀಕ್ಷೆಯಲ್ಲೂ ಅಕ್ರಮ ನಡೆದಿತ್ತು. ಇಂತಹ ಪರೀಕ್ಷಾ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ರೂಪಿಸಿರುವ 'ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತ ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ–2023ಕ್ಕೆ ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ಪರೀಕ್ಷೆಯಲ್ಲಿ ನಕಲು ಮಾಡುವುದು, ಪ್ರಶ್ನೆಪತ್ರಿಕೆಗಳ ಸೋರಿಕೆ, ಉತ್ತರ ಪತ್ರಿಕೆ ಮತ್ತು ಒಎಂಆರ್ ಹಾಳೆಗಳನ್ನು ತಿದ್ದುವುದು, ಲಿಖಿತ ಅಥವಾ ವಿದ್ಯುನ್ಮಾನ ಅಥವಾ ಯಾಂತ್ರೀಕೃತ ಸಾಧನ/ ಉಪಕರಣ ಬಳಸುವುದು, ಪರೀಕ್ಷಾ ಕೇಂದ್ರದೊಳಕ್ಕೆ ಅಕ್ರಮ ಪ್ರವೇಶ ಮಾಡುವುದು, ಅನಧಿಕೃತ ಸ್ಥಳಗಳಲ್ಲಿ ಪರೀಕ್ಷೆ ಬರೆಸುವುದು ಸೇರಿದಂತೆ ಯಾವುದೇ ಬಗೆಯ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗುವುದನ್ನು ಶಿಕ್ಷಾರ್ಹ ಅಪರಾಧ ಎಂದು ಈ ಮಸೂದೆಯು ಘೋಷಿಸಲಿದೆ.

ನಕಲು ಅಥವಾ ಹೊರಗಿನಿಂದ ಸಹಾಯ ಪಡೆದು ಪರೀಕ್ಷಾ ಅಕ್ರಮ ಎಸಗುವ ಅಭ್ಯರ್ಥಿಗೆ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹10 ಲಕ್ಷ ದಂಡ ವಿಧಿಸುವ ಪ್ರಸ್ತಾವ ಮಸೂದೆಯ ಸೆಕ್ಷನ್ 10 (1)ರಲ್ಲಿದೆ.

ಅಭ್ಯರ್ಥಿಯೂ ಸೇರಿದಂತೆ ಯಾವುದೇ ವ್ಯಕ್ತಿ ಬೇರೊಬ್ಬರ ಹೆಸರಿನಲ್ಲಿ ಪರೀಕ್ಷೆ ಬರೆಯಲು ಪ್ರಯತ್ನಿಸುವುದು, ಪ್ರಶ್ನೆಪತ್ರಿಕೆ ಸೋರಿಕೆ ಮಾಡುವುದು, ಸೋರಿಕೆಗೆ ಪ್ರಯತ್ನಿಸುವುದು, ಅಕ್ರಮವಾಗಿ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಅಕ್ರಮವಾಗಿ ಉತ್ತರ ಬರೆಯುವುದು ಅಥವಾ ಬರೆಯಲು ನೆರವಾಗುವುದು, ನೆರವು ಕೋರುವುದು ಸೇರಿದಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪರೀಕ್ಷಾ ಅಕ್ರಮಕ್ಕೆ ನೆರವು ನೀಡುವವರಿಗೆ ಎಂಟರಿಂದ 12 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ₹15 ಲಕ್ಷದಿಂದ ₹10 ಕೋಟಿಯವರೆಗೂ ದಂಡ ವಿಧಿಸುವ ಪ್ರಸ್ತಾವ ಸೆಕ್ಷನ್ 10 (2)ರಲ್ಲಿದೆ.

ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದ ಅಭ್ಯರ್ಥಿಗಳು ಮುಂದಿನ ಎರಡು ವರ್ಷಗಳವರೆಗೆ ಯಾವುದೇ ಸಾರ್ವಜನಿಕ ಪರೀಕ್ಷೆಯನ್ನು ತೆಗೆದುಕೊಳ್ಳದಂತೆ ಅನರ್ಹಗೊಳಿಸುವ ಪ್ರಸ್ತಾವವು ಸೆಕ್ಷನ್ 11 (2)ರಲ್ಲಿದೆ. ಯಾವುದೇ ಸಂಸ್ಥೆ ಅಥವಾ ಅದರ ಆಡಳಿತ ಮಂಡಳಿಯು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದರೆ ಆ ಪರೀಕ್ಷೆಯ ಸಂಪೂರ್ಣ ವೆಚ್ಚವನ್ನು ಅಂತಹ ಸಂಸ್ಥೆ/ ಆಡಳಿತ ಮಂಡಳಿಯಿಂದಲೇ ವಸೂಲಿ ಮಾಡಲು ಸೆಕ್ಷನ್ 13 ಅವಕಾಶ ಕಲ್ಪಿಸಲಿದೆ.

ವಿಚಾರಣೆಗೆ ವಿಶೇಷ ನ್ಯಾಯಾಲಯ

ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯನ್ನು ವಿಶೇಷ ನ್ಯಾಯಾಲಯಗಳ ಮೂಲಕ ನಡೆಸುವ ಪ್ರಸ್ತಾವ ಸೆಕ್ಷನ್ 17ರಲ್ಲಿದೆ.

ಪರೀಕ್ಷಾ ಅಕ್ರಮಗಳ ಮಸೂದೆಯ ವ್ಯಾಪ್ತಿಗೆ ಬರುವ ಎಲ್ಲ ಅಪರಾಧಗಳನ್ನು ಸಂಜ್ಞೇಯ (ಕಾಗ್ನಿಸಬಲ್) ಮತ್ತು ಜಾಮೀನುರಹಿತ ಎಂದು ಘೋಷಿಸಲಾಗುತ್ತಿದೆ. ಈ ಪ್ರಕರಣಗಳ ತನಿಖೆಯನ್ನು ಹೆಚ್ಚುವರಿ ಎಸ್‌ಪಿಗಿಂತ ಕೆಳ ದರ್ಜೆಯ ಅಧಿಕಾರಿಗಳು ಮಾಡುವಂತಿಲ್ಲ.

ಯಾವ ಸಂಸ್ಥೆಗಳು ಮಸೂದೆ ವ್ಯಾಪ್ತಿಗೆ?

- ಕರ್ನಾಟಕ ಲೋಕಸೇವಾ ಆಯೋಗ
- ಕರ್ನಾಟಕ ಹೈಕೋರ್ಟ್
- ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)
- ಕರ್ನಾಟಕ ಸ್ಟಾಫ್ ಸೆಲೆಕ್ಷನ್ ಬೋರ್ಡ್
- ರಾಜ್ಯ ಸರ್ಕಾರವು ರಚಿಸುವ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿ ಅಥವಾ ನೇಮಕಾತಿ ಸಮಿತಿ
- ರಾಜ್ಯದಿಂದ ಅನುದಾನ ಪಡೆಯುವ ವಿಶ್ವವಿದ್ಯಾಲಯಗಳು
- ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ
- ಕರ್ನಾಟಕ ಪೊಲೀಸ್ ನೇಮಕಾತಿ ಮತ್ತು ಬಡ್ತಿ ಮಂಡಳಿ
- ರಾಜ್ಯ ಸರ್ಕಾರದ ಒಡೆತನದ ಸಾರ್ವಜನಿಕ ವಲಯದ ಉದ್ದಿಮೆಗಳು
- ಯಾವುದೇ ಸಹಕಾರ ಸಂಸ್ಥೆಗಳು, ನಿಗಮಗಳು, ಸ್ಥಳೀಯ ಸಂಸ್ಥೆಗಳು, ರಾಜ್ಯ ಸರ್ಕಾರದ ಗಣನೀಯ ಅಥವಾ ಭಾಗಶಃ ಒಡೆತನದ ಸಾರ್ವಜನಿಕ ಉದ್ದಿಮೆಗಳು
- ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಪ್ರಾಧಿಕಾರ

ಅನುದಾನ ಮೀರಿ ಕಾಮಗಾರಿ

ಒಂದನೇ ಪುಟದಿಂದ

ಏತ ನೀರಾವರಿ ಯೋಜನೆ ಅಡಿಯಲ್ಲಿ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೆರೆಗಳಿಗೆ ತುಂಬಿಸುವ ಕಾಮಗಾರಿ ನಡೆಸಲಾಗುತ್ತಿದೆ. ಪಶ್ಚಿಮವಾಹಿನಿ ವಿಭಾಗದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವು ಸಂರಕ್ಷಿಸಲು ಮತ್ತು ಸಂಗ್ರಹಿಸಲು ಪಶ್ಚಿಮವಾಹಿನಿ ಯೋಜನೆಯಡಿ ಕಿಂಡಿ ಅಣೆಕಟ್ಟುಗಳ ನಿರ್ಮಾಣ ಮಾಡಲಾಗುತ್ತಿದೆ. ಪ್ರವಾಹ ನಿಯಂತ್ರಣ ಸಣ್ಣ ಕಾಮಗಾರಿಗಳು ವಿಭಾಗದಲ್ಲಿ ನದಿ ದಂಡೆಗಳಿಗೆ ಪ್ರವಾಹದಿಂದ ಹಾನಿಯಾಗುವುದನ್ನು ತಡೆಯಲು ನದಿ ದಂಡೆ ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಐದು ಪ್ರಧಾನ ಯೋಜನೆಗಳಡಿ ಶೇ 90ರಷ್ಟು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಟೆಂಡರ್ ನಿಯಮಗಳ ಅನ್ವಯ ಕಾಮಗಾರಿ ಪೂರ್ಣಗೊಳಿಸಿ ಬಿಲ್‌ಗಳನ್ನು ಪಾವತಿಗೆ ಸಲ್ಲಿಸಿರುವ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಪಾವತಿಸಲು ಸರ್ಕಾರದಿಂದ ಹಣ ಬಿಡುಗಡೆ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಸಚಿವ ಬೋಸರಾಜು ಅವರಿಗೆ ಬೆಳಗಾವಿ ಜಿಲ್ಲಾ ಕಾರ್ಯನಿರತ ಗುತ್ತಿಗೆದಾರರ ಸಂಘ ಇದೇ 10ರಂದು ಮನವಿ ಸಲ್ಲಿಸಿದೆ.

'ಇಲಾಖೆಯ ವಿವಿಧ ವಿಭಾಗಗಳ ವ್ಯಾಪ್ತಿಯಲ್ಲಿ ಕೈಗೊಂಡ ಹಲವು ಕಾಮಗಾರಿಗಳ ಬಿಲ್‌ಗಳು ಬಾಕಿ ಇವೆ. ಇದರಿಂದ ಬಹುತೇಕ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಕಾಮಗಾರಿಗೆ ಪಡೆದ ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿ, ಕುಟುಂಬ ನಿರ್ವಹಣೆ ಹೀಗೆ ವೆಚ್ಚ ನಿಭಾಯಿಸಲಾಗದೆ ಮುಜುಗರ ಅನುಭವಿಸುವಂತಾಗಿದೆ. ಬಿಲ್ ಪಾವತಿಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು' ಎಂದು ಸಂಘದ ಅಧ್ಯಕ್ಷ ಆರ್.ಡಿ. ಪದ್ಮಣ್ಣವರ ಮನವಿಯಲ್ಲಿ ಕೋರಿದ್ದಾರೆ.

ಎಡಿಜಿಪಿ ವಿರುದ್ಧ ಚಾರ್ಜ್‌ಶೀಟ್

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ಆರೋಪಿಯಾದ ಎಡಿಜಿಪಿ ಅಮೃತ್ ಪೌಲ್ ವಿರುದ್ಧ ಸಿಐಡಿ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದಾರೆ. ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮೃತ್ ಪೌಲ್ ಅವರು ಇತ್ತೀಚೆಗಷ್ಟೇ ಜಾಮೀನು ಮೇಲೆ ಜೈಲಿನಿಂದ ಹೊರಗೆ ಬಂದಿದ್ದರು.

'545 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ನಡೆದಿದ್ದ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿತ್ತು. ಈ ಬಗ್ಗೆ ತನಿಖೆ ನಡೆಸಿ ಎಡಿಜಿಪಿ ಅಮೃತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್ ಸೇರಿ 100ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಲಾಗಿತ್ತು' ಎಂದು ಸಿಐಡಿ ಮೂಲಗಳು ಹೇಳಿವೆ.

'ಡಿವೈಎಸ್ಪಿ ಹಾಗೂ ಇತರರ ವಿರುದ್ಧ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಇದೀಗ, ಅಮೃತ್ ಪೌಲ್ ವಿರುದ್ಧ ಪಟ್ಟಿ ಸಲ್ಲಿಸಲಾಗಿದೆ. ಸಾಕ್ಷಿಗಳ ಹೇಳಿಕೆ, ಸಾಕ್ಷ್ಯಾಧಾರಗಳ ವಿವರಣೆ ಹಾಗೂ ಇತರೆ ಪುರಾವೆಗಳನ್ನು ಪಟ್ಟಿಯಲ್ಲಿ ಲಗತ್ತಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನ ನ. 26ಕ್ಕೆ

ಪ್ರಜಾವಾಣಿ ವಾರ್ತೆ



ಶಾಂತಾರಾಂ ಸಿದ್ದಿ

ಶಿರಸಿ: ಮತಾಂತರ ಗೊಂಡ ಗಿರಿಜನರನ್ನು ಪರಿಶಿಷ್ಟ ಪಂಗಡದಿಂದ ಕೈಬಿಡಲು ಒತ್ತಾಯಿಸಿ ಗಿರಿಜನ ಸುರಕ್ಷಾ ವೇದಿಕೆ ವತಿಯಿಂದ ನ. 26ರಂದು ಮೈಸೂರಿನಲ್ಲಿ ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸದಸ್ಯ ಶಾಂತಾರಾಂ ಸಿದ್ದಿ ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿ, 'ದೇಶದಲ್ಲಿ 700ಕ್ಕೂ ಹೆಚ್ಚು ಗಿರಿಜನ ಪಂಗಡಗಳ ಅಭಿವೃದ್ಧಿ ಮತ್ತು ಉನ್ನತೀಕರಣದ ಸಲುವಾಗಿ ರಾಜ್ಯಾಂಗವು ಮೀಸಲಾತಿ ಮತ್ತು ಇತರ ಸರ್ಕಾರದ ಸೌಲಭ್ಯಗಳನ್ನು ಹೊಂದುವ ಅವಕಾಶ ನೀಡಿದೆ. ಆದರೆ ಮತಾಂತರಗೊಂಡವರಿಗೆ ಈ ಮೀಸಲಾತಿ, ಇನ್ನಿತರ ಪರಿಶಿಷ್ಟ ಪಂಗಡಕ್ಕೆ ನೀಡುವ ಸವಲತ್ತುಗಳನ್ನು ನೀಡಬಾರದು' ಎಂದರು.

'ಸರ್ಕಾರ ಈ ಸೌಲಭ್ಯಗಳನ್ನು ಗಿರಿಜನರು ಸಂಸ್ಕೃತಿ, ಸಂಪ್ರದಾಯಗಳು, ಅವರ ನಂಬಿಕೆ ವಿಶ್ವಾಸಗಳನ್ನು ಉಳಿಸಿಕೊಳ್ಳಲು ಮತ್ತು ಅಭಿವೃದ್ಧಿಗೆಂದು ನೀಡಿದೆ. ಆದರೆ ಕೆಲ ಗಿರಿಜನರು ಅವರ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳನ್ನು ಬಿಟ್ಟು ಇತರ ಧರ್ಮಕ್ಕೆ ಪರಿವರ್ತನೆಗೊಂಡು ಪರಿಶಿಷ್ಟ ಪಂಗಡಕ್ಕೆ ಸಿಗುತ್ತಿರುವ ಮೀಸಲಿಟ್ಟ ಸರ್ಕಾರಿ ಸೌಲಭ್ಯಗಳನ್ನು ಮತ್ತು ಇನ್ನಿತರ ಸವಲತ್ತುಗಳನ್ನೂ ಸಹ ಪಡೆಯುತ್ತಿದ್ದಾರೆ. ಮತಾಂತರಗೊಂಡವರು ನಿಜವಾದ ಮೂಲ ಗಿರಿಜನರಿಗೆ ಸೇರುವ ಹಕ್ಕು ಸೌಕರ್ಯಗಳನ್ನು ಶೇ 80ರಷ್ಟು ಉಪಯೋಗಿಸಿಕೊಳ್ಳುತ್ತಿದ್ದು, ನಿಜವಾದ ಗಿರಿಜನರು ಈ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. 'ನಿಜವಾದ ಗಿರಿಜನರಿಗೆ ಆಗುತ್ತಿರುವ ಈ ನಷ್ಟವನ್ನುಗಿರಿಜನರಿಗೆ ತಿಳಿಸುತ್ತ ಮತಾಂತರರಾದ ಪರಿಶಿಷ್ಟ ಪಂಗಡದ ಗಿರಿಜನರಿಗೆ ಈ ಸವಲತ್ತು ನೀಡಬಾರದು ಎಂಬ ಧ್ವನಿ ಸರ್ಕಾರಕ್ಕೆ ತಲುಪಿಸುವುದಕ್ಕಾಗಿ ಗಿರಿಜನ ಸಾಂಸ್ಕೃತಿಕ ಸಮ್ಮೇಳನ ಆಯೋಜಿಸಲಾಗುತ್ತಿದೆ' ಎಂದರು.

'ಬರ ಪರಿಹಾರ ಎಚ್‌ಡಿಕೆಗೆ ಮಾಹಿತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರ ಪರಿಹಾರ ಕಾಮಗಾರಿಗೆ ರಾಜ್ಯ ಸರ್ಕಾರ ಈಗಾಗಲೇ ಅನುದಾನ ಬಿಡುಗಡೆ ಮಾಡಿದೆ. ಆದರೆ, ಕುಮಾರಸ್ವಾಮಿಗೆ ಆ ಮಾಹಿತಿ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಬರ ಪರಿಹಾರ ಜನರಿಗೆ ಈವರೆಗೂ ತಲುಪಿಲ್ಲ' ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಬರ ಪರಿಹಾರಕ್ಕೆ ಎಲ್ಲ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗೆ ಸುಮಾರು ₹800 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಕುಡಿಯುವ ನೀರು, ಮೇವು ಸೇರಿದಂತೆ ಇತರ ಪರಿಹಾರ ಕಾರ್ಯಗಳಿಗೆ ವಿನಿಯೋಗಿಸಲಾಗುವುದು' ಎಂದರು.

ಅನ್ಯಾಯ ಸರಿಪಡಿಸಲಿ: 'ಬಿಜೆಪಿ ನಾಯಕರು ಬರ ಪ್ರವಾಸ ಕೈಗೊಳ್ಳುವ ಬದಲು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ಅನ್ಯಾಯವನ್ನು ಮೊದಲು ಸರಿಪಡಿಸಲಿ. ರಾಜ್ಯದ ಎಲ್ಲಾ ಸಂಸದರನ್ನು ಕರೆದುಕೊಂಡು ಹೋಗಿ ಬರ ಪರಿಹಾರಕ್ಕೆ ಕೇಂದ್ರದಿಂದ ಹಣ ಬಿಡುಗಡೆ ಮಾಡಿಸಲಿ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಘಟಕಗಳ ಪುನರ್‌ರಚನೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ವಿರೋಧ ಪಕ್ಷ ನಾಯಕನ ಸ್ಥಾನಕ್ಕೆ ನೇಮಕಗೊಂಡ ಬೆನ್ನಲ್ಲೇ ಪಕ್ಷದ ಎಲ್ಲ ಘಟಕಗಳನ್ನು ಪುನರ್‌ರಚಿಸಲು ತೀರ್ಮಾನಿಸಲಾಗಿದೆ.

ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಯಾವುದೇ ಘಟಕಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿರಲಿಲ್ಲ. ಆದ್ದರಿಂದ, ಸಕ್ರಿಯವಾಗಿ ಕಾರ್ಯ ನಿರ್ವಹಿಸುವವರು ಮತ್ತು ಕ್ರಿಯಾಶೀಲರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ತಳ ಹಂತದಿಂದಲೂ ಪಕ್ಷದ ಚಟುವಟಿಕೆಯನ್ನು ಕ್ರಿಯಾಶೀಲಗೊಳಿಸಲು ಉದ್ದೇಶಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಐದು ರಾಜ್ಯಗಳ ಚುನಾವಣೆ ಬಳಿಕ ಈ ಪುನರ್‌ರಚನೆ ಪ್ರಕ್ರಿಯೆ ನಡೆಯಲಿದೆ. ಅದಕ್ಕೂ ಮೊದಲು ಪಕ್ಷದ ಅಧ್ಯಕ್ಷ ವಿಜಯೇಂದ್ರ ಮತ್ತು ನಾನು ದೆಹಲಿಗೆ ಹೋಗಿ ವರಿಷ್ಠರ ಜತೆ ಚರ್ಚಿಸುತ್ತೇವೆ. ಕಾರ್ಯಕರ್ತರಲ್ಲಿ ಈಗ ಹೊಸ ಉತ್ಸಾಹ ಮೂಡಿದೆ. ಆ ಬಳಿಕ ಸರ್ಕಾರದ ವಿರುದ್ಧ ಹೋರಾಟ ಇನ್ನಷ್ಟು ತೀವ್ರಗೊಳಿಸಲಾಗುವುದು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ 'ಪ್ರಜಾವಾಣಿ'ಗೆ ತಿಳಿಸಿದರು.

'ಮುಂಬರುವ ಲೋಕಸಭೆ ಚುನಾವಣೆಯೂ ಸೇರಿದಂತೆ ಎಲ್ಲ ಚುನಾವಣೆಗಳನ್ನು ಸಾಮೂಹಿಕ ನಾಯಕತ್ವದಲ್ಲೇ ಎದುರಿಸಲಾಗುವುದು. ಅದಕ್ಕಾಗಿ ಕೆಳ ಹಂತದಿಂದಲೂ ಸಂಘಟನೆ ಬಲಪಡಿಸಬೇಕಾಗಿದೆ. ಲೋಕಸಭೆಯಲ್ಲಿ 28ಕ್ಕೆ 28 ಗೆಲ್ಲುವುದು ನಮ್ಮ ಗುರಿ, ಜೆಡಿಎಸ್ ಎನ್‌ಡಿಎ ಸೇರಿರುವುದರಿಂದ ಈ ಗುರಿಯನ್ನು ಸಾಧಿಸಲು ಸಾಧ್ಯ. ಜೆಡಿಎಸ್ ಮತಗಳು ನಮಗೂ ನಮ್ಮ ಮತಗಳೂ ಜೆಡಿಎಸ್‌ಗೂ ಸುಲಭವಾಗಿ ವರ್ಗಾವಣೆ ಆಗುತ್ತವೆ' ಎಂದು ಅಶೋಕ ವಿವರಿಸಿದರು.

ಕಚೇರಿಯಲ್ಲಿ ಅಹವಾಲು: ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಬೆಂಗಳೂರಿನಲ್ಲಿ ಇದ್ದ ದಿನ ಪಕ್ಷದ ಕಚೇರಿಯಲ್ಲಿ ಒಂದೂವರೆ ತಾಸು ಇದ್ದು ಕಾರ್ಯಕರ್ತರ ಅಹವಾಲುಗಳನ್ನು ಕೇಳಲಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಕಳೆದ ಕೆಲವು ದಿನಗಳಿಂದ ನಿರಂತರ ಪ್ರವಾಸದಲ್ಲಿದ್ದ ವಿಜಯೇಂದ್ರ ಮಂಗಳವಾರ ಬೆಳಿಗ್ಗೆ ಪಕ್ಷದ ಕಚೇರಿಗೆ ಬಂದು ಸುಮಾರು ಒಂದು ತಾಸು ಇದ್ದು ಕಾರ್ಯಕರ್ತರ ಅಹವಾಲುಗಳನ್ನು ಆಲಿಸಿದರು. ಇದು ಇನ್ನು ಮುಂದೆ ನಿರಂತರವಾಗಿ ನಡೆಯಲಿದೆ.

'ಸರ್ಕಾರದ ಅಂಕಿ–ಅಂಶವೇ ಪ್ರಶ್ನಾರ್ಹ'

'ಕಾಂಗ್ರೆಸ್ ನುಡಿದಂತೆ ನಡೆದ ಸರ್ಕಾರ ಅಲ್ಲ. ಆರು ತಿಂಗಳ ಆಡಳಿತದ ಕುರಿತು ನೀಡಿರುವ ಅಂಕಿ–ಅಂಶಗಳು ಪ್ರಶ್ನಾರ್ಥಕವಾಗಿವೆ' ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಕ್ಕಿ ಬದಲಿಗೆ ಹಣ ಕೊಡುವುದಾಗಿ ಸರ್ಕಾರ ಹೇಳಿತ್ತು. ಆದರೆ, ಎಷ್ಟೋ ಜನರಿಗೆ ಹಣವೇ ಸಿಕ್ಕಿಲ್ಲ. ಗೃಹ ಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ₹2,000 ಒಂದು ಕಂತು ಮಾತ್ರ ಸಿಕ್ಕಿದೆ. ಮೂರು ತಿಂಗಳಿಂದ ಹಣವೇ ಬಂದಿಲ್ಲ. ಯುವನೀತಿಗೆ ಚಾಲನೆಯೇ ಸಿಕ್ಕಿಲ್ಲ' ಎಂದು ಅವರು ದೂರಿದರು.

ನಾಲ್ಕು ವಿಧಗಳಲ್ಲಿ ತನಿಖೆ: ಜಾರ್ಜ್

ಒಂದನೇ ಪುಟದಿಂದ

'ಘಟನೆ ಕುರಿತು ಚೀಫ್ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟೊರೇಟ್ ನೀಡಿರುವ ಪ್ರಾಥಮಿಕ ತನಿಖಾ ವರದಿ ಪ್ರಕಾರ, ಇದು ತಾಂತ್ರಿಕ ಸಮಸ್ಯೆಯಿಂದ ನಡೆದಿರುವಂಥ ಘಟನೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಬೆಸ್ಕಾಂ ಅಧಿಕಾರಿಗಳ ವಿರುದ್ಧ ಪೊಲೀಸ್ ಕ್ರಮ ಕೈಗೊಳ್ಳಲು ನಾವು ಅಡ್ಡಿಪಡಿಸಿಲ್ಲ' ಎಂದು ತಿಳಿಸಿದರು.

'ನಗರದಲ್ಲಿ ವಿದ್ಯುತ್ ತಂತಿಗಳ ಮೇಲೆ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಎಳೆಯಲಾಗಿದೆ. ಇದು ಮತ್ತೊಂದು ರೀತಿಯ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಕೇಬಲ್‌ಗಳನ್ನು ಒಮ್ಮೆಲೆ ತೆಗೆದು ಹಾಕುವಂತೆ ಆದೇಶಿಸಲು ಆಗುವುದಿಲ್ಲ. ಹಾಗಾಗಿ, 15 ದಿನಗಳಲ್ಲಿ ಕೇಬಲ್‌ಗಳನ್ನು ಭೂಗತ ಮಾರ್ಗಗಳಲ್ಲಿ ಅಳವಡಿಸಲು ಅವಕಾಶ ನೀಡಲಾಗುತ್ತಿದೆ. ಕಾಲಮಿತಿಯಲ್ಲಿ ತೆರವುಗೊಳಿಸದಿದ್ದರೆ ಕ್ರಮ ಕೈಗೊಳ್ಳುತ್ತೇವೆ. ವಿದ್ಯುತ್ ತಂತಿ ಮೇಲಿರುವ ಎಲ್ಲಾ ಆಪ್ಟಿಕಲ್ ಕೇಬಲ್‌ಗಳ ಸಂಪರ್ಕ ಕಡಿತ ಮಾಡಲಾಗುವುದು' ಎಂದರು.

ಘಟನೆಯ ಹಿಂದಿನ ಕಾರಣ

'ಪ್ರಕರಣದ ಪ್ರಾಥಮಿಕ ಹಂತದ ತನಿಖೆಯಲ್ಲಿ ದೊರೆತ ಮಾಹಿತಿ ಪ್ರಕಾರ, ಘಟನಾ ಸ್ಥಳದ ಸಮೀಪದಲ್ಲಿ ಔದುಂಬರ ಅಪಾರ್ಟ್‌ಮೆಂಟ್ ಸಮುಚ್ಚಯವಿದೆ. ಅಲ್ಲಿಯ ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ ಬಾಕ್ಸ್‌ನಲ್ಲಿ ಇಲಿ ಅಥವಾ ಹೆಗ್ಗಣ ಓಡಾಡಿದ್ದು, ಇದರಿಂದ ಶಾರ್ಟ್ ಸರ್ಕೀಟ್ ಉಂಟಾಗಿತ್ತು' ಎಂದು ಜಾರ್ಜ್ ಹೇಳಿದರು.

'ಶಾರ್ಟ್ ಸರ್ಕೀಟ್ ಪರಿಣಾಮ, ಟ್ರಾನ್ಸ್‌ಫಾರ್ಮರ್‌ಗೆ ಜೋಡಿಸಿದ್ದ 11 ಕೆ.ವಿ ಸಾಮರ್ಥ್ಯದ ತಂತಿಯಲ್ಲಿ ಭಾರಿ ಪ್ರಮಾಣದಲ್ಲಿ ವಿದ್ಯುತ್ ಪ್ರವಹಿಸಿತ್ತು. ಇದೇ ಕಾರಣಕ್ಕೆ ತಂತಿಗಳು ದುರ್ಬಲಗೊಂಡು ತುಂಡಾಗಿ ನೆಲಕ್ಕೆ ಬಿದ್ದಿವೆ. ಈ ವೇಳೆ ಕಾಡುಗೋಡಿ ಸಬ್ ಸ್ಟೇಷನ್‌ಲ್ಲಿ ಫೀಡರ್ ಲೈನ್ ಟ್ರಿಪ್ ಆಗಿದೆ. ಎಚ್ಚೆತ್ತ ಸಿಬ್ಬಂದಿ, ಟ್ರಿಪ್ ಆದ ಫೀಡರ್ ಲೈನ್ ಅನ್ನು ಪರೀಕ್ಷೆ ಮಾಡಿ ಪುನಃ ಚಾರ್ಜ್ ಮಾಡಿದ್ದಾರೆ. ತುಂಡಾದ ತಂತಿ ಸಿಮೆಂಟ್ ಹಾಗೂ ಮರಳು ಇರುವ ಪಾದಚಾರಿ ಮಾರ್ಗದ ಮೇಲೆ ಬಿದ್ದಿದ್ದರಿಂದ ಅದರಲ್ಲಿ ವಿದ್ಯುತ್ ಪ್ರವಹಿಸುತ್ತಲಿತ್ತು. ಈ ಹಾದಿಯಲ್ಲಿ ಬರುತ್ತಿದ್ದ ತಾಯಿ ಸೌಂದರ್ಯ, ತಂತಿ ಮೇಲೆ ಕಾಲಿಟ್ಟದ್ದರಿಂದ ಈ ಅವಘಡ ಸಂಭವಿಸಿರಬಹುದು. ಬರೀ ಮಣ್ಣಿನ ಮೇಲೆ ತಂತಿ ಬಿದ್ದಿದ್ದರೆ, ಅದು ಅರ್ಥಿಂಗ್ ಆಗಿ, ಸ್ಟೇಷನ್‌ಗೆ ಸೂಚನೆ ಹೋಗಿರುತ್ತಿತ್ತು' ಎಂದರು.

ಪ್ರವೀಣ್ ಚೌಗಲೆ ಡಿಎನ್‌ಎ ಪರೀಕ್ಷೆ


ಪ್ರಜಾವಾಣಿ ವಾರ್ತೆ

ಉಡುಪಿ: ನೇಜಾರಿನಲ್ಲಿ ನಡೆದ ಒಂದೇ ಕುಟುಂಬದ ನಾಲ್ವರ ಕೊಲೆ ಪ್ರಕರಣದ ಆರೋಪಿ ಪ್ರವೀಣ್ ಚೌಗಲೆಯ ಡಿಎನ್‌ಎ ಪರೀಕ್ಷೆ ಮಂಗಳವಾರ ನಡೆಯಿತು.

ಆರೋಪಿಯ ಡಿಎನ್‌ಎ ಪರೀಕ್ಷೆಗೆ ಪೊಲೀಸರು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯ ಅನುಮತಿ ನೀಡಿತ್ತು. ವೈದ್ಯಾಧಿಕಾರಿಗಳು ಆರೋಪಿ ಪ್ರವೀಣ್ ಚೌಗಲೆಯ ರಕ್ತದ ಮಾದರಿಯನ್ನು ಪಡೆದುಕೊಂಡರು.

'ಕೊಲೆ ಮಾಡಿದ ಬಳಿಕ ಮೂಲ್ಕಿಯ ಬಪ್ಪನಾಡು ಸಮೀಪದ ಪಾಳು ಮನೆಯೊಂದರಲ್ಲಿ ರಕ್ತಸಿಕ್ತ ಬಟ್ಟೆಗಳನ್ನು ಸುಟ್ಟುಹಾಕಿದ್ದು, ಸೋಮವಾರ ಪೊಲೀಸರು ಸ್ಥಳ ಮಹಜರು ನಡೆಸಿ ಸುಟ್ಟ ಬಟ್ಟೆಯ ಕುರುಹುಗಳನ್ನು ವಶಕ್ಕೆ ಪಡೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆಯನ್ನು ಬಹುತೇಕ ಪೂರ್ಣಗೊಳಿಸಿರುವ ಪೊಲೀಸರು ನ.22ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. 'ಮಂಗಳೂರಿನ ಬಿಜೈನಲ್ಲಿ ಮೃತ ಯುವತಿ ವಾಸವಿದ್ದ ಕೊಠಡಿಯ ಸಮೀಪ ಆರೋಪಿ ಪ್ರವೀಣ್ ಚೌಗಲೆಗೆ ಸೇರಿದ ಸ್ಕೂಟರ್ ಪತ್ತೆಯಾಗಿದ್ದು, ವಶಕ್ಕೆ ಪಡೆಯಲಾಗಿದೆ. ಆರೋಪಿ ಹೊಸ ಕಾರು ಖರೀದಿಸಿದ ಬಳಿಕ ಸ್ಕೂಟರ್ ಅನ್ನು ಸಹೋದ್ಯೋಗಿ ಯುವತಿಗೆ ಮಾರಾಟ ಮಾಡಿರುವ ಸಾಧ್ಯತೆ ಇದೆ' ಎಂಬುದು ಪೊಲೀಸ್ ಮೂಲಗಳ ಮಾಹಿತಿ.





ಕುಕೀ ಪ್ರೊಫೈಲ್
ನಮ್ಮ ಇಂಟರ್‌ನೆಟ್ ಬಯೋಡೇಟಾ!

ಕೃಷ್ಣ ಭಟ್

ಹಾಲ್‌ನಲ್ಲಿ ಕುಳಿತ ಪತಿ 'ರಾಜಾಜಿನಗರದಲ್ಲಿ ಆ ಹೋಟೆಲ್ ಎಷ್ಟು ಚೆನ್ನಾಗಿದೆ ಗೊತ್ತಾ? ಅಲ್ಲಿ ಪೆಪ್ಪರ್ ಡ್ರೈ ಮಂಚೂರಿ ಎಷ್ಟು ಚೆನ್ನಾಗಿರತ್ತೆ ಅಂತೀಯಾ...' ಎಂದು ಅಡುಗೆಮನೆಗೆ ಕೇಳಿಸುವ ಹಾಗೆ ಹೇಳಿದ. ಅಡುಗೆಮನೆಯಲ್ಲಿ ಹಾಲನ್ನು ಒಲೆ ಮೇಲೆ ಕಾಯಿಸುವುದಕ್ಕೆ ಇಟ್ಟುಕೊಂಡು, ನಿಂತಿದ್ದ ಆತನ ಪತ್ನಿ 'ಹೌದಾ?' ಎಂದಳು. ಹಾಲು ಕಾಯುವುದಕ್ಕೆ ಇನ್ನೂ ಎರಡು ನಿಮಿಷ ಇದೆ ಎಂದು ಅಂದುಕೊಂಡು, ಸ್ಮಾರ್ಟ್‌ಫೋನ್ ಅನ್‌ಲಾಕ್ ಮಾಡಿ ಸೋಷಿಯಲ್ ಮೀಡಿಯಾ ಆ್ಯಪ್ ತೆರೆದರೆ ಮೂರನೇ ಪೋಸ್ಟ್‌ಗೆ ಸ್ಕ್ರೋಲ್ ಆಗ್ತಾ ಇದ್ದ ಹಾಗೆಯೇ ರಾಜಾಜಿನಗರದ ಹೋಟೆಲ್‌ನ ಅಡ್ವರ್ಟೈಸು!

ಅರೆ! ಇದು ಹೇಗೆ ಬಂತು? ನಮ್ಮ ಮನೆಯಲ್ಲೆಲ್ಲಾದರೂ ಕ್ಯಾಮೆರಾ ಏನಾದರೂ ಇಟ್ಟಿದಾರಾ? ಎಂತ ಕಥೆ ಇದು? ನಮ್ಮ ಮನೆಯವರು ರಾಜಾಜಿನಗರದ ಹೋಟೆಲ್ ಬಗ್ಗೆ ಹೇಳಿದ ಕೂಡಲೇ ನನ್ನ ಮೊಬೈಲ್‌ನಲ್ಲಿ ಅದೇ ಹೋಟೆಲ್‌ನ ಜಾಹೀರಾತು ಕಾಣಿಸಿದ್ದು ಹೇಗೆ?

ಮೇಲ್ನೋಟಕ್ಕೆ ಇದೊಂದು ಪತ್ತೇದಾರಿ ಚಟುವಟಿಕೆ ಥರ ಕಾಣಿಸಬಹುದು. ಆದರೆ, ವಾಸ್ತವ ಬೇರೆಯೇ ಇದೆ... ರಾಜಾಜಿನಗರದ ಹೋಟೆಲ್ ಸುದ್ದಿಯನ್ನು ಹೇಳುವುದಕ್ಕೂ ಒಂದು ಕ್ಷಣ ಮೊದಲು, ಆ ಹೋಟೆಲ್‌ನ ಹೆಸರು ನೆನಪಾಗದ ಪತಿ ತನ್ನ ಮೊಬೈಲ್‌ನಲ್ಲಿ ಬ್ರೌಸರ್ ತೆಗೆದು 'ರಾಜಾಜಿನಗರ ಹೋಟೆಲ್' ಎಂದು ಹುಡುಕಿದ್ದ. ಅವನ ಬ್ರೌಸರಿನಲ್ಲಿ 'ಕುಕೀ' ಸೇವ್ ಆಗಿತ್ತು. ಅಷ್ಟೇ ಅಲ್ಲ, ಅವನ ಕುಕೀ ಪ್ರೊಫೈಲಿಂಗ್‌ನಲ್ಲಿ ಅವನ ಹೆಂಡತಿಯನ್ನೂ 'ರಿಲೇಟಿವ್' ಎಂದು ಲಿಂಕ್ ಮಾಡಲಾಗಿತ್ತು. ಹಾಗಾಗಿ, ಆತ ಏನೇ ಹುಡುಕಿದರೂ ಅದಕ್ಕೆ ಸಂಬಂಧಿಸಿದ ಜಾಹೀರಾತು ಅವಳ ಸ್ಮಾರ್ಟ್‌ಫೋನ್‌ನಲ್ಲೂ, ಅವಳು ಏನೇ ಹುಡುಕಿದರೂ ಅದಕ್ಕೆ ಸಂಬಂಧಿಸಿದ ಜಾಹೀರಾತುಗಳು ಇವನ ಮೊಬೈಲ್‌ನಲ್ಲೂ ಕಾಣಿಸುತ್ತವೆ.



ಏನಿದು ಕುಕೀ ಪ್ರೊಫೈಲಿಂಗ್?

'ಕುಕೀ' ಎನ್ನುವುದು ನಮ್ಮ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಒಂದು ಸಣ್ಣ ಫೈಲ್. ಅದರಲ್ಲಿ ನಮ್ಮ ಐಪಿ ವಿಳಾಸ, ನಮ್ಮ ವಯಸ್ಸು, ನಾವು ಯಾವ ಸ್ಥಳದಲ್ಲಿ ವಾಸವಿದ್ದೇವೆ, ಯಾವ ವೆಬ್‌ಸೈಟ್‌ನ ಯಾವ ಪೇಜ್‌ಗೆ ಭೇಟಿ ನೀಡಿದ್ದೇವೆ ಎಂಬುದನ್ನು ಸಂಗ್ರಹಿಸಲಾಗುತ್ತದೆ. ಇದರಲ್ಲಿ ಹಲವು ರೀತಿಯ ಕುಕೀಗಳಿವೆ. ತಾತ್ಕಾಲಿಕ ಕುಕೀಗಳು ಸಾಮಾನ್ಯವಾಗಿ ಬ್ರೌಸರ್ ಮುಚ್ಚಿದ ತಕ್ಷಣ ಅಳಿಸಿಹೋಗುತ್ತವೆ. ಆದರೆ, ಪರ್ಮನೆಂಟ್ ಕುಕೀಗಳು ಅಥವಾ ಶಾಶ್ವತ ಕುಕೀಗಳು 12 ತಿಂಗಳುಗಳವರೆಗೆ ಇರುತ್ತವೆ. ಅಲ್ಲಿಯವರೆಗೆ ನಮ್ಮ ಎಲ್ಲ ಮಾಹಿತಿಯೂ ಕುಕೀಗಳಲ್ಲಿ ಉಳಿದಿರುತ್ತವೆ.

ಈ ಕುಕೀಗಳನ್ನೆಲ್ಲ ಸೇರಿಸಿ ಒಬ್ಬ ವ್ಯಕ್ತಿಯ ಪ್ರೊಫೈಲ್ ಅನ್ನು ರಚಿಸಲಾಗುತ್ತದೆ. ಅಂದರೆ, ನಾವು ಬ್ರೌಸರ್‌ನಲ್ಲಿ ಒಂದು ರೆಸಿಪಿ ಹುಡುಕುತ್ತೇವೆ. ಅದಾದ ನಂತರ, ಒಂದು ಅಡುಗೆ ವೆಬ್‌ಸೈಟ್‌ಗೆ ಹೋಗುತ್ತೇವೆ. ಆಗ ನಿಮ್ಮನ್ನು ಈ ಕುಕೀ ಪ್ರೊಫೈಲಿಂಗ್ 'ಅಡುಗೆ ಪ್ರಿಯರು' ಎಂದು ಗುರುತಿಸುತ್ತದೆ. ಅಲ್ಲೊಂದು ಅಡುಗೆ ಪ್ರಿಯರ ಪ್ರೊಫೈಲ್ ಇರುತ್ತದೆ. ಆ ಪ್ರೊಫೈಲ್‌ಗೆ ನಿಮ್ಮನ್ನು ಸೇರಿಸಲಾಗುತ್ತದೆ! ಆಮೇಲೆ ನಿಮಗೆ ಅಡುಗೆ ಜಾಹೀರಾತುಗಳು ಕಾಣಿಸಲು ಶುರುವಾಗುತ್ತವೆ! ಹೀಗೆ ಥರಹೇವಾರಿ ಪ್ರೊಫೈಲ್ ಇರುತ್ತವೆ. ಈ ಪ್ರೊಫೈಲ್‌ಗಳು ನಿಮ್ಮ ಆಸಕ್ತಿ, ಇಷ್ಟ ಅನಿಷ್ಟಗಳನ್ನು ಗುರುತಿಸುತ್ತವೆ.

ಅಷ್ಟೇ ಅಲ್ಲ, ಇದರಲ್ಲಿ ರಿಲೇಟಿವ್ ಪ್ರೊಫೈಲ್‌ಗಳೂ ಇವೆ. ನೀವು ಯಾವುದೋ ವೆಬ್‌ಸೈಟ್‌ನಲ್ಲಿ ನಿಮ್ಮ ಪತ್ನಿಯ, ಮಕ್ಕಳ, ಸೋದರ ಸೋದರಿಯರ ಇಮೇಲ್ ವಿಳಾಸ, ಫೋನ್ ನಂಬರ್ ಅಥವಾ ಇತರ ಮಾಹಿತಿಯನ್ನು ಒಂದೆರಡು ಬಾರಿ ನಮೂದಿಸಿರುತ್ತೀರಿ. ಆಗ ಅವರನ್ನು ನಿಮ್ಮ ರಿಲೇಟಿವ್ ಪ್ರೊಫೈಲ್‌ಗೆ ಸೇರಿಸಲಾಗುತ್ತದೆ. ನಿಮಗೆ ಒಂದು ರೀತಿಯ ಜಾಹೀರಾತನ್ನು ನಿಮ್ಮ ಪ್ರೊಫೈಲ್ ಆಧಾರದಲ್ಲಿ ತೋರಿಸಲು ಶುರು ಮಾಡಿದರೆ, ಅವರಿಗೂ ಅಂಥದ್ದೇ ಜಾಹೀರಾತು ಕಾಣಿಸುತ್ತವೆ.

ಇವೆಲ್ಲವೂ ಯಾವುದೋ ಕ್ಯಾಮೆರಾ ಇಟ್ಟು ಮಾಡುವಂಥದ್ದಲ್ಲ. ಬದಲಿಗೆ ನಮ್ಮ ಸ್ಮಾರ್ಟ್‌ಫೋನೇ ನಮ್ಮ ಜಾಡುಗಳನ್ನು, ಹೆಜ್ಜೆ ಗುರುತುಗಳನ್ನು ಮೂಡಿಸುತ್ತ ಹೋಗುತ್ತಿರುತ್ತದೆ. ಅದೇ ನಮ್ಮ ಪತ್ತೇದಾರಿಕೆ ಸಾಧನ!

ಇವೆಲ್ಲವನ್ನೂ ಜಾಹೀರಾತು ನೀಡುವ ಸಂಸ್ಥೆಗಳು ಮಾಡುತ್ತವೆ. 'ಕುಕೀ ಪ್ರೊಫೈಲಿಂಗ್' ಎಂಬುದು ಈ ಕಾಲದ ಒಂದು ಹೊಸ ಅತ್ಯಾಧುನಿಕ, ಅತ್ಯಂತ ಜಾಣ ವ್ಯವಸ್ಥೆ. ಹಾಗೆಂದ ಮಾತ್ರಕ್ಕೆ ನಾವು ತೆರೆದ ಎಲ್ಲ ವೆಬ್‌ಸೈಟ್‌ಗಳು ಶಾಶ್ವತ ಕುಕೀಗಳನ್ನು ಸಂಗ್ರಹಿಸುತ್ತವೆಯೇ? ಖಂಡಿತ ಇಲ್ಲ. ಕುಕೀಗಳನ್ನು ಸಂಗ್ರಹಿಸುವುದಕ್ಕೂ ಮೊದಲು ನಮ್ಮ ಬಳಿ ಕೇಳುತ್ತವೆ. ಕುಕೀ ಸಂಗ್ರಹಿಸಲು ನಾವು ಅನುಮತಿ ನೀಡಿದರಷ್ಟೇ ಅವು ಮುಂದುವರಿಯುತ್ತವೆ. ಇಲ್ಲವಾದರೆ, ಸೆಷನ್ ಕುಕೀಗಳನ್ನಷ್ಟೇ ಸಂಗ್ರಹಿಸಿ ಅಳಿಸುತ್ತವೆ. ಬಹುತೇಕ ಬಾರಿ ನಾವು ಈ ಕುಕೀ ಸಂಗ್ರಹದ ಬಗ್ಗೆ ಇರುವ ವಿವರಗಳನ್ನು ಓದದೆ 'ಓಕೆ' ಒತ್ತಿರುತ್ತೇವೆ.

2018ರವರೆಗೂ ಈ ಕುಕೀ ಸಂಗ್ರಹದ ಮೇಲೆ ಬ್ರೌಸ್ ಮಾಡುವವರಿಗೆ ಯಾವ ನಿಯಂತ್ರಣವೂ ಇರಲಿಲ್ಲ. 2018ರಲ್ಲಿ ಯುರೋಪ್‌ನಲ್ಲಿ ಜಾರಿಗೆ ಬಂದ ಜಿಡಿಪಿಆರ್ ಕಾಯ್ದೆಯಿಂದಾಗಿ ಬ್ರೌಸ್ ಮಾಡುವವರನ್ನು ಕೇಳಿಯೇ ಕುಕೀಗಳನ್ನು ಸಂಗ್ರಹಿಸುವ ಅನಿವಾರ್ಯತೆ ವೆಬ್‌ಸೈಟ್‌ಗಳು, ಬ್ರೌಸರ್‌ಗಳಿಗೆ ಉಂಟಾಯಿತು. ಆದರೆ, ಅದಾದ ನಂತರ ಮಾರ್ಕೆಟಿಂಗ್ ಕಂಪನಿಗಳು ಇನ್ನಷ್ಟು ಚುರುಕಾದವು. ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಇತರ ತಂತ್ರಜ್ಞಾನಗಳನ್ನು ಬಳಸಿಕೊಂಡು ಹೆಚ್ಚು ದಕ್ಷವಾಗಿ ಕುಕೀಗಳನ್ನು ದುಡಿಸಿಕೊಂಡವು. ಆದರೆ, ಈಗ ಇನ್ನೆರಡು ವರ್ಷಗಳಲ್ಲಿ ಈ ಪರ್ಮನೆಂಟ್ ಕುಕೀಗಳನ್ನು ತೆಗೆದುಹಾಕುವುದಕ್ಕೆ ಬ್ರೌಸರ್‌ಗಳು ನಿರ್ಧಾರ ಮಾಡಿವೆ. ಈಗಾಗಲೇ ಕೆಲವು ಬ್ರೌಸರ್‌ನಲ್ಲಿ ಈ ಪರ್ಮನೆಂಟ್ ಕುಕೀಗಳನ್ನು ಸಂಗ್ರಹಿಸುತ್ತಿಲ್ಲ.

ಹಾಗೆಂದ ಮಾತ್ರಕ್ಕೆ ನಮಗೆ ಜಾಹೀರಾತು ತೋರಿಸುವವರು ಕೈಕಟ್ಟಿ ಕುಳಿತುಕೊಳ್ಳುತ್ತಾರೆ ಎಂದೇನಲ್ಲ. ನಮಗೆ ಜಾಹೀರಾತು ತೋರಿಸುವುದಕ್ಕೆ ಹೊಸ ಹೊಸ ವಿಧಾನಗಳನ್ನು ಹುಡುಕುವುದಕ್ಕೆ ಅನುಕೂಲವಾಗಲಿ ಎಂದೇ ಬ್ರೌಸರ್‌ಗಳು ಈ ಪರ್ಮನೆಂಟ್ ಕುಕೀಗಳಿಗೆ ವಿದಾಯ ಹೇಳುವ ದಿನಾಂಕವನ್ನು ಕಳೆದೆರಡು ವರ್ಷಗಳಿಂದ ಮುಂದೂಡುತ್ತ ಬಂದಿವೆ.

ಡಿಜಿಟಲ್ ಅಡುಗೆಮನೆ



ಎಲೆಕ್ಟ್ರಿಕ್ ಬರ್ನರ್

ಪೃಥ್ವಿರಾಜ್

ಅಡುಗೆಮನೆಯ ಕೆಲಸ ಎಂದರೆ ಕೇವಲ ಅಡುಗೆಯ ಕೆಲಸವಷ್ಟೆ ಅಲ್ಲ; ಸ್ವಚ್ಛತೆಯಂಥ ಹಲವು ಇತರ ಕೆಲಸಗಳೂ ಇರುತ್ತವೆ. ತಂತ್ರಜ್ಞಾನ ಈಗ ಒಟ್ಟು ಅಡುಗೆಮನೆಯ ಕೆಲಸವನ್ನು ಸುಲಭ ಮಾಡುತ್ತಿದೆ. ಅಡುಗೆಮನೆಯಲ್ಲಿ ಬಳಕೆಯಾಗುವ ವಿವಿಧ ಬಗೆಯ ಉಪಕರಣಗಳಿಗೆ ಈಗ ಸ್ಮಾರ್ಟ್ -ಡಿಜಿಟಲ್ ತಂತ್ರಜ್ಞಾನದ ಸ್ಪರ್ಶ ಸಿಗುತ್ತಿದೆ. ಈ ತಂತ್ರಜ್ಞಾನವು ಸುರಕ್ಷಿತ ಹಾಗೂ ಅಡುಗೆಕೆಲಸವನ್ನು ಸುಲಭವನ್ನಾಗಿಯೂ ಮಾಡುತ್ತಿದೆ. ಇತ್ತೀಚೆಗೆ ಮಾರುಕಟ್ಟೆಗೆ ಬಂದಿರುವ ಅಂತಹ ಕೆಲವು ಡಿಜಿಟಲ್ ಸ್ಮಾರ್ಟ್ ಉಪಕರಣಗಳು ಕೆಲವು ಇಲ್ಲಿವೆ.

ಟಾಪ್‌ಲೋಡ್ ಫ್ರೈಯರ್: ವಿವಿಧ ಬಗೆಯ ಖಾದ್ಯಗಳ ತಯಾರಿಗೆ ನೆರವಾಗಲೆಂದು ಡಿಜಿಟಲ್ ತಂತ್ರಜ್ಞಾನವನ್ನು ಆಧರಿಸಿ 'ಟಾಪ್‌ಲೋಡ್ ಫ್ರೈಯರ್' ಹೆಸರಿನ ವಿಶೇಷ ಉಪಕರಣ ಮಾರುಕಟ್ಟೆಯಲ್ಲಿ ಲಭ್ಯವಿದೆ. ಈವರೆಗೆ ಬಳಕೆಯಲ್ಲಿದ್ದ ಹಾಗೂ ಹಲವರಿಗೆ ಪರಿಚಯವಿರುವ 'ಫ್ರಂಟ್‌ಲೋಡ್ ಫ್ರೈಯರ್'ಗಳಿಗೆ ಹೋಲಿಸಿದರೆ ಇದು ಸುಧಾರಿತ ಉಪಕರಣ. ಇದರಿಂದ ತಿನಿಸುಗಳನ್ನು ವಿವಿಧ ರೀತಿಯಲ್ಲಿ ತಯಾರಿಸಿಕೊಳ್ಳಲು ಸಾಧ್ಯ. ಇದಕ್ಕಾಗಿಯೇ ಇದರಲ್ಲಿ ಬೇಕಿಂಗ್, ಗ್ರಿಲ್ಲಿಂಗ್, ರೋಸ್ಟಿಂಗ್, ಡೀ ಫ್ರೈಯಿಂಗ್‌ನಂತಹ ಹಲವು ಆಯ್ಕೆಗಳಿವೆ. ಆರು ಲೀಟರ್ ಸಾಮರ್ಥ್ಯದ ಈ ಉಪಕರಣದಲ್ಲಿ ಉದ್ದಿನ ವಡೆ, ಮುರುಕು, ಸಂಡಿಗೆಯಂತಹ ವಿವಿಧ ಬಗೆಯ ತಿಂಡಿಗಳನ್ನು ಸುಲಭವಾಗಿ ತಯಾರಿಸಿಕೊಳ್ಳಬಹುದು. ಇಂತಿಷ್ಟೇ ಉಷ್ಣಾಂಶದಲ್ಲಿ ಖಾದ್ಯಗಳನ್ನು ತಯಾರಿಸಿಕೊಳ್ಳಲು ಸಾಧ್ಯವಾಗುವಂತೆ ಈ ಉಪಕರಣವನ್ನು ತಯಾರಿಸಲಾಗಿದೆ. ಇದರ ಮತ್ತೊಂದು ಉಪಯೋಗವೆಂದರೆ ಕಡಿಮೆ ಎಣ್ಣೆ ಬಳಸಿ ಆಹಾರಪದಾರ್ಥಗಳನ್ನು ತಯಾರಿಸಿಕೊಳ್ಳಬಹುದು. ಇದರೊಂದಿಗೆ ಗ್ರಿಲ್ ಬಾಸ್ಕೆಟ್, ಪ್ಲೇಟ್ ಕೂಡ ಇರುವುದರಿಂಧ ಆಹಾರಪದಾರ್ಥಕ್ಕೆ ತಕ್ಕಂತೆ ಇದನ್ನು ಉಪಯೋಗಿಸಿಕೊಳ್ಳಬಹುದು. ಆನ್‌ಲೈನ್ ಮೂಲಕ ಈ ಉಪಕರಣವನ್ನು ಖರೀದಿಸಬಹುದು.

ಸೂಪ್ ಮೇಕರ್: ದೇಹಕ್ಕೆ ಬೇಕಾಗುವ ಉತ್ತಮ ಪೋಷಕಾಂಶಗಳಿಗೆ ಸೂಪ್‌ಗಳ ಸೇವನೆ ಉತ್ತಮ ಎಂದು ಹಲವು ತಜ್ಞರ ಸಲಹೆ ನೀಡುತ್ತಾರೆ. ರುಚಿಯ ಜೊತೆಗೆ ಆರೋಗ್ಯವನ್ನೂ ಒಟ್ಟಾಗಿ ಪಡೆಯಲು ಸೂಪ್‌ಗಳನ್ನು ಸೇವಿಸಬಹುದು. ಹೀಗೆ ಸೂಪ್‌ಗಳನ್ನು ಇಷ್ಟಪಡುವವರು ಹಲವು ಬಗೆಯ ಸೂಪ್‌ಗಳನ್ನು ತಯಾರಿಸಿಕೊಳ್ಳಲು ಉಪಯೋಗವಾಗುವಂತೆ ತಯಾರಿಸಿರುವ ವಿಶೇಷ ಉಪಕರಣವೇ 'ಸೂಪ್ ಮೇಕರ್'. ಈ ಉಪಕರಣ ಆಟೊಮೆಟಿಕ್ ಬ್ಲೆಂಡಿಂಗ್, ಹೀಟಿಂಗ್ ವಿಧಾನಗಳನ್ನು ಹೊಂದಿದೆ; ಆರು ಪ್ರಿ ಟೆಸ್ಟಿಂಗ್ ಮಾಡೆಲ್ಸ್ ಕೂಡ ಇವೆ. ಇದರಲ್ಲಿ ಸ್ಟೈನ್‌ಲೆಸ್ ಸ್ಟೀಲ್ ಬ್ಲೇಡ್‌ಗಳನ್ನು ಅಳವಡಿಸಲಾಗಿದ್ದು, ಇದು ತರಕಾರಿಗಳನ್ನು ಸೂಕ್ಷ್ಮವಾಗಿ ಕತ್ತರಿಸಲು ನೆರವಾಗುತ್ತವೆ. ಕೇವಲ 25 ನಿಮಿಷಗಳ ಅವಧಿಯಲ್ಲಿ ಸೂಪ್ ತಯಾರಾಗುತ್ತದೆ. ಮಗ್ ಮಾದರಿ ಆಕಾರದಲ್ಲಿದ್ದು, ಹಿಡಿಕೆಯೂ ಇರುವುದರಿಂದ ಬಳಕೆ ಸುಲಭ. ಮುಚ್ಚಳದ ಮೇಲಿನ ಹಿಡಿಕೆಯೂ ಸುಲಭ ಬಳಕೆಗೆ ನೆರವಾಗುತ್ತದೆ. ಇದು ಡಿಜಿಟಲ್ ಉಪಕರಣವಾಗಿರುವುದಿಂದ ಬಳಕೆಗೆ ವಿವಿಧ ಬಗೆಯ ಆಯ್ಕೆಗಳಿವೆ. ಸೂಪ್ ಮೇಕರ್‌ನಿಂದ ಸೂಪ್‌ಗಳ ತಯಾರಿಕೆ ಈಗ ಸುಲಭ.

ಎಲೆಕ್ಟ್ರಿಕ್ ಬರ್ನರ್: ಅಡುಗೆ ತಯಾರಿಗೆ ನೆರವಾಗಲು ಈಗ ಮಾರುಕಟ್ಟೆಗೆ ಬಂದಿರುವ ಮುಖ್ಯವಾದ ಉಪಕರಣಗಳಲ್ಲಿ ಈ 'ಎಲೆಕ್ಟ್ರಿಕ್ ಬರ್ನರ್' ಕೂಡ ಒಂದು. ಇದರಲ್ಲಿ ಸುಧಾರಿತ ತಂತ್ರಜ್ಞಾನದ ಬಳಕೆ ಆಗಿರುವುದರಿಂದ ಸುರಕ್ಷಿತವೂ ಅಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಲಭ್ಯವಿರುವ ವಿವಿಧ ಬಗೆಯ ಸಾಧಾರಣ 'ಹಾಟ್‌ಪ್ಲೇಟ್ ಬರ್ನರ್'ಗಳಿಗೆ ಹೋಲಿಸಿದರೆ ಇದರಲ್ಲಿನ ತಂತ್ರಜ್ಞಾನ ವಿಭಿನ್ನವಾಗಿದೆ. 'ಫಾರ್ ಇನ್‌ಫ್ರಾರೆಡ್ ಅಸೆಂಬ್ಲಿಂಗ್' ತಂತ್ರಜ್ಞಾನದ ನೆರವಿನೊಂದಿಗೆ ಇದು ಕೆಲಸ ಮಾಡುತ್ತದೆ. ಹೀಗಾಗಿ ಹೆಚ್ಚು ಉಷ್ಣಾಂಶವನ್ನು ತಡೆದುಕೊಳ್ಳುವ ಶಕ್ತಿ ಇದಕ್ಕಿದೆ. ಇದರ ವಿಶೇಷವೆಂದರೆ ಐರನ್ ಪಾನ್, ಸ್ಟೈನ್‌ಲೆಸ್ ಸ್ಟೀಲ್, ಸಿರಾಮಿಕ್, ಅಲ್ಯೂಮಿನಿಯಂ ಬಗೆಯ ಪಾತ್ರೆಗಳನ್ನು ಇದರಲ್ಲಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ತಯಾರಿಸಲಾಗಿದೆ. ಇದರ ತೂಕವೂ ಕಡಿಮೆ ಇರುವುದರಿಂದ ಬೇಕೆಂದ ಕಡೆಗೆ ಸುಲಭವಾಗಿ ಕೊಂಡೊಯ್ಯಬಹುದು. ಆಕಾರದಲ್ಲಿ ಸಣ್ಣಗಾತ್ರದ್ದಾಗಿರುವುದರಿಂದ ಅಡುಗೆಮನೆಯಲ್ಲಿ ಹೆಚ್ಚಿನ ಜಾಗವನ್ನೂ ಆಕ್ರಮಿಸುವುದಿಲ್ಲ. ಅಡುಗೆ ತಯಾರಿಗೆ ಪಾತ್ರೆಗಳನ್ನಿಡುವ 'ಕ್ರಿಸ್ಟಲ್ ಗ್ಲಾಸ್ ಪೇಟ್' ಅನ್ನು ತೇವದ ಬಟ್ಟೆಯಿಂದ ಒರೆಸಿ ಸುಲಭವಾಗಿ ಶುದ್ಧಿ ಮಾಡಿಕೊಳ್ಳಬಹುದು. ವಿವಿಧ ಬಗೆಯ ಹೀಟ್ ಸೆಟ್ಟಿಂಗ್ ಆಯ್ಕೆಗಳು ಇರುವುದರಿಂದ ಡೀ ಫ್ರೈ, ಬಾಯಿಲಿಂಗ್, ಕುಕ್ಕಿಂಗ್ – ಹೀಗೆ ವಿವಿಧ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ತಯಾರಿಸಿಕೊಳ್ಳಲು ನೆರವಾಗುತ್ತದೆ. ಇದೇ ತಂತ್ರಜ್ಞಾನದೊಂದಿಗೆ ಎರಡು ಬರ್ನರ್‌ಗಳು ಇರುವ ಸ್ಟವ್‌ಗಳೂ ಲಭ್ಯವಿವೆ.

ಟಾಪ್‌ಲೋಡ್ ಫ್ರೈಯರ್





ಸೂಪ್ ಮೇಕರ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

29) ಸಸ್ಯಗಳಲ್ಲಿ ಸಾಗಾಣಿಕೆಗಳ ಬಗ್ಗೆ ಬರೆಯಿರಿ


ಉತ್ತರ:– ಸಸ್ಯಗಳ ದೇಹ ನಿರ್ಮಾಣಕ್ಕೆ ಅಗತ್ಯವಾದ ಇತರ ಕಚ್ಚಾವಸ್ತುಗಳನ್ನೂ ಕೂಡಾ ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸಸ್ಯಗಳಿಗೆ ಮಣ್ಣು, ನೈಟ್ರೋಜನ್, ಫಾಸ್ಫರಸ್ ಮತ್ತು ಇತರ ಖನಿಜಗಳಂಥ ಕಚ್ಚಾವಸ್ತುಗಳ ಹತ್ತಿರದ ಮತ್ತು ಶ್ರೀಮಂತ ಆಕರವಾಗಿದೆ. ಆದ್ದರಿಂದ, ಈ ವಸ್ತುಗಳ ಹೀರುವಿಕೆಯು ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಭಾಗವಾದ ಬೇರಿನ ಮೂಲಕ ನಡೆಯುತ್ತದೆ. ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಅಂಗಗಳು ಮತ್ತು ಕ್ಲೋರೋಫಿಲ್ ಹೊಂದಿರುವ ಅಂಗಗಳ ನಡುವಿನ ಅಂತರವು ಕಡಿಮೆ ಇದ್ದರೆ ಶಕ್ತಿ ಮತ್ತು ಕಚ್ಚಾವಸ್ತುಗಳು ಸಸ್ಯದೇಹದ ಎಲ್ಲಾ ಭಾಗಗಳಿಗೆ ಸುಲಭವಾಗಿ ವಿಸರಣೆಗೊಳ್ಳುತ್ತವೆ. ಆದರೆ ಸಸ್ಯದೇಹದ ವಿನ್ಯಾಸದಲ್ಲಿನ ಬದಲಾವಣೆಯಿಂದಾಗಿ ಈ ಅಂತರವು ಹೆಚ್ಚಾದರೆ ಎಲೆಗಳಿಗೆ ಕಚ್ಚಾಪದಾರ್ಥಗಳನ್ನು ಮತ್ತು ಬೇರುಗಳಿಗೆ ಶಕ್ತಿಯನ್ನು ಒದಗಿಸಲು ವಿಸರಣ ಪ್ರಕ್ರಿಯೆಯು ಸಾಲುವುದಿಲ್ಲ. ಆದ್ದರಿಂದ, ಇಂತಹ ಸಂದರ್ಭಗಳಲ್ಲಿ ಒಂದು ಸಮರ್ಪಕ ಸಾಗಾಣಿಕಾ ವ್ಯವಸ್ಥೆಯು ಅಗತ್ಯವಾಗುತ್ತದೆ. ವಿಭಿನ್ನ ದೇಹವಿನ್ಯಾಸಗಳ ನಡುವೆ ಶಕ್ತಿ ಅವಶ್ಯಕತೆಯು ಭಿನ್ನವಾಗಿರುತ್ತದೆ. ಸಸ್ಯಗಳು ಚಲಿಸುವುದಿಲ್ಲ ಮತ್ತು ಸಸ್ಯದೇಹವು ಅನೇಕ ಅಂಗಾಂಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿರ್ಜೀವ ಜೀವಕೋಶಗಳನ್ನು ಹೊಂದಿವೆ. ಇದರ ಪರಿಣಾಮವಾಗಿ ಸಸ್ಯಗಳ ಶಕ್ತಿ ಅವಶ್ಯಕತೆ ಕಡಿಮೆ ಮತ್ತು ಅವು ನಿಧಾನಗತಿಯ ಸಾಗಾಣಿಕಾ ವ್ಯವಸ್ಥೆಯನ್ನು ಬಳಸುತ್ತವೆ. ಆದರೆ ಅತ್ಯಂತ ಎತ್ತರದ ಮರಗಳಲ್ಲಿ ಸಾಗಾಣಿಕಾ ವ್ಯವಸ್ಥೆಯು ಮಾಡಬೇಕಾದ ಕೆಲಸವು ಅತಿ ಹೆಚ್ಚಿನದಾಗಿರುತ್ತದೆ. ಸಸ್ಯ ಸಾಗಾಣಿಕಾ ವ್ಯವಸ್ಥೆಗಳು ಸಂಗ್ರಾಹಕ ಶಕ್ತಿಯನ್ನು ಎಲೆಗಳಿಂದ ಮತ್ತು ಕಚ್ಚಾಪದಾರ್ಥಗಳನ್ನು ಬೇರುಗಳಿಂದ ಸಂಗ್ರಹಿಸುತ್ತವೆ. ಈ ಎರಡೂ ಮಾರ್ಗಗಳು ಸ್ವತಂತ್ರವಾಗಿ ಸಂಘಟಿಸಿದ ಸಾಗಾಣಿಕಾ ಕೊಳವೆಗಳಂತೆ ನಿರ್ಮಿಸಲ್ಪಟ್ಟಿವೆ. ಮೊದಲನೆಯದು ಕ್ಸೈಲಂ, ಮಣ್ಣಿನಿಂದ ಪಡೆದ ನೀರು ಮತ್ತು ಲವಣಗಳನ್ನು ಸಾಗಿಸುತ್ತದೆ. ಇನ್ನೊಂದು ಫ್ಲೋಯಂ, ಎಲೆಗಳಲ್ಲಿ ಸಂಶ್ಲೇಷಿಸಲ್ಪಟ್ಟ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳನ್ನು ಸಸ್ಯದ ಉಳಿದ ಭಾಗಗಳಿಗೆ ಸಾಗಿಸುತ್ತದೆ. ನೀರಿನ ಸಾಗಾಣಿಕೆ ಸಸ್ಯದ ಎಲ್ಲಾ ಭಾಗಗಳನ್ನು ತಲುಪುವ ನೀರು ಸಾಗಿಸುವ ಕಾಲುವೆಗಳ ನಿರಂತರ ವ್ಯವಸ್ಥೆಯನ್ನು ನಿರ್ಮಿಸಲು ಕ್ಸೈಲಂ ಅಂಗಾಂಶದಲ್ಲಿ ಬೇರು, ಕಾಂಡ ಮತ್ತು ಎಲೆಗಳ ನಳಿಕೆಗಳು ಮತ್ತು ಟ್ರೇಕಿಡ್‌ಗಳು ಪರಸ್ಪರ ಸಂಪರ್ಕ ಹೊಂದಿವೆ. ಬೇರುಗಳಲ್ಲಿ ಮಣ್ಣಿನ ಸಂಪರ್ಕದಲ್ಲಿರುವ ಜೀವಕೋಶಗಳು ಸಕ್ರಿಯವಾಗಿ ಅಯಾನುಗಳನ್ನು ಹೀರಿಕೊಳ್ಳುತ್ತವೆ. ಇದು ಬೇರು ಮತ್ತು ಮಣ್ಣಿನ ನಡುವೆ ಈ ಅಯಾನುಗಳ ಸಾರತೆಯಲ್ಲಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಈ ವ್ಯತ್ಯಾಸವನ್ನು ನಿವಾರಿಸಲು ಮಣ್ಣಿನಿಂದ ಬೇರುಗಳಿಗೆ ನೀರು ಚಲಿಸುತ್ತದೆ. ಅಲ್ಲಿ ಬೇರುಗಳ ಕ್ಸೈಲಂನೊಳಕ್ಕೆ ನೀರಿನ ಸ್ಥಿರವಾದ ಚಲನೆಯು ನೀರಿನ ಒಂದು ಸ್ತಂಭವನ್ನು ಉಂಟುಮಾಡಿ ಅದು ನೀರನ್ನು ನಿರಂತರವಾಗಿ ಮೇಲಕ್ಕೆ ತಳ್ಳುತ್ತಿರುತ್ತದೆ. ಆದರೂ, ಸಸ್ಯಗಳಲ್ಲಿ ನಾವು ನೋಡುವಂತೆ ಅತ್ಯಂತ ಎತ್ತರಕ್ಕೆ ನೀರನ್ನು ಚಲಿಸುವಂತೆ ಮಾಡಲು ಈ ಒತ್ತಡವೊಂದಕ್ಕೇ ಆಗುವುದಿಲ್ಲ. ಕ್ಸೈಲಂನೊಳಗಿನ ನೀರನ್ನು ಸಸ್ಯದೇಹದ ಅತ್ಯಂತ ಎತ್ತರದ ಭಾಗಗಳಿಗೆ ಮೇಲಕ್ಕೆ ಹರಿಸಲು ಸಸ್ಯಗಳು ಇನ್ನೊಂದು ತಂತ್ರವನ್ನು ಬಳಸುತ್ತವೆ.

ಸಸ್ಯವು ಸಾಕಷ್ಟು ನೀರಿನ ಪೂರೈಕೆಯನ್ನು ಹೊಂದಿದ್ದರೆ ಪತ್ರರಂಧ್ರಗಳ ಮೂಲಕ ನಷ್ಟವಾದ ನೀರು ಎಲೆಗಳಲ್ಲಿನ ಕ್ಸೈಲಂ ನಳಿಕೆಗಳ ಮೂಲಕ ಮರುಪೂರೈಕೆಯಾಗುತ್ತದೆ. ವಾಸ್ತವವಾಗಿ ಎಲೆಗಳ ಜೀವಕೋಶದಿಂದ ಆವಿಯಾಗುವ ನೀರಿನ ಅಣುಗಳು ಚೋಷಣ (suction)ವನ್ನು ಉಂಟುಮಾಡುತ್ತದೆ ಇದು ಬೇರುಗಳ ಕ್ಸೈಲಂಕೋಶಗಳಿಂದ ನೀರನ್ನು ಎಳೆದುಕೊಳ್ಳುತ್ತದೆ. ಗಾಳಿಗೆ ತೆರೆದ ಸಸ್ಯದ ಭಾಗಗಳಿಂದ ಆವಿಯ ರೂಪದಲ್ಲಿ ನೀರು ನಷ್ಟವಾಗುವುದನ್ನು ಬಾಷ್ಪವಿಸರ್ಜನೆ ಎನ್ನುವರು. ಹೀಗೆ ಬಾಷ್ಪವಿಸರ್ಜನೆಯು ಬೇರಿನಿಂದ ಎಲೆಗಳಿಗೆ ನೀರು ಮತ್ತು ಅದರಲ್ಲಿ ಕರಗಿರುವ ಲವಣಗಳ ಹೀರುವಿಕೆ ಮತ್ತು ಮೇಲ್ಮುಖ ಚಲನೆಗೆ ಸಹಾಯಮಾಡುತ್ತದೆ. ತಾಪದ ನಿಯಂತ್ರಣದಲ್ಲೂ ಇದು ನೆರವಾಗುತ್ತದೆ. ನೀರಿನ ಸಾಗಾಣಿಕೆಯಲ್ಲಿ ಬೇರಿನ ಒತ್ತಡದ ಪರಿಣಾಮವು ರಾತ್ರಿಯ ಸಮಯದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಬೆಳಗಿನ ಸಮಯದಲ್ಲಿ ಪತ್ರರಂಧ್ರಗಳು ತೆರೆದಿದ್ದಾಗ ಬಾಷ್ಪವಿಸರ್ಜನೆಯ ಸೆಳೆತವು ಕ್ಸೈಲಮ್‌ನಲ್ಲಿ ನೀರಿನ ಚಲನೆಗೆ ಪ್ರಮುಖ ಚಾಲಕ ಶಕ್ತಿಯಾಗುತ್ತದೆ.

ಎಲೆಗಳಿಂದ ಸಸ್ಯದ ಉಳಿದ ಭಾಗಗಳಿಗೆ ಚಯಾಪಚಯ ಕ್ರಿಯೆಗಳ, ವಿಶೇಷವಾಗಿ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳು ಸಾಗಾಣಿಕೆಯಾಗುತ್ತವೆ ವಿಲೀನಗೊಳ್ಳಬಲ್ಲ ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಸಾಗಾಣಿಕೆಯನ್ನು ವಸ್ತುಸ್ಥಾನಾಂತರಣ (translocation) ಎಂದು ಕರೆಯುತ್ತಾರೆ ಮತ್ತು ಇದು ವಾಹಕ ಅಂಗಾಂಶದ ಫ್ಲೋಯಂ ಭಾಗದಲ್ಲಿ ಜರುಗುತ್ತದೆ. ದ್ಯುತಿಸಂಶ್ಲೇಷಣೆಯ ಉತ್ಪನ್ನಗಳ ಜೊತೆಗೆ ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಫ್ಲೋಯಂ ಸಾಗಿಸುತ್ತದೆ. ಈ ವಸ್ತುಗಳು ವಿಶೇಷವಾಗಿ ಬೇರುಗಳು, ಹಣ್ಣುಗಳು ಮತ್ತು ಬೀಜಗಳಂಥ ಸಂಗ್ರಹಣಾ ಅಂಗಗಳಿಗೆ ಮತ್ತು ಬೆಳೆಯುತ್ತಿರುವ ಅಂಗಗಳಿಗೆ ಪೂರೈಸಲ್ಪಡುತ್ತವೆ. ಆಹಾರ ಮತ್ತು ಇತರ ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ಮೇಲ್ಮುಖ ಹಾಗೂ ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ. ಸರಳ ಭೌತಬಲಗಳಿಂದ ವ್ಯಾಪಕವಾಗಿ ವಿವರಿಸಲ್ಪಟ್ಟ ಕ್ಸೈಲಂನಲ್ಲಿನ ಸಾಗಾಣಿಕೆಗೆ ಹೋಲಿಸಿದರೆ, ಫ್ಲೋಯಂನಲ್ಲಿ ಶಕ್ತಿಯನ್ನು ಬಳಸಿಕೊಂಡು ವಸ್ತುಗಳ ಸ್ಥಾನಾಂತರಣವನ್ನು ಸಾಧಿಸಲಾಗುತ್ತದೆ. ಎಟಿಪಿ ಯಿಂದ ಶಕ್ತಿಯನ್ನು ಬಳಸಿಕೊಂಡು ಸುಕ್ರೋಸ್‌ನಂತಹ ವಸ್ತುವನ್ನು ಫ್ಲೋಯಂ ಅಂಗಾಂಶಕ್ಕೆ ವರ್ಗಾಯಿಸಲಾಗುತ್ತದೆ. ಇದು ಅಂಗಾಂಶದ ಅಭಿಸರಣ ಒತ್ತಡವನ್ನು (osmotic pressure) ಹೆಚ್ಚಿಸಿ ನೀರು ಅದರೊಳಗೆ ಪ್ರವೇಶಿಸಲು ಕಾರಣವಾಗುತ್ತದೆ. ಈ ಒತ್ತಡವು ಫ್ಲೋಯಂನಿಂದ ವಸ್ತುಗಳು ಕಡಿಮೆ ಒತ್ತಡವಿರುವ ಅಂಗಾಂಶಗಳಿಗೆ ಚಲಿಸುವಂತೆ ಮಾಡುತ್ತದೆ. ಇದು ಸಸ್ಯದ ಅವಶ್ಯಕತೆಗೆ ಅನುಗುಣವಾಗಿ ವಸ್ತುಗಳನ್ನು ಸಾಗಿಸಲು ಫ್ಲೋಯಂಗೆ ಅನುವುಮಾಡಿಕೊಡುತ್ತದೆ. ಉದಾಹರಣೆಗೆ, ಬೇಸಿಗೆ ಕಾಲದಲ್ಲಿ ಮೊಗ್ಗುಗಳು ಬೆಳವಣಿಗೆಯಾಗಲು ಶಕ್ತಿಯ ಅಗತ್ಯವಿರುವುದರಿಂದ ಬೇರು ಅಥವಾ ಕಾಂಡದ ಅಂಗಾಂಶಗಳಲ್ಲಿ ಸಂಗ್ರಹವಾಗಿರುವ ಶರ್ಕರ ಪದಾರ್ಥಗಳು ಮೊಗ್ಗುಗಳಿಗೆ ಸಾಗಿಸಲ್ಪಡುತ್ತವೆ.

30) ಮನುಷ್ಯರ ವಿಸರ್ಜನಾಂಗವ್ಯೂಹದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–





ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

Chapter – 1

ELECTRIC CHARGES AND FIELDS

Problem:-

1. Find the surface charge density of a plane sheet of finite thickness having an electric field of 300 Vm^{-1} acting downwards near the surface of the sheet.

Soln:- (.......Contd)

$$E=\frac{\sigma}{2\epsilon_0}$$

Therefore, electric fields due to plates A and B are given by

$$E_1=\frac{\sigma_1}{2\epsilon_0} \text{ and } E_2=\frac{\sigma_2}{2\epsilon_0}$$

In region I (to the left side of plate A), the net electric field is given by

$$E_I=-E_1-E_2=-\frac{\sigma_1}{2\epsilon_0}-\frac{\sigma_2}{2\epsilon_0}$$

$$\text{i.e., } E_I=-\frac{1}{2\epsilon_0}(\sigma_1+\sigma_2) \quad \text{.............(i)}$$

In region II (between two plates), the net electric field is given by

$$E_{II}=E_1-E_2=\frac{\sigma_1}{2\epsilon_0}-\frac{\sigma_2}{2\epsilon_0}$$

$$\text{i.e., } E_{II}=\frac{1}{2\epsilon_0}(\sigma_1-\sigma_2) \text{.........(ii)}$$

In region III (to the right side of plate B), the net electric field is given by

$$E_{III}=E_1+E_2=\frac{\sigma_1}{2\epsilon_0}+\frac{\sigma_2}{2\epsilon_0}$$

$$\text{i.e., } E_{III}=\frac{1}{2\epsilon_0}(\sigma_1+\sigma_2) \quad \text{..............(iii)}$$


Note -1:

If plate A is positively charged and B is equally negatively charged i.e., $\sigma_1 = +\sigma$ and $\sigma_2 = -\sigma$ then

$$E_I=-\frac{1}{2\epsilon_0}(\sigma-\sigma)=0,$$

$$E_{II}=\frac{1}{2\epsilon_0}(\sigma-(-\sigma))=\frac{2\sigma}{2\epsilon_0}=\frac{\sigma}{\epsilon_0}$$

$$\text{and } E_{III}=\frac{1}{2\epsilon_0}(\sigma-\sigma)=0.$$




Thus, electric field between the two equally and oppositely charged plates is constant and given by,

$$E=\frac{\sigma}{2\epsilon_0}$$

Practically, uniform electric field is produced in the space between two equally and oppositely charged plates placed very close to each other.

Electric Field Intensity due to a uniformly charged thin spherical shell (hollow sphere)

a) At a point outside the shell



Consider a positive charge q distributed uniformly on the surface of a spherical shell of radius R.

Let P be a point outside the shell at a distance r from the centre of the shell (r > R), where electric field is to be calculated. Draw a Gaussian surface in the form of a sphere of radius r with O as the centre.

According to Gauss' theorem,

$$\oint_S \vec{E}.d\vec{S}=\frac{q}{\epsilon_0}$$

$$\text{(or) } \oint_S E\, dS\cos\theta=\frac{q}{\epsilon_0} \quad \text{.........(i)}$$

Since $\vec{E}$ & $d\vec{S}$ are directed along the same direction, so $\theta = 0^0$

$$\therefore \oint_S E\, dS\cos 0^0=\frac{q}{\epsilon_0} \text{ (or) } \oint_S E\, dS=\frac{q}{\epsilon_0}.$$

Since E at all points on the Gaussian surface is same and directed radially outwards,

$$\therefore E\oint_S dS=\frac{q}{\epsilon_0}$$

But $\oint_S dS$ surface area of the Gaussian surface (which is spherical) $=4\pi r^2$

$$\therefore E \times 4\pi r^2=\frac{q}{\epsilon_0} \Rightarrow E=\frac{1}{4\pi\epsilon_0}\frac{q}{r^2}$$

which is the electric field due to a point charge q at a distance r.


In vector form, $\vec{E}=\frac{q}{4\pi\epsilon_0 r^2}\hat{r}$

Hence the electric field due to a uniformly charged thin spherical shell at a point outside the shell is such as if the whole charge were concentrated at the centre of the shell.

Electric Field Intensity due to a uniformly charged thin spherical shell (hollow sphere)

(b) At a point on the surface of the shell

When point of P is at the surface of the shell, then r = R.



We already know that the electric field due to a point charge q at a distance r.

$$E=\frac{1}{4\pi\epsilon_0}\frac{q}{r^2}$$

When r = R, the radius of the hollow spherical sphere the above eqn becomes

$$E=\frac{1}{4\pi\epsilon_0}\frac{q}{R^2} \quad \text{...........(i)}$$

(Contd.......)

'ಚುನಾವಣೆ ದೊಡ್ಡವರದು, ಮತ ನಮ್ಮದು'



ಜಯಸಿಂಹ ಆರ್.

ಉದಯಪುರ: 'ಚುನಾವಣೆ ದೊಡ್ಡವರ (ಬಡೇ ಲೋಗ್) ವಿಷಯ. ಆ ಬಗ್ಗೆ ನಾವು ಮಾತನಾಡುವುದೇ ಇಲ್ಲ. ಮತಹಾಕುವುದಷ್ಟೇ ನಮ್ಮ ಕೆಲಸ. ಮತದಾನದ ದಿನ ಊರಿಗೆ ಹೋಗಿ ಮತ ಹಾಕುತ್ತೇನೆ. ಅಲ್ಲಿಗೆ ಮುಗಿಯಿತು' ಎನ್ನುತ್ತಾರೆ ಕೂಲಿ ಕಾರ್ಮಿಕ ನಾರಾಯಣ್. ಮತ್ತೂ ಮಾತಿಗೆಳೆದಾಗ, 'ನೋಡಿ ಕೆಲಸ ಮಾಡಿದವರಿಗೆ ಮತ ಹಾಕುತ್ತೇವೆ' ಎಂದು ಸಣ್ಣದನಿಯಲ್ಲಿ ಹೇಳುತ್ತಾ ಮಾತು ಮುಗಿಸಿದರು.

ಉದಯಪುರದ ನಟ್ಟನಡುವೆ ಇರುವ ಹಥೀಪೋಲ್ ವೃತ್ತದಲ್ಲಿ ನಾರಾಯಣ್ ಅವರಂತಹ ನೂರಾರು ಕೂಲಿಕಾರ್ಮಿಕರು ನಿಂತಿರುತ್ತಾರೆ. ಹೀಗೆ ನಿಂತಿದ್ದವರನ್ನು ಮಾತಿಗೆ ಎಳೆದಾಗ ಬಹುತೇಕ ಮಂದಿ ಹೇಳಿದ್ದು, 'ಚುನಾವಣೆ ದೊಡ್ಡವರ ವಿಷಯ'. ಈ ದೊಡ್ಡವರು ಎಂದರೆ ಪ್ರಬಲ ಜಾತಿ ಸಮುದಾಯದ ಜನರು ಎಂದೇ ಅರ್ಥ. ರಜಪೂತರು, ರಾಜಪುರೋಹಿತರು, ಜಾಟರು, ಗುಜ್ಜಾರರು, ಯಾದವರು, ಮುಸ್ಲಿಮರು... ಈ ದೊಡ್ಡವರ ಪಟ್ಟಿಯಲ್ಲಿ ಬರುವ ಸಮುದಾಯಗಳು.

ರಾಜಸ್ಥಾನದ 200 ಕ್ಷೇತ್ರಗಳ ಪೈಕಿ 142ರಲ್ಲಿ ಈ 'ದೊಡ್ಡವರೇ' ಅಭ್ಯರ್ಥಿಗಳು. ಆದರೆ ಈ ಎಲ್ಲಾ ಕ್ಷೇತ್ರಗಳಲ್ಲೂ ಪರಿಶಿಷ್ಟ ಜಾತಿ ಸಮುದಾಯದ ಮತದಾರರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಉದಯಪುರದಲ್ಲಿ ಬೀಡಾಡಿಯಾ ಪರಿಶಿಷ್ಟರದ್ದೇ ಪ್ರಾಬಲ್ಯವಿರುವ ಒಂದು ಊರು. 'ನಮ್ಮೂರಿನಲ್ಲಿ 4,000 ಜನ ಇದ್ದೇವೆ. ಅದರಲ್ಲಿ ಅರ್ಧದಷ್ಟು ಜನ ಸಣ್ಣ ಜಾತಿಯವರು (ಛೋಟಾ ಜಾತ್: ಪರಿಶಿಷ್ಟ ಜಾತಿಯ ಜನರನ್ನು ಸಣ್ಣಜಾತಿಯವರು ಎಂದೇ ಕರೆಯಲಾಗುತ್ತದೆ). ಈಗಿನ ಶಾಸಕ ವರ್ಷಕ್ಕೊಂದು ಬಾರಿ ಊರಿಗೆ ಬರುತ್ತಾರೆ. ಸಣ್ಣ ಜಾತಿಯವರನ್ನು ಮಾತನಾಡಿಸುವುದೂ ಇಲ್ಲ, ಮತ ಹಾಕಿ ಎಂದು ಕೇಳುವುದೂ ಇಲ್ಲ. ಈ ಬಾರಿ ಅವರಿಗೆ ಮತ ಹಾಕುವುದಿಲ್ಲ' ಎಂದು ಹೇಳಿದರು ಬೀಡಾಡಿಯಾದ ಗೋಪಾಲ್. ಅವರ ಪಕ್ಕದಲ್ಲೇ ಇದ್ದ ಗೋವಿಂದ, 'ನಾವು ಕಾದು ನಿಂತಿದ್ದರೂ ಶಾಸಕ ಕಾರಿನಿಂದ ಇಳಿಯುವುದೇ ಇಲ್ಲ. ನಮ್ಮತ್ತ ನೋಡುವುದೂ ಇಲ್ಲ. ನಾವು ಮತಹಾಕಿ ಶಾಸಕರ ಬದಲಿಸುತ್ತೇವೆ' ಎಂದು ಮಾತು ಸೇರಿಸಿದರು.

ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯ ನಡೆದ ಅತಿಹೆಚ್ಚು ಪ್ರಕರಣಗಳು ಹೆಚ್ಚು ವರದಿಯಾಗುವ ಎರಡನೇ ರಾಜ್ಯ ರಾಜಸ್ಥಾನ. ಬಿಜೆಪಿ ಸಹ, 'ಕಾಂಗ್ರೆಸ್ ಆಡಳಿತದಲ್ಲಿ ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ' ಎಂದು ಆರೋಪಿಸುತ್ತಿದೆ.

ಮೇವಾಡ ಪ್ರಾಂತದ ಮಧ್ಯಭಾಗದಲ್ಲಿರುವ ಪಾಲಿ ಜಿಲ್ಲೆಯಲ್ಲಿ ರಾಜಪುರೋಹಿತ ಸಮುದಾಯದ್ದೇ ಪ್ರಾಬಲ್ಯ. ಇಲ್ಲಿನ ಹಳ್ಳಿಗಳಲ್ಲಿ 'ರಾಜಪುರೋಹಿತಕಾ ತ್ಯಾರ್' ಎಂಬ ಫಲಕ ಹಾಕಿರಲಾಗುತ್ತದೆ. ಆ ಫಲಕಗಳಲ್ಲಿ ಸಮುದಾಯದ ಶಾಸಕರ ಹೆಸರನ್ನು ಹಾಕಿರಲಾಗುತ್ತದೆ. ಈಗ ನೀತಿ ಸಂಹಿತೆಯ ಭಾಗವಾಗಿ ಆ ಫಲಕಗಳನ್ನು ಮುಚ್ಚಲಾಗಿದೆ.

'ಸಣ್ಣಜಾತಿಯವರು ಬೈಕ್ ಓಡಿಸಿಕೊಂಡು ಊರಿನೊಳಗೆ ಪ್ರವೇಶಿಸುವಂತಿಲ್ಲ ಎಂದೂ ಆ ಬೋರ್ಡ್‌ನಲ್ಲಿ ಬರೆದಿದೆ. ಇದನ್ನಾ ನಮ್ಮ ಮೇಲೆ ನಡೆಯುವ ದೌರ್ಜನ್ಯ ಎಂದು ನಮಗೆ ಗೊತ್ತೇ ಇರಲಿಲ್ಲ. ಇಂತಹ ಫಲಕಗಳ ವಿರುದ್ಧ ದೂರು ನೀಡಿದ ನಂತರ, ನೂರಾರು ಫಲಕಗಳನ್ನು ಜಿಲ್ಲಾಡಳಿತ ತೆಗೆಸಿದ್ದಾರೆ. ದೌರ್ಜನ್ಯದ ಬಗ್ಗೆ ಅರಿವು ಮೂಡಿರುವುದರಿಂದ ಜನರೂ ದೂರು ನೀಡುತ್ತಿದ್ದಾರೆ. ತಮ್ಮ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂಬುದು ನಮ್ಮ ಜನರಿಗೆ ಗೊತ್ತೇ ಇಲ್ಲದ ಕಾರಣದಿಂದ ಚುನಾವಣೆಯಲ್ಲಿ ಇದು ವಿಷಯವೇ ಅಲ್ಲ. ನಮ್ಮ ಜನ ತಮಗೆ ಅನುಕೂಲ ಮಾಡಿಕೊಟ್ಟವರಿಗಷ್ಟೇ ಮತ ಹಾಕುತ್ತಾರೆ. ಹೀಗಾಗಿ ಇಲ್ಲಿನ ಶಾಸಕರು ಬದಲಾಗುತ್ತಲೇ ಇರುತ್ತಾರೆ. ಆದರೆ ಆ ಬಗ್ಗೆ ಜನರಿಗೆ ಅರಿವು ಮೂಡುವುದೇ ಇಲ್ಲ' ಎನ್ನುತ್ತಾರೆ ಸುಮೇರ್‌ಪುರದ ಕಟ್ಟಾರಾಮ್.

ಈ ಜನರು ಚುನಾವಣೆಯ ಬಗ್ಗೆ, ಚುನಾವಣೆಯಲ್ಲಿ ತಮ್ಮ ಆಯ್ಕೆಯ ಬಗ್ಗೆ ದೊಡ್ಡದಾಗಿ ಮಾತನಾಡುವುದೇ ಇಲ್ಲ. ಆ ಬಗ್ಗೆ ಹೇಳಲೇಬೇಕೆಂದರೆ ಕಿವಿಯ ಬಳಿ ಬಂದು ಪಿಸುದನಿಯಲ್ಲಿ ಹೇಳುತ್ತಾರೆ. ಅದೂ ಹೊಸ ತಲೆಮಾರಿನ ಯುವಕರು ಮಾತ್ರ. ಮೌಂಟ್ ಅಬು ತಪ್ಪಲಿನ ಪಂಚಾಯತಿಗಳಲ್ಲಿ ಇಂಥದ್ದೇ ಸ್ಥಿತಿ ಇದೆ.

ಪಿಂಡ್ವಾಡಾದ ಹೊರವಲಯದ ಹೆದ್ದಾರಿಯಲ್ಲಿ ಗ್ಯಾರೇಜ್ ನಡೆಸುವ ರೂಪೇಶ್ ಕುಮಾರ್, 'ನಮಗಂತೂ ಈ ಸರ್ಕಾರದಿಂದ ಅನುಕೂಲವಾಗಿದೆ. ನಾನಂತೂ ಕಾಂಗ್ರೆಸ್‌ಗೆ ಮತಹಾಕುತ್ತೇನೆ' ಎಂದು ಪಿಸುದನಿಯಲ್ಲಿ ಹೇಳಿದರು. ಪರಿಶಿಷ್ಟ ಜಾತಿಗಳಲ್ಲೇ ಅಂತರವಾದ ಮೇಘಾ ಸಮುದಾಯದ ರೂಪೇಶ್, ತಮ್ಮೂರಿನಲ್ಲಿರುವ ಏಕೈಕ ಬೈಕ್ ಮೆಕ್ಯಾನಿಕ್. ಪ್ರಬಲ ಜಾತಿಗಳ ಜನರು ಅವನ ಗ್ಯಾರೇಜ್‌ಗೆ ಬಂದರೂ ಹತ್ತುಮಾರು ದೂರದಲ್ಲೇ ಗಾಡಿ ನಿಲ್ಲಿಸುತ್ತಾರೆ. ರೂಪೇಶ್ ಹೋಗಿ ಗಾಡಿ ತಳ್ಳಿಕೊಂಡು ಬಂದು ರಿಪೇರಿ ಮಾಡಿಕೊಡಬೇಕು. ಇದನ್ನು ಅತಿ ಸಹಜ ಎಂಬಂತೆ ಮಾಡುತ್ತಿದ್ದ. ಚುನಾವಣೆಯ ವಿಷಯವನ್ನು ಕೆದಕಿದಾಗ ಅವರಿಗೆ ಕೇಳಿಸಿಬಿಡುತ್ತದೇನೋ ಎಂಬಂತೆ ಮೆಲುದನಿಯಲ್ಲಿ ಮಾತನಾಡುತ್ತಿದ್ದ.

'ಈ ಜನರ ಮೇಲಿನ ದೌರ್ಜನ್ಯದ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಯ ಸ್ಥಳೀಯ ನಾಯಕರು ಯಾರೂ ಮಾತನಾಡುವುದಿಲ್ಲ. ಏಕೆಂದರೆ ಅದನ್ನು ದೌರ್ಜನ್ಯ ಎಂದು ಯಾರೂ ಪರಿಗಣಿಸುತ್ತಲೇ ಇಲ್ಲ. ಅಂತಹ ಯಾಜಮಾನ್ಯ ಸ್ಥಿತಿ ಇಲ್ಲಿದೆ. ಅದನ್ನು ಎಲ್ಲರೂ ಒಪ್ಪಿಕೊಂಡು ಹೋಗುತ್ತಿದ್ದಾರೆ. ಪರಿಶಿಷ್ಟ ಜಾತಿಗಳಿಗೆ ಮೀಸಲಾದ 34 ಕ್ಷೇತ್ರಗಳಲ್ಲಿ ಶಾಸಕರು ಬದಲಾಗುವುದೇ ಇಲ್ಲ. ಆದರೆ, ಪರಿಶಿಷ್ಟ ಜನರು ನಿರ್ಣಾಯಕರಾಗಿರುವ 70ಕ್ಕೂ ಹೆಚ್ಚು ಕ್ಷೇತ್ರಗಳಿವೆ. ಅಲ್ಲಿ ಶಾಸಕರು ಬದಲಾಗುತ್ತಲೇ ಇರುತ್ತಾರೆ. ಈ ಜನಕ್ಕೆ ರಾಜಕೀಯ ಪ್ರಜ್ಞೆ ಚೆನ್ನಾಗಿದೆ. ಶಾಸಕ ತಮಗೆ ಸ್ಪಂದಿಸುತ್ತಿಲ್ಲ ಎಂದಾದರೆ, ಚುನಾವಣೆವರೆಗೂ ಕಾಯುತ್ತಾರೆ ಮತ್ತು ಎದುರಾಳಿಗಳಿಗೆ ಮತಹಾಕುತ್ತಾರೆ' ಎನ್ನುತ್ತಾರೆ ಜೋಧಪುರದ ಜೈನಾರಾಯಣ್ ವ್ಯಾಸ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕ ಓಂಪ್ರಕಾಶ್ ಅಗರ್ವಾಲ್. ❖

'ದೊಡ್ಡವರಿಗೆ ಅಡ್ಡವೂ ಹೋಗುವಂತಿಲ್ಲ'

ಮಧ್ಯಪ್ರದೇಶದೊಂದಿಗೆ ಗಡಿ ಹಂಚಿಕೊಂಡಿರುವ ಜಾಲಾವಾಡ್ ಪಟ್ಟಣದ ಸಣ್ಣೂರು ಬವಾಡ್‌ಮಂಡಿ. ಬವಾಡ್‌ಮಂಡಿಯ ಪ್ರವೇಶದ್ವಾರದಲ್ಲಿ ಸಿಕ್ಕ ಹೇಮಲತಾ ಪಾಂಚಾಲ್ ಸರ್ಕಾರದಿಂದ ತಮಗೆ ಸಿಕ್ಕಿರುವ ಅನುಕೂಲಗಳ ಬಗ್ಗೆ ಮಾತನಾಡುತ್ತಿದ್ದರು. ಆಗ ಜೀಪೊಂದು ದೂಳೆಬ್ಬಿಸುತ್ತಾ ಹೋಯಿತು. ಹೇಮಲತಾ, 'ಅವರು ನಮ್ಮ ಸರಪಂಚ, ದೊಡ್ಡವರು. ಅವರ ಗಾಡಿಗೆ ಅಡ್ಡ ಹೋಗುವಂತೆಯೇ ಇಲ್ಲ. ಹೋದರೆ ಅವರ ಕಡೆ ಮಾತನಾಡಬೇಕು. ಏನು ಬೇಕಿದ್ದರೂ ನಾವು ಅವರ ಮನೆಯ ಮುಂದೆ ನಿಲ್ಲಬೇಕು' ಎಂದರು.

ಜಾಲಾವಾಡ್ ಜಿಲ್ಲೆಯಿಂದ ಜಾಲಾವಾಡ್ ಪಟ್ಟಣದ ಮೂಲಕ ಬವಾಡ್‌ಮಂಡಿವರೆಗಿನ ಪ್ರಯಾಣದಲ್ಲಿ ಇಂತಹ ಹತ್ತಾರು ಜೀಪುಗಳು ಎದುರಾದವು. ಇಡೀ ರಸ್ತೆಯೇ ತಮ್ಮದು ಎಂಬಂತೆ ಚಲಾಯಿಸುತ್ತಿದ್ದ ಈ ಜೀಪುಗಳಲ್ಲಿ ನೋಂದಣಿ ಸಂಖ್ಯೆಯ ಫಲಕಗಳೇ ಇರಲಿಲ್ಲ. ಬದಲಿಗೆ 'ಸರಪಂಚ' ಎಂಬ ಫಲಕ ಇದ್ದವು.

ನುಡಿ–ಕಿಡಿ



ಹೆಚ್ಚುವರಿ ಆದಾಯ ಗಳಿಸುತ್ತಿದ್ದ ತೆಲಂಗಾಣ ರಾಜ್ಯವು ಈಗ ಆದಾಯ ಕೊರತೆ ಎದುರಿಸುತ್ತಿರುವ ರಾಜ್ಯವಾಗಿ ಮಾರ್ಪಟ್ಟಿದೆ. ಇದರ ಹಿರಿಮೆ ಕೆಸಿಆರ್‌ಗೆ ಸಲ್ಲುತ್ತದೆ. ತೆಲಂಗಾಣ ಇಂದು ಸಾಲಪೀಡಿತ ರಾಜ್ಯವಾಗಿದೆ. ಮುಂದಿನ ಎರಡು– ಮೂರು ಪೀಳಿಗೆಯವರೆಗೆ ನಮ್ಮ ಮಕ್ಕಳು ಈ ಸಾಲವನ್ನು ಮರುಪಾವತಿಸಬೇಕಾಗುತ್ತದೆ.

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ



ಸಿಎಜಿ ಮತ್ತು ವಿವಿಧ ಯೋಜನೆಗಳ ವರದಿಗಳನ್ನು ನೀವು ಓದಿದರೆ ಬಿಆರ್‌ಎಸ್, ಭಾರತ ರಾಷ್ಟ್ರ ಸಮಿತಿ ಅಲ್ಲ ಅದು 'ಭ್ರಷ್ಟ ರಾಷ್ಟ್ರ ಸಮಿತಿ' ಎಂಬುದು ಸ್ಪಷ್ಟವಾಗುತ್ತದೆ. ಬಿಆರ್‌ಎಸ್ ಲೂಟಿ ಮಾಡಿದ ಹಣವನ್ನು ಹಿಂತಿರುಗಿಸುವ ಮೂಲಕ ತೆಲಂಗಾಣದಲ್ಲಿ ಕಾಂಗ್ರೆಸ್ ಗ್ಯಾರಂಟಿಗಳನ್ನು ಜಾರಿಗೊಳಿಸಲಿದೆ.

ಪ್ರಿಯಾಂಕ್ ಖರ್ಗೆ, ಕರ್ನಾಟಕದ ಮಾಹಿತಿ ತಂತ್ರಜ್ಞಾನ ಸಚಿವ



ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆಯನ್ನು ಜೈಪುರದಲ್ಲಿನ ಪಕ್ಷದ ಕಚೇರಿಯಲ್ಲಿ ಮಂಗಳವಾರ ಬಿಡುಗಡೆ ಮಾಡಲಾಯಿತು. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಪಿಸಿಸಿ ಅಧ್ಯಕ್ಷ ಗೋವಿಂಗ್ ಸಿಂಗ್ ಡೊಟಾಸ್ರಾ ಇದ್ದಾರೆ –ಪಿಟಿಐ ಚಿತ್ರ

ಜಾತಿ ಗಣತಿ ಭರವಸೆ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಪುನಃ ಗೆದ್ದು ಸರ್ಕಾರ ರಚಿಸಿದರೆ ಜಾತಿ ಗಣತಿ, 10 ಲಕ್ಷ ಉದ್ಯೋಗ ಸೃಷ್ಟಿಸುವುದರ ಜೊತೆ ಹಲವು ಕಾರ್ಯಕ್ರಮ ಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ.

ಚುನಾವಣೆಗೆ 4 ದಿನ ಬಾಕಿ ಇರುವಂತೆ ಪಕ್ಷದ ಪ್ರಮುಖರು ಮಂಗಳವಾರ ಪ್ರಣಾಳಿಕೆ ಬಿಡುಗಡೆ ಮಾಡಿದರು. ಯುವಕರು, ರೈತರಿಗಾಗಿ ಹಲವು ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿರುವ ಕಾಂಗ್ರೆಸ್, ಪಂಚಾಯಿತಿ ಮಟ್ಟದಲ್ಲಿ ನೇಮಕಾತಿ ಮಾಡಲು ಹೊಸ ಯೋಜನೆ ಜಾರಿಗೆ ತರುವುದಾಗಿ ಹೇಳಿದೆ.

> **ಪ್ರಧಾನಿ ಮೋದಿ ಗುಜರಾತ್‌ನಲ್ಲಿ 13 ವರ್ಷ ಮುಖ್ಯಮಂತ್ರಿ ಆಗಿದ್ದರು. ಈಗ ಪ್ರಧಾನಿ ಆಗಿದ್ದಾರೆ. ಆದರೂ ಆ ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವರಿಗೆ ಬದ್ಧತೆ ಇಲ್ಲ**
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

ಚಿರಂಜೀವಿ ಆರೋಗ್ಯ ವಿಮೆ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುವ ವಾರ್ಷಿಕ ಆರೋಗ್ಯ ವಿಮೆ ಮೊತ್ತವನ್ನು ₹25 ಲಕ್ಷದಿಂದ ₹50 ಲಕ್ಷಕ್ಕೆ ಹೆಚ್ಚಿಸಲಾಗುವುದು. ಸಣ್ಣಮಟ್ಟದ ವ್ಯಾಪಾರಿಗಳಿಗೆ ₹5 ಲಕ್ಷದ ವರೆಗೆ ಬಡ್ಡಿರಹಿತ ಸಾಲ ನೀಡಲಾಗುವುದು. ಸಹಕಾರಿ ಬ್ಯಾಂಕ್‌ಗಳಿಂದ ರೈತರಿಗೆ ₹2 ಲಕ್ಷದವರೆಗೆ ಬಡ್ಡಿರಹಿತ ಸಾಲ ಹಾಗೂ ಸ್ವಾಮಿನಾಥನ್ ಸಮಿತಿಯ ಶಿಫಾರಸಿನ ಅನ್ವಯ ಕನಿಷ್ಠ ಬೆಂಬಲ ಬೆಲೆ ನೀಡಲಾಗುವುದು. ಜಾತಿ ಗಣತಿ ನಡೆಸಿದ ಬಳಿಕ ಅಲ್ಪಸಂಖ್ಯಾತ ಸಮುದಾಯಗಳ ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ಕಲ್ಪಿಸಲಾಗುವುದು ಎಂಬುದು ಪ್ರಣಾಳಿಕೆಯಲ್ಲಿರುವ ಪ್ರಮುಖವಾದ ಭರವಸೆಗಳು.

ಸುರಂಗದಿಂದ ಭರವಸೆ ಬೆಳಕು

ಒಂದನೇ ಪುಟದಿಂದ...

ಕಾರ್ಮಿಕರ ಜೊತೆ ಮಾತುಕತೆ ನಡೆಸಲು ಈ ಮೊದಲು ನಾಲ್ಕು ಇಂಚು ವ್ಯಾಸದ ಪೈಪ್ ಬಳಸಲಾಗಿತ್ತು. ಈಗ ಅಳವಡಿಸಿರುವ ಆರು ಇಂಚು ವ್ಯಾಸದ ಪೈಪ್, ರಕ್ಷಣಾ ಕಾರ್ಯದಲ್ಲಿ ತೊಡಗಿರುವವರಿಗೂ ಹೆಚ್ಚಿನ ಸ್ಥೈರ್ಯ ತಂದುಕೊಟ್ಟಿದೆ. ಈಗ ಕಾರ್ಮಿಕರ ಜೊತೆ ಸಂವಹನ ಹೆಚ್ಚು ಚೆನ್ನಾಗಿ ಆಗುತ್ತಿದೆ, ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಕಳುಹಿಸಲು ಸಾಧ್ಯವಾಗುತ್ತಿದೆ.

ಸುನಿತಾ ಎನ್ನುವವರ ಸಂಬಂಧಿ ಸುರಂಗದಲ್ಲಿ ಸಿಲುಕಿಕೊಂಡಿದ್ದಾರೆ. 'ನಾನು ಇಂದು ಬೆಳಿಗ್ಗೆ ಅವರ ಜೊತೆ ಮಾತನಾಡಿದೆ' ಎಂದು ಸುನಿತಾ ತಿಳಿಸಿದ್ದಾರೆ. ದೊಡ್ಡ ಗಾತ್ರದ ಪೈಪ್ ಮೂಲಕ ಅವರಿಗೆ ಕಿತ್ತಳೆ ಹಣ್ಣು ಕೊಡಲಾಗಿದೆ.

ದಾಲಿಯಾ, ಖಿಚಡಿ, ಹೆಚ್ಚಿದ ಸೇಬು ಹಣ್ಣು, ಬಾಳೆಹಣ್ಣನ್ನು ಕಾರ್ಮಿಕರಿಗೆ ಈಗ ಕಳುಹಿಸಬಹುದು. ಅಲ್ಲದೆ, ಮೊಬೈಲ್ ಫೋನ್ ಹಾಗೂ ಚಾರ್ಜರ್‌ಗಳನ್ನು ಕೂಡ ಅವರಿಗೆ ಕಳುಹಿಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸದಾಗಿ ತೂರಿಸಲಾಗಿರುವ ಆರು ಇಂಚು ವ್ಯಾಸದ ಪೈಪ್, ಕಾರ್ಮಿಕರ ಜೊತೆ ಸಂವಹನ ನಡೆಸುವುದನ್ನು ಸುಲಭವಾಗಿಸಿದೆ. ಹೊಸ ಪೈಪ್ ಮೂಲಕ ತಮಗೆ ಕಾರ್ಮಿಕರ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿವೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಹೊಸದಾಗಿ ಅಳವಡಿಸಲಾಗಿರುವ ಪೈಪ್ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಕಳುಹಿಸಲು ಸಾಧ್ಯವಾಗುತ್ತಿದೆ. ಇದು ಒಳ್ಳೆಯದು. ಆದರೆ, ಪರಿಸ್ಥಿತಿ ಮೊದಲಿನಂತೆಯೇ ಇದೆ. ಕಾರ್ಮಿಕರನ್ನು ರಕ್ಷಿಸುವ ಸವಾಲು ಹಾಗೆಯೇ ಉಳಿದಿದೆ' ಎಂದು ಜೈಮಲ್ ಸಿಂಗ್ ನೇಗಿ ಎಂಬವರು ಹೇಳಿದರು. ಅವರ ಸಹೋದರ ಗಬ್ಬರ್ ಸಿಂಗ್ ಅವರು ಸುರಂಗದಲ್ಲಿ ಸಿಲುಕಿದ್ದಾರೆ.

ಮಂಜಿತ್ ಎನ್ನುವವರ ತಂದೆ ಚೌಧರಿ ಅವರು ತಮಗೆ ಮಗನ ಜೊತೆ ಮಾತನಾಡಲು ಅವಕಾಶ ಸಿಗುತ್ತಿಲ್ಲ ಎಂದು ದೂರಿದ್ದಾರೆ. 'ನನಗೆ ಒಂದು ಬಾರಿ ಮಾತ್ರ ಮಂಜಿತ್ ಜೊತೆ ಮಾತನಾಡಲು ಸಾಧ್ಯವಾಗಿದೆ. ಈಗ ನನಗೆ ಒಳಗೆ ಹೋಗಿ ಅವನ ಜೊತೆ ಮಾತನಾಡಲು ಅವಕಾಶ ನೀಡುತ್ತಿಲ್ಲ' ಎಂದು ಚೌಧರಿ ದೂರಿದ್ದಾರೆ.

ಪ್ರಧಾನಿ ಮಾತುಕತೆ: ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರ ಜೊತೆ ಮಂಗಳವಾರ ಮಾತುಕತೆ ನಡೆಸಿದ್ದಾರೆ, ಕಾರ್ಮಿಕರ ರಕ್ಷಣಾ ಕಾರ್ಯದಲ್ಲಿನ ಪ್ರಗತಿ ಬಗ್ಗೆ ವಿಚಾರಿಸಿದ್ದಾರೆ. ಪ್ರಧಾನಿ ಮೋದಿ ಅವರು ಸೋಮವಾರ ಕೂಡ ಧಾಮಿ ಅವರ ಜೊತೆ ಮಾತುಕತೆ ನಡೆಸಿದ್ದರು.

'ಎಲ್ಲ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರುವುದು ನಮ್ಮ ಆದ್ಯತೆಯ ಕೆಲಸ ಎಂದು ಪ್ರಧಾನಿಯವರು ಹೇಳಿದ್ದಾರೆ' ಎಂದು ಧಾಮಿ ಅವರು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

ಪಿ.ಎಂ ಎಂದರೆ 'ಪನೌತಿ' ಮೋದಿ

ರಾಜಸ್ಥಾನದ ಬಾಯ್ತೂನಲ್ಲಿ ನಡೆದ ಸಭೆಯಲ್ಲಿ ರಾಹುಲ್ ಗಾಂಧಿ ವಾಗ್ದಾಳಿ

ಜೈಪುರ (ಪಿಟಿಐ): 'ಪಿಎಂ ಎಂದರೆ ಪನೌತಿ (ಅಪಶಕುನ) ಮೋದಿ ಎಂದರ್ಥ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಟೀಕಿಸಿದರು.

ವಿಶ್ವಕಪ್ ಕ್ರಿಕೆಟ್ ಫೈನಲ್‌ನಲ್ಲಿ ಭಾರತವು ಆಸ್ಟ್ರೇಲಿಯಾ ಎದುರು ಸೋತಿದ್ದು ದೇಶದ ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳ ದುಃಖಕ್ಕೆ ಕಾರಣವಾಗಿತ್ತು. ಅಲ್ಲಿಂದ ಈಚೆಗೆ 'ಪನೌತಿ' ಎಂಬ ಹಿಂದಿ ಪದವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡತೊಡಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಪಂದ್ಯ ವೀಕ್ಷಿಸಲು ಕ್ರೀಡಾಂಗಣದಲ್ಲಿ ಉಪಸ್ಥಿತರಿದ್ದ ಕಾರಣದಿಂದಲೇ ಭಾರತವು ಸೋತಿತು ಎಂಬರ್ಥದಲ್ಲಿ ಟ್ರೋಲ್ ಮಾಡಿದ ಸಾಮಾಜಿಕ ಜಾಲತಾಣಗಳ ಬಳಕೆದಾರರು, ಮೋದಿ ಅವರನ್ನು 'ಪನೌತಿ' ಎಂದು ಕರೆದಿದ್ದರು.

ರಾಜಸ್ಥಾನದ ಬಾಯ್ತೂ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದ ರಾಹುಲ್ ಗಾಂಧಿ ಅವರು ಕೂಡಾ ಮೋದಿ ವಿರುದ್ಧ 'ಪನೌತಿ' ಪದಬಳಕೆ ಮಾಡಿದ್ದಾರೆ. ಮೋದಿ ಹೆಸರು ಉಲ್ಲೇಖಿಸದೇ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ನಮ್ಮ ಹುಡುಗರು ವಿಶ್ವಕಪ್ ಗೆಲ್ಲುವ ಉತ್ಸಾಹದಲ್ಲಿದ್ದರು. ಆದರೆ ಅಲ್ಲಿಗೆ 'ಪನೌತಿ' ವ್ಯಕ್ತಿಯೊಬ್ಬರು ಬಂದು ಎಲ್ಲವನ್ನೂ ಹಾಳು ಮಾಡಿದರು' ಎಂದರು.

ಬಳಿಕ ಮೋದಿ ಹೆಸರನ್ನು ಉಲ್ಲೇಖಿಸಿ ದಾಳಿ ನಡೆಸಿದ ರಾಹುಲ್, 'ಒಬ್ಬ ವ್ಯಕ್ತಿ ಟಿವಿಯಲ್ಲಿ ಬಂದು ಹಿಂದೂ– ಮುಸ್ಲಿಂ ಎಂದು ಮಾತನಾಡುತ್ತಾರೆ. ಅವರು ಕ್ರಿಕೆಟ್ ಪಂದ್ಯ ವೀಕ್ಷಿಸಲು ಹೋಗಿದ್ದರು. ಆದರೆ ಭಾರತ ಆ ಪಂದ್ಯದಲ್ಲಿ ಸೋತಿತು ಎಂಬುದು ಬೇರೆ ಮಾತು. ಪಿ.ಎಂ ಎಂದರೆ ಪನೌತಿ ಮೋದಿ' ಎಂದರು.

ಉದ್ಯಮಿ ಗೌತಮ್ ಅದಾನಿ ಅವರು ಜನರ ಜೇಬಿಗೆ ಕನ್ನಾ ಹಾಕುವಾಗ ಮೋದಿ ಜನರ ಗಮನವನ್ನು ಬೇರೆಡೆಗೆ ತಿರುಗಿಸುತ್ತಾರೆ ಎಂದು ಆರೋಪಿಸಿದರು.



ರಾಜಸ್ಥಾನದ ಆಕೋಲಿಯಲ್ಲಿ ಮಂಗಳವಾರ ಸಾರ್ವಜನಿಕ ಸಭೆ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜನರತ್ತ ಕೈ ಬೀಸಿದರು –ಪಿಟಿಐ ಚಿತ್ರ

ಕ್ಷಮೆ ಕೋರಲು ಬಿಜೆಪಿ ಆಗ್ರಹ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರನ್ನು ಪನೌತಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕರೆದಿರುವುದರ ವಿರುದ್ಧ ಹರಿಹಾಯ್ದಿರುವ ಬಿಜೆಪಿ, ಕ್ಷಮೆ ಯಾಚಿಸುವಂತೆ ರಾಹುಲ್ ಅವರನ್ನು ಆಗ್ರಹಿಸಿದೆ.

ದೇಶದ ಪ್ರಧಾನಿ ಕುರಿತು ರಾಹುಲ್ ನೀಡಿರುವ ಹೇಳಿಕೆಯು ನಾಚಿಕೆಗೇಡು, ಅಪಮಾನಕಾರಿ ಮತ್ತು ಖಂಡನಾರ್ಹವಾಗಿದೆ ಎಂದು ಬಿಜೆಪಿ ಹಿರಿಯ ನಾಯಕ ರವಿಶಂಕರ್ ಪ್ರಸಾದ್ ಅವರು ಹೇಳಿದ್ದಾರೆ.

ನರೇಂದ್ರ ಮೋದಿ ಅವರು ಗುಜರಾತ್‌ನ ಮುಖ್ಯಮಂತ್ರಿ ಆಗಿದ್ದ ವೇಳೆ ಅವರನ್ನು 'ಸಾವಿನ ದಲ್ಲಾಳಿ' ಎಂದು ರಾಹುಲ್ ತಾಯಿ ಸೋನಿಯಾ ಗಾಂಧಿ ಕರೆದಿದ್ದರು. ಬಳಿಕ ಗುಜರಾತ್‌ನಲ್ಲಿ ಕಾಂಗ್ರೆಸ್ ಹೇಗೆ ಮುಳುಗಿತು ಎಂದು ರಾಹುಲ್ ಅವರು ನೆನಪಿಸಿಕೊಳ್ಳಲಿ ಎಂದಿದ್ದಾರೆ.

ಚುನಾವಣಾ ಕಣದಲ್ಲಿ

- **ಇ.ಡಿ ಶೋಧ:** ವಿದೇಶಿ ವಿನಿಮಯ ಉಲ್ಲಂಘನೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ತೆಲಂಗಾಣದ ಚೆನ್ನೂರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿವೇಕ್ ವೆಂಕಟಸ್ವಾಮಿ ಮತ್ತು ಇತರರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಿತು.
  ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಡಿ ಚೆನ್ನೂರು ಮತ್ತು ಹೈದರಾಬಾದ್‌ನಲ್ಲಿ ಶೋಧ ನಡೆದಿದೆ ಎಂದು ಅಧಿಕೃತ ಮೂಲಗಳು ಹೇಳಿವೆ. ಈ ತಿಂಗಳ ಆರಂಭದಲ್ಲಿ ವಿವೇಕ್ ಅವರು ಬಿಜೆಪಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದ್ದರು. ₹ 600ಕೋಟಿ ಆಸ್ತಿ ಇರುವುದಾಗಿ ಅವರು ಘೋಷಿಸಿಕೊಂಡಿದ್ದು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅತಿ ಶ್ರೀಮಂತ ರಾಜಕಾರಣಿ ಆಗಿದ್ದಾರೆ.
- **ಮತಪೆಟ್ಟಿಗೆಗಳು:** ಇದೇ 30ರಂದು ನಡೆಯಲಿರುವ ತೆಲಂಗಾಣ ಮತದಾನದಲ್ಲಿ ಸುಮಾರು 59,779 ಮತಪೆಟ್ಟಿಗೆಗಳನ್ನು ಬಳಸಲಾಗುವುದು. ಒಟ್ಟು 2,290 ಅಭ್ಯರ್ಥಿಗಳು ಕಣದಲ್ಲಿದ್ದಾರೆ.
  ಎಲ್ಲಾ 33 ಜಿಲ್ಲೆಗಳಲ್ಲಿ ಮತ ಎಣಿಕೆ ಕೇಂದ್ರಗಳ ಪಟ್ಟಿ ಕೂಡ ಅಂತಿಮಗೊಳಿಸಲಾಗಿದೆ. ಇಲ್ಲಿ ಇದೇ 30ರಂದು ಚುನಾವಣೆ ನಡೆಯಲಿದೆ.
- **ಆಯೋಗಕ್ಕೆ ದೂರು:** ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ತನ್ನ ಪರ ಅಲೆ ಇರುವುದಾಗಿ ಸುದ್ದಿ ಅಥವಾ ಅಭಿಪ್ರಾಯದ ರೂಪದಲ್ಲಿ ಕಾಂಗ್ರೆಸ್ ಜಾಹೀರಾತು ನೀಡುತ್ತಿದೆ. ಈ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗವನ್ನು ಬಿಜೆಪಿ ಒತ್ತಾಯಿಸಿದೆ.
  ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗ್ಯಾರಂಟಿಗಳ ಪ್ರಯೋಜನ ಪಡೆಯಲು ಮೊಬೈಲ್ ನಂಬರ್‌ಗೆ ಮಿಸ್ಡ್ ಕಾಲ್ ನೀಡುವಂತೆ ಜನರಿಗೆ ಹೇಳುತ್ತಿದೆ ಎಂದು ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯ, ಪಕ್ಷದ ನಾಯಕ ರವಿಶಂಕರ್ ಪ್ರಸಾದ್ ಅವರನ್ನು ಒಳಗೊಂಡ ನಿಯೋಗವು ಆಯೋಗಕ್ಕೆ ದೂರು ನೀಡಿದೆ.
- **ಮರು ಮತದಾನ:** ಮಧ್ಯಪ್ರದೇಶದ ಅಟೇರ್ ವಿಧಾನಸಭಾ ಕ್ಷೇತ್ರದ ಕಿಶುಪುರ ಮತಗಟ್ಟೆ– 71ರಲ್ಲಿ ಮಂಗಳವಾರ ಮರು ಮತದಾನ ನಡೆಸಲಾಯಿತು.
  ಈ ಮತಗಟ್ಟೆಯಲ್ಲಿ ಮತದಾನ ಮಾಡಲು 1,223 ಮತದಾರರು ನೋಂದಾಯಿಸಿಕೊಂಡಿದ್ದರು. ಅವರಲ್ಲಿ ಕೇವಲ ಶೇ 47ರಷ್ಟು ಮತದಾರರು ಮರು ಮತದಾನ ಮಾಡಿದರು.
  ನ.17ರಂದು ಈ ಮತಗಟ್ಟೆಯಲ್ಲಿ ನಕಲಿ ಮತದಾನ ನಡೆದ ಕುರಿತು ದೂರು ದಾಖಲಾಗಿದ್ದವು. ಈ ಹಿನ್ನೆಲೆಯಲ್ಲಿ ಮರು ಮತದಾನ ನಡೆಸಲಾಯಿತು.

'ಅಮೇಠಿಯಿಂದ ರಾಹುಲ್ ಸ್ಪರ್ಧೆ'

ಮುಂಬೈ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಅಮೇಠಿಯಿಂದ ಸ್ಪರ್ಧಿಸಲಿದ್ದಾರೆ ಎಂದು ಉತ್ತರಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಜಯ್ ರಾಯ್ ಅವರು ಮಂಗಳವಾರ ಹೇಳಿದರು.

'ಅಮೇಠಿಯ ಜನರಿಗಾಗಿ ಗಾಂಧಿ ಕುಟುಂಬವು ತಲೆತಲಾಂತರದಿಂದ ಶ್ರಮಿಸುತ್ತಿದೆ. ರಾಹುಲ್ ಅವರು ಅಲ್ಲಿಂದಲೇ ಸ್ಪರ್ಧಿಸಲಿದ್ದಾರೆ' ಎಂದು ಮುಂಬೈನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಎನ್‌ಇಟಿ ಪಠ್ಯಕ್ರಮ ಬದಲಾವಣೆಗೆ ಯುಜಿಸಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶೀಘ್ರವೇ, ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಯುಜಿಸಿ–ಎನ್‌ಇಟಿ ಪಠ್ಯಕ್ರಮ ಬದಲಾವಣೆಯಾಗಲಿದೆ.


ಇತ್ತೀಚೆಗೆ ನಡೆದ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಉನ್ನತ ಶಿಕ್ಷಣ ಸಮಿತಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ನಿರ್ಧರಿಸಲಾಗಿದೆ. ಹೊಸ ಪಠ್ಯಕ್ರಮ ರಚನೆಗೆ ಸಂಬಂಧಿಸಿ ಮಂಡಳಿಯು ಪರಿಣತರ ಸಮಿತಿ ರಚಿಸಲಿದೆ.

'2017ರಲ್ಲಿ ಎನ್‌ಇಟಿ ಪಠ್ಯಕ್ರಮವು ಪರಿಷ್ಕರಣೆಯಾಗಿತ್ತು. ಹೊಸ ಪಠ್ಯಕ್ರಮದ ಅನುಷ್ಠಾನಕ್ಕೂ ಮೊದಲು ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಸಾಕಷ್ಟು ಸಮಯಾವಕಾಶ ನೀಡಲಾಗುವುದು. ಹಾಗಾಗಿ, ಈ ಬದಲಾವಣೆಯು ಸರಾಗವಾಗಿ ನಡೆಯಲಿದೆ' ಎಂದು ಮಂಡಳಿಯ ಮುಖ್ಯಸ್ಥ ಎಂ. ಜಗದೇಶ್ ಕುಮಾರ್ ತಿಳಿಸಿದ್ದಾರೆ. 83 ವಿಷಯಗಳಿಗೆ ಸಂಬಂಧಿಸಿ ಪ್ರತಿ ವರ್ಷದ ಜೂನ್ ಮತ್ತು ಡಿಸೆಂಬರ್‌ನಲ್ಲಿ ಮಂಡಳಿಯು ಎನ್‌ಇಟಿ ಪರೀಕ್ಷೆ ನಡೆಸುತ್ತದೆ.

ತ್ರಿಶಾ ಕುರಿತ ಹೇಳಿಕೆ: ಚಿರಂಜೀವಿ ಆಕ್ಷೇಪ

ಹೈದರಾಬಾದ್ (ಪಿಟಿಐ): ಚಿತ್ರನಟ ಮನ್ಸೂರ್ ಅಲಿ ಖಾನ್ ಅವರು ನಟಿ ತ್ರಿಶಾ ಅವರ ಕುರಿತು ನೀಡಿರುವ ಹೇಳಿಕೆಯನ್ನು ನಟ ಚಿರಂಜೀವಿ ಅವರು ಮಂಗಳವಾರ ಖಂಡಿಸಿದ್ದಾರೆ.

'ಸಂದರ್ಶನದಲ್ಲಿ ಮನ್ಸೂರ್ ಅವರು ನೀಡಿರುವ ಹೇಳಿಕೆಯು ಅಸಹ್ಯ ಮತ್ತು ಜಿಗುಪ್ಸೆಯನ್ನು ಹುಟ್ಟಿಸುವಂತದ್ದು' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.




ಸುಭಾಷಿತ

ನಮಗೆ ಬೇಕಾಗಿರುವುದು ಧರ್ಮ ತೋರಿಸಿಕೊಟ್ಟಿರುವ ನೈತಿಕ ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ಹರಿಸುವ ದಾರಿ ಮತ್ತು ಅದು ಬೋಧಿಸುವ ಧ್ಯಾನದ ಶಿಸ್ತನ್ನು ಅರ್ಥಮಾಡಿಕೊಳ್ಳುವ ಮನಸ್ಸು.

–ಯು.ಆರ್.ಅನಂತಮೂರ್ತಿ

ಜೀವ ಹೀರುವ ವಿದ್ಯುತ್ ತಂತಿಗಳು ಅಮಾಯಕರ ಜೀವಕ್ಕೆ ಬೆಲೆಯಿಲ್ಲವೇ?

ಪಾದಚಾರಿ ಮಾರ್ಗದಲ್ಲಿ ತುಂಡರಿಸಿ ಬಿದ್ದಿದ್ದ ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯನ್ನು ತುಳಿದು 23 ವರ್ಷ ವಯಸ್ಸಿನ ತಾಯಿ ಹಾಗೂ ಒಂಬತ್ತು ತಿಂಗಳ ಹೆಣ್ಣುಮಗು ಸಾವಿಗೀಡಾಗಿರುವುದಕ್ಕೆ ಬೆಸ್ಕಾಂ ನಿರ್ಲಕ್ಷ್ಯವೇ ಕಾರಣವಾಗಿದೆ. ಬೆಂಗಳೂರಿನ ವೈಟ್‌ಫೀಲ್ಡ್ ಬಳಿಯ ಹೋಪ್ ಫಾರ್ಮ್ ಬಳಿ ಈ ದುರ್ಘಟನೆ ಸಂಭವಿಸಿದೆ. ತಮಿಳುನಾಡಿನಿಂದ ತಾಯಿಯನ್ನು ನೋಡಲು ಮಗು ಹಾಗೂ ಪತಿಯೊಂದಿಗೆ ಬಂದಿದ್ದ ದುರ್ದೈವಿ ಮಹಿಳೆ, ನೆಲದ ಮೇಲೆ ಬಿದ್ದಿದ್ದ ತಂತಿಯನ್ನು ತುಳಿದಾಗ, ವಿದ್ಯುತ್ ಪ್ರವಹಿಸಿ ಕೈಯಿಂದ ಬೆಂಕಿ ಹತ್ತಿಕೊಂಡಿದೆ. ಪತ್ನಿ ಹಾಗೂ ಮಗು ಕಣ್ಣೆದುರೇ ಸಾವಿಗೀಡಾಗುವುದನ್ನು ಪತಿ ಅಸಹಾಯಕತೆಯಿಂದ ನೋಡಬೇಕಾಯಿತು. ವಿದ್ಯುತ್ ತಂತಿ ತುಂಡರಿಸಿ ಬಿದ್ದಿದ್ದರೂ ಅದನ್ನು ಕೂಡಲೇ ಸರಿಪಡಿಸದ ಬೆಸ್ಕಾಂ, ದುರ್ಘಟನೆಯ ಹೊಣೆಯನ್ನು ಹೊರಬೇಕಾಗಿದೆ. ಘಟನೆಗೆ ಸಂಬಂಧಿಸಿದಂತೆ ಬೆಸ್ಕಾಂನ ಐವರು ನೌಕರರನ್ನು ಅಮಾನತುಗೊಳಿಸಲಾಗಿದೆ ಹಾಗೂ ಅವರ ವಿರುದ್ಧ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ. ದುರ್ಘಟನೆಯ ಹೊಣೆಯನ್ನು ಕೆಲವು ನೌಕರರ ಮೇಲೆ ಹೊರಿಸಿ ಕೈತೊಳೆದು ಕೊಳ್ಳುವುದಕ್ಕೆ ಬೆಸ್ಕಾಂ ಪ್ರಯತ್ನಿಸಬಾರದು. ಎರಡು ಜೀವಗಳ ಸಾವು ಬೆಸ್ಕಾಂ ಅಧಿಕಾರಿಗಳ ಆತ್ಮಾವಲೋಕನಕ್ಕೆ ಪ್ರೇರಣೆಯಾಗಬೇಕು. ಕಳೆದ ಆರು ವರ್ಷಗಳ ಅವಧಿಯಲ್ಲಿ ಬೆಸ್ಕಾಂ ಕಾರ್ಯವ್ಯಾಪ್ತಿಯ ಜಿಲ್ಲೆಗಳಲ್ಲಿ 70 ಸಾವಿರಕ್ಕೂ ಹೆಚ್ಚು ವಿದ್ಯುತ್ ಅಪಘಾತಗಳು ಸಂಭವಿಸಿವೆ. ಹೀಗೆ ಸಾವಿಗೀಡಾದವರಲ್ಲಿ ಬೆಸ್ಕಾಂ ನೌಕರರೂ ಸೇರಿದ್ದಾರೆ. ತನ್ನ ಉದ್ಯೋಗಿಗಳು ಹಾಗೂ ಬಳಕೆದಾರರ ಸುರಕ್ಷತೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಬೆಸ್ಕಾಂ ಪದೇಪದೇ ಹೇಳುತ್ತಿದ್ದರೂ ವಿದ್ಯುತ್ ತಂತಿಗಳಿಗೆ ಅಮಾಯಕರು ಬಲಿಯಾಗುವುದೇನೂ ತಪ್ಪಿಲ್ಲ. ಶಾಲೆಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ವಿದ್ಯುತ್ ಸರಬರಾಜು ಕಂಪನಿಗಳು ಹೇಳಿಕೊಂಡಿವೆ. ಆದರೆ, ಸಾರ್ವಜನಿಕ ಸ್ಥಳಗಳಲ್ಲೇ ಹೆಚ್ಚಿನ ಸಾವು ನೋವು ಸಂಭವಿಸುತ್ತಿವೆ. ತುಂಡಾದ ವಿದ್ಯುತ್ ತಂತಿ, ಅಪಾಯಕಾರಿ ಮಟ್ಟದಲ್ಲಿ ಹರಿಯುವ ಮೋರಿ ಹಾಗೂ ತೆರೆದ ಮ್ಯಾನ್‌ಹೋಲ್‌ಗಳು ನಾಗರಿಕ ವ್ಯವಸ್ಥೆಯಲ್ಲಿ ಸಹಜ ಎನ್ನುವಂತಾಗಿದೆ.



ಬೆಂಗಳೂರಿನಲ್ಲಿ ತುಂಡರಿಸಿ ಬಿದ್ದಿದ್ದ ವಿದ್ಯುತ್ ತಂತಿ ಎರಡು ಜೀವಗಳ ಬಲಿಯಾಗಿರುವ ಪ್ರಕರಣ, ಬೆಸ್ಕಾಂ ಅಧಿಕಾರಿಗಳ ಆತ್ಮಾವಲೋಕನಕ್ಕೆ ಪ್ರೇರಣೆಯಾಗಬೇಕು

ವಿದ್ಯುತ್ ಅಪಘಾತಗಳನ್ನು ತಪ್ಪಿಸುವ ದೃಷ್ಟಿಯಿಂದ ನೆಲದಡಿಯಲ್ಲಿ ಕೇಬಲ್‌ಗಳನ್ನು ಅಳವಡಿಸುವ ಯೋಜನೆ ಶೇ 90ರಷ್ಟು ಪೂರ್ಣಗೊಂಡಿದೆ ಎಂದು ಬೆಸ್ಕಾಂ ಹೇಳಿಕೊಂಡಿದೆ. ಆದರೂ ಸಾವಿನ ನಾಲಿಗೆಗಳಂತೆ ಕಾಣಿಸುವ ತುಂಡಾದ ಕೇಬಲ್‌ಗಳು, ವಿದ್ಯುತ್ ತಂತಿಗಳು ಹಾಗೂ ದುಸ್ಥಿತಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಅನೇಕ ಪ್ರದೇಶಗಳಲ್ಲಿ ಕಾಣಬಹುದು. ಬೆಂಗಳೂರಿನ ಹಲವೆಡೆ ಭೂಗತ ಕೇಬಲ್‌ಗಳನ್ನು ಅಳವಡಿಸುವುದಕ್ಕೆ ಬೆಸ್ಕಾಂಗೆ ಇನ್ನೂ ಸಾಧ್ಯವಾಗಿಲ್ಲ. ವಿದ್ಯುತ್ ತಂತಿಗಳು ಮುರಿದುಬೀಳದಂತೆ ನಿಗಾ ವಹಿಸುವುದು ಹಾಗೂ ತುಂಡಾಗಿದ್ದ ತಕ್ಷಣ ದುರಸ್ತಿಗೊಳಿಸುವ ದಕ್ಷತೆಯನ್ನೂ ಬೆಸ್ಕಾಂ ಅಧಿಕಾರಿಗಳು ಪ್ರದರ್ಶಿಸಿಲ್ಲ. ಕಾರ್ಯನಿರ್ವಹಣೆಯಲ್ಲಿನ ಈ ಲೋಪವೇ ಬೆಂಗಳೂರಿನಲ್ಲಿ ತಾಯಿ-ಮಗುವಿನ ಜೀವವನ್ನು ಬಲಿ ತೆಗೆದುಕೊಂಡಿದೆ. ಅಪಘಾತಕ್ಕೆ ಕಾರಣರಾದ ಅಧಿಕಾರಿಗಳಿಗೆ ತಕ್ಕ ದಂಡನೆಯಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯುತ್ ತಂತಿಗಳು ಜನರ ಸಂಪರ್ಕಕ್ಕೆ ಬಾರದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯದ ವಿವಿಧ ಭಾಗಗಳಲ್ಲೂ ವಿದ್ಯುತ್ ಸರಬರಾಜು ಕಂಪನಿಗಳ ಹೊಣೆಗೇಡಿತನದಿಂದಾಗಿ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಕೆಲವು ಸಮಯದ ಹಿಂದಷ್ಟೇ ಹದಿನಾಲ್ಕು ವರ್ಷದ ಬಾಲಕನೊಬ್ಬ ವಿದ್ಯುತ್ ತಂತಿ ತುಳಿದು ಸಾವಿಗೀಡಾದ ಘಟನೆ ಬೆಳಗಾವಿಯಿಂದ ವರದಿಯಾಗಿತ್ತು. ಬೀದರ್ ತಾಲ್ಲೂಕಿನ ಬಸ್ಸಿಗ್ಗಳಲ್ಲಿ ವೃದ್ಧೆಯೊಬ್ಬರು ಹಾಗೂ ಹಸು ವಿದ್ಯುತ್ ತಂತಿಗೆ ಬಲಿಯಾದ ಘಟನೆ ಇತ್ತೀಚೆಗಷ್ಟೇ ನಡೆದಿತ್ತು. ಸಾವಿಗೀಡಾದ ವೃದ್ಧೆಯ ಸಂಬಂಧಿಯೊಬ್ಬರೂ ವಿದ್ಯುತ್ ಆಘಾತದಿಂದಲೇ ಕಳೆದ ವರ್ಷ ಸಾವಿಗೀಡಾಗಿದ್ದರು. ಜೋತು ಬಿದ್ದಿದ್ದ ವಿದ್ಯುತ್ ತಂತಿಯನ್ನು ಸರಿಪಡಿಸುವಂತೆ ಎಷ್ಟು ಬಾರಿ ಮನವಿ ಮಾಡಿಕೊಂಡರೂ ಅಧಿಕಾರಿಗಳು ಸ್ಪಂದಿಸಿರಲಿಲ್ಲ. ಹಸು, ಎಮ್ಮೆ, ಕುರಿ, ಆಡು, ನಾಯಿಯಂತಹ ಪ್ರಾಣಿಗಳು ತುಂಡಾದ ವಿದ್ಯುತ್ ತಂತಿಗಳನ್ನು ಸ್ಪರ್ಶಿಸಿ ಜೀವ ಕಳೆದುಕೊಂಡಿರುವ ಹಲವಾರು ಘಟನೆಗಳು ನಡೆದಿವೆ. ಅಧಿಕಾರಿಗಳ ಅಸಡ್ಡೆಯಿಂದಾಗಿ ಜನರ ಜೀವಕ್ಕೂ ಬೆಲೆಯಿಲ್ಲ, ಜಾನುವಾರುಗಳ ಜೀವಕ್ಕೂ ಬೆಲೆಯಿಲ್ಲ. ವಿದ್ಯುತ್ ಆಘಾತದಿಂದ ಜನ ಜೀವ ಕಳೆದುಕೊಂಡಾಗ, 'ಇಂಥ ಘಟನೆ ಮತ್ತೊಮ್ಮೆ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ' ಎಂದು ಬೆಸ್ಕಾಂ ಹಾಗೂ ಸರ್ಕಾರ ಹೇಳುತ್ತವೆ. ಜೋರು ಮಳೆ ಸಂದರ್ಭದಲ್ಲಿ ತುಂಬಿ ಹರಿಯುವ ರಾಜಧಾನಿಯ ಮೋರಿಗಳು ಬಲಿ ಪಡೆದಾಗಲೂ ಇದೇ ರೀತಿಯ ಅನುಕಂಪ ಮತ್ತು ಕಾಳಜಿ ವ್ಯಕ್ತವಾಗುತ್ತದೆ. ಘಟನೆ ತಣ್ಣಗಾಗುತ್ತಾ ಹೋದಂತೆ ವ್ಯವಸ್ಥೆಯೂ ನಿದ್ರಿಸತೊಡಗುತ್ತದೆ. ಸರ್ಕಾರ ಹಾಗೂ ವ್ಯವಸ್ಥೆ ಮತ್ತೆ ಎಚ್ಚೆತ್ತುಕೊಳ್ಳುವುದು ಮತ್ತೊಂದು ಸಾವು ಸಂಭವಿಸಿದಾಗಲೇ. ಈ ಮರೆವಿನ ಸರಪಳಿ ಇನ್ನಾದರೂ ಕೊನೆಗೊಳ್ಳಬೇಕು. ಬೆಂಗಳೂರಿನಲ್ಲಿ ಸಂಭವಿಸಿರುವ ತಾಯಿ-ಮಗುವಿನ ಸಾವು ವ್ಯವಸ್ಥೆಗೆ ಪಾಠವಾಗಬೇಕು.

ದಿನದ ಟ್ವೀಟ್


ಅನುದಾನ ಸ್ಥಗಿತಗೊಳಿಸಿ



ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದ ಬಳಿಕ ನಮ್ಮ ತಂಡದ ಸದಸ್ಯರನ್ನು ಡ್ರೆಸಿಂಗ್ ರೂಮ್‌ನಲ್ಲಿ ಭೇಟಿಯಾಗಿ ಸಮಾಧಾನ ಮಾಡಿದ್ದು ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವದ ನಡೆ. ಅವರು ಬಿಸಿಸಿಐ ಅಧ್ಯಕ್ಷರಿಗೂ ಬರಹೇಳುತ್ತಾರೆ ಮತ್ತು ಭ್ರಷ್ಟವಾಗಿರುವ ರಾಜ್ಯ ಕ್ರಿಕೆಟ್ ಸಂಸ್ಥೆಗಳಿಗೆ ಅನುದಾನ ಸ್ಥಗಿತಗೊಳಿಸುವಂತೆ ಹಾಗೂ ವೀಕ್ಷಕರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವಂತೆ ಸೂಚಿಸುತ್ತಾರೆ ಎಂಬ ಭರವಸೆ ಹೊಂದೋಣ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ



ರಾಜ್ಯಪಾಲರು 1. ಮಸೂದೆಗಳ ವಿಚಾರದಲ್ಲಿ ವರ್ಷಗಟ್ಟಲೆ ತೀರ್ಮಾನ ತೆಗೆದುಕೊಳ್ಳುವುದಿಲ್ಲ 2. ರಾಜಕೀಯ ಮಾಡುತ್ತಾರೆ 3. ಮುಖ್ಯಮಂತ್ರಿ ನಸುಕಿನಲ್ಲಿ ಪ್ರಮಾಣವಚನ ಸ್ವೀಕರಿಸುವಂತೆ ಮಾಡುತ್ತಾರೆ 4. ವಿರೋಧ ಪಕ್ಷಗಳು ಆಡಳಿತದಲ್ಲಿರುವ ಸರ್ಕಾರಗಳನ್ನು ಅಸ್ಥಿರಗೊಳಿಸಲು ಯತ್ನಿಸುತ್ತಾರೆ 5. ಆರ್‌ಎಸ್‌ಎಸ್‌ಗೆ ಸಾರ್ವಜನಿಕವಾಗಿ ಸ್ವಾಮಿನಿಷ್ಠೆ ಪ್ರದರ್ಶಿಸುತ್ತಾರೆ 6. ಸಾಂವಿಧಾನಿಕ ಶಿಷ್ಟಾಚಾರಗಳನ್ನು ಉಲ್ಲಂಘಿಸುತ್ತಾರೆ. ಇಂತಹವರ ಅಗತ್ಯ ನಮಗಿದೆಯೇ?

ಕಪಿಲ್ ಸಿಬಲ್, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 22-11-1998

• ಹೆಲಿಕಾಪ್ಟರಿಗೆ ಜೀಪ್ ಡಿಕ್ಕಿ ಯತ್ನ: ದೇವೇಗೌಡರು ಪಾರು

ಜಬಲ್ಪುರ (ಮಧ್ಯಪ್ರದೇಶ), ನ. 21 (ಪಿಟಿಐ)– ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಕುಳಿತಿದ್ದ ಹೆಲಿಕಾಪ್ಟರ್ ನತ್ತ ಧಾವಿಸಿ ಬಂದ ಜೀಪೊಂದನ್ನು ಪೊಲೀಸರು ತಡೆದು, ಆಗಬಹುದಾದ ದುರಂತವನ್ನು ತಪ್ಪಿಸಿದ ಘಟನೆ ಇಲ್ಲಿ ನಡೆದಿದೆ.

ಷಾಹಡೋಲ್‌ನಲ್ಲಿನ ಚುನಾವಣಾ ಪ್ರಚಾರ ಸಭೆಗೆ ತೆರಳಲು ದೇವೇಗೌಡರು ಜನತಾದಳ ನಾಯಕರೊಂದಿಗೆ ಹೆಲಿಕಾಪ್ಟರ್ ನಲ್ಲಿ ಕುಳಿತಿದ್ದರು. ಚಾಲಕ ಹೆಲಿಕಾಪ್ಟರನ್ನು ಹೊರಡಿಸುವ ಸಿದ್ಧತೆಯಲ್ಲಿದ್ದಾಗ ಅನಿರೀಕ್ಷಿತವಾಗಿ ಜೀಪೊಂದು ಭಾರೀ ವೇಗದಲ್ಲಿ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆಯುವ ರೀತಿಯಲ್ಲಿ ಬಂತು. ಅದನ್ನು ಅರಿತ ಪೊಲೀಸರು ಜೀಪ್ ಮಾರ್ಗವನ್ನು ಬದಲಿಸಿದ್ದರಿಂದ ಅದು ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆಯುವುದು ತಪ್ಪಿತು.

• ಅತಿವೃಷ್ಟಿ ಹಾನಿ ಸಂತ್ರಸ್ತರಿಗೆ ಹತ್ತು ಸಾವಿರ ಆಶ್ರಯ ಮನೆ

ಬೆಂಗಳೂರು, ನ. 21– ರಾಜ್ಯದಲ್ಲಿ ಈ ವರ್ಷ ಕಟ್ಟಲು ಉದ್ದೇಶಿಸಿರುವ ಒಂದು ಲಕ್ಷ ಆಶ್ರಯ ಮನೆಗಳಲ್ಲಿ ಹತ್ತು ಸಾವಿರ ಮನೆಗಳನ್ನು ಉತ್ತರ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ ಆದ್ಯತೆ ಮೇಲೆ ಕಟ್ಟಿಸಿಕೊಡಲಾಗುವುದು ಎಂದು ವಸತಿ ಸಚಿವ ಎಚ್.ಡಿ.ರೇವಣ್ಣ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 22-11-1973

• ವಿಧಾನಸೌಧಕ್ಕೆ ನಡೆದೇ ಬರಲು ಅರಸು ಉದ್ದೇಶ

ಬೆಂಗಳೂರು, ನ. 21– ಪೆಟ್ರೋಲ್ ಪೂರೈಕೆ ಕೊರತೆಯನ್ನು ಗಮನಿಸಿ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು, ತಮ್ಮ ಅಧಿಕೃತ ನಿವಾಸದಿಂದ ವಿಧಾನಸೌಧಕ್ಕೆ ನಡೆದು ಬಂದು, ನಡೆದು ಮರಳುವ ಪರಿಪಾಟ ಆರಂಭಿಸುವ ಉದ್ದೇಶ ಹೊಂದಿದ್ದಾರೆ.

ಕುಮಾರಪಾರ್ಕ್‌ನಲ್ಲಿರುವ ನಿವಾಸದಿಂದ ವಿಧಾನಸೌಧಕ್ಕೆ ಇರುವ ದೂರ ಸುಮಾರು ಒಂದು ಮೈಲಿ. 'ಇನ್ನು ಮುಂದೆ ನಡೆದುಕೊಂಡೇ ಆ ದೂರವನ್ನು ಕ್ರಮಿಸಿ ನಾನು ಕಚೇರಿಗೆ ಬರಬಹುದು' ಎಂದು ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

• ಏರ್‌ಲೈನ್ಸ್ ಸಿಬ್ಬಂದಿ– ಆಡಳಿತದ ನಡುವೆ ಸಂಧಾನ ವಿಫಲ

ನವದೆಹಲಿ, ನ. 21– ವಿಮಾನ ಸಾರಿಗೆ ನೌಕರರ ಚಳವಳಿ ಅಂತ್ಯ ಕುರಿತು ಇಂಡಿಯನ್ ಏರ್‌ಲೈನ್ಸ್ ಆಡಳಿತ ವರ್ಗ ಮತ್ತು ಏರ್ ಕಾರ್ಪೊರೇಷನ್ ನೌಕರರ ಸಂಘದ ಪ್ರತಿನಿಧಿಗಳ ನಡುವೆ ಇಂದು ನಡೆದ ಸಂಧಾನ ಮಾತುಕತೆ ಮುರಿದುಬಿತ್ತು.

ರೈತರೇ ವಿದ್ಯುತ್ ಉತ್ಪಾದಕರಾದರೆ, ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ

ಸಾಧಿಸೋಣ ವಿದ್ಯುತ್ ಸ್ವಾವಲಂಬನೆ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

1974ರ ಆಸುಪಾಸು. ಶರಾವತಿ ವಿದ್ಯುದಾಗಾರವು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಪ್ರಾರಂಭಿಸಿತ್ತು. ಆಗ ವಿದ್ಯುತ್ತಿಗೆ ಬೇಡಿಕೆಯಿಲ್ಲದ ಕಾರಣಕ್ಕೆ, ಇಂಧನ ಇಲಾಖೆಯ ನೌಕರರು ಮನೆ ಮನೆಗೆ ತೆರಳಿ, ಅಡುಗೆ ಮಾಡಲು ವಿದ್ಯುತ್ ಒಲೆ, ಸ್ನಾನಕ್ಕೆ ವಿದ್ಯುತ್ ಹೀಟರ್ ಬಳಸಿ, ಇದರಿಂದ ಕಾಡು ಉಳಿಯುತ್ತದೆ ಎಂದು ದುಂಬಾಲು ಬೀಳುತ್ತಿದ್ದರು. ಅಂದರೆ, ವಿದ್ಯುತ್ ಬಳಕೆಗಿಂತ ಉತ್ಪಾದನೆಯೇ ಹೆಚ್ಚಿದ್ದ ಕಾಲವಾಗಿತ್ತು.

ವಿದ್ಯುತ್ ಎಂಬ ಮಾಯೆ ಬಲುಬೇಗ ಕಷ್ಟಜೀವಿಗಳನ್ನೂ ದಾಸರನ್ನಾಗಿ ಮಾಡಿಕೊಂಡಿತು. ಯಂತ್ರಗಳ ಆವಿಷ್ಕಾರ ಮತ್ತು ಅವುಗಳ ವ್ಯಾಪಕ ಬಳಕೆಗಾಗಿ ವಿದ್ಯುತ್ ಉತ್ಪಾದನೆ ಮಾಡುವ ಅನಿವಾರ್ಯ ಸರ್ಕಾರಗಳಿಗೆ ಬಂತು. ಅಣೆಕಟ್ಟು ಕಟ್ಟಿ, ಕಾಡನ್ನು ಮುಳುಗಿಸಿ ವಿದ್ಯುತ್ ಉತ್ಪಾದಿಸುವುದು ಅತ್ಯಂತ ಸುಲಭದ ಮಾರ್ಗವಾಗಿತ್ತು. ಇದಕ್ಕಾಗಿ ಕಾಳಿ, ಕಾವೇರಿ ನದಿಗಳಿಗೂ ಅಣೆಕಟ್ಟು ಕಟ್ಟಿ ಗಣನೀಯ ಪ್ರಮಾಣದ ನೈಸರ್ಗಿಕ ಅರಣ್ಯ ಪ್ರದೇಶವನ್ನು ಮುಳುಗಿಸಲಾಯಿತು. ಬೇಡಿಕೆ ಹೆಚ್ಚುತ್ತಿದ್ದಂತೆ ಇನ್ನಷ್ಟು ಮತ್ತಷ್ಟು ವಿದ್ಯುತ್‌ಗಾಗಿ ಉಷ್ಣವಿದ್ಯುತ್, ಅಣುವಿದ್ಯುತ್ ಸ್ಥಾವರಗಳು ತಲೆ ಎತ್ತಿದವು.

ಈ ಎರಡು ವಿಧಾನಗಳಿಂದ ವಿದ್ಯುತ್ ಉತ್ಪಾದನೆ ಮಾಡುವುದು ಆರ್ಥಿಕ ಲೆಕ್ಕಾಚಾರದಲ್ಲಿ ತುಂಬಾ ದುಬಾರಿ ಆಗುತ್ತದೆ. ಅಲ್ಲದೆ ಕರ್ನಾಟಕದಲ್ಲಿ ಕಲ್ಲಿದ್ದಲಿನ ನಿಕ್ಷೇಪ ಇಲ್ಲದಿರುವುದರಿಂದ, ಬಿಹಾರ ಮತ್ತು ಛತ್ತೀಸಗಢದಿಂದ ಕಲ್ಲಿದ್ದಲನ್ನು ತಂದು ರಾಯಚೂರಿನ ಸ್ಥಾವರದಲ್ಲಿ ಅದನ್ನು ಉರಿಸಿ, ವಿದ್ಯುತ್ ಉತ್ಪಾದಿಸಿ, ಸರಬರಾಜು ಮಾಡುತ್ತಿದ್ದೇವೆ. ಉಷ್ಣಸ್ಥಾವರಗಳಲ್ಲಿ ಉಪಯೋಗಿಸುವ ಕಲ್ಲಿದ್ದಲನ್ನು ತೊಳೆಯಲು ನೀರು ಬೇಕು. ಕಲ್ಲಿದ್ದಲನ್ನು ಸುಟ್ಟು, ನೀರನ್ನು ಕುದಿಸಿ, ಆ ಹಬೆಯಿಂದ ಟರ್ಬೈನ್ ತಿರುಗಿಸಿ ವಿದ್ಯುತ್ ಉತ್ಪಾದನೆ ಮಾಡಲು ವಿಪರೀತ ನೀರು ಬೇಕು. ಕಲ್ಲಿದ್ದಲನ್ನು ಸುಟ್ಟ ನಂತರದಲ್ಲಿ ಉಳಿಯುವ ಬೂದಿಯನ್ನು ಗಾಳಿಗೆ ಹಾರದಂತೆ ತಡೆಯಲು ಮತ್ತೆ ನೀರು ಬೇಕು. ಈ ಕಲುಷಿತ ನೀರು ಮತ್ತೆ ಅಂತರ್ಜಲವನ್ನು ಕಲುಷಿತಗೊಳಿಸುವ ಮೂಲವಾಗುತ್ತದೆ. ಇಷ್ಟೇ ಅಲ್ಲ, ಕಲ್ಲಿದ್ದಲು ಉಷ್ಣ ಸ್ಥಾವರಗಳ ಕ್ಷಮತೆಯೂ ತೀರಾ ಕಡಿಮೆಯಿದೆ. ಹಾಗೆಯೇ ಉತ್ಪಾದನೆಯಾದ ವಿದ್ಯುತ್ತನ್ನು ಸಾಗಣೆ ಮತ್ತು ವಿತರಣೆ ಮಾಡುವಲ್ಲಿಯೂ ವಿಪರೀತ ಸೋರಿಕೆಯಾಗುತ್ತದೆ. ನಮ್ಮಲ್ಲಿ ಈ ಪ್ರಮಾಣ ಶೇ 18ರಷ್ಟಿದೆ. ರಾಯಚೂರು, ಬಳ್ಳಾರಿ ಹಾಗೂ ಆಲಮಟ್ಟಿ ಸನಿಹದ ಉಷ್ಣವಿದ್ಯುತ್ ಸ್ಥಾವರಗಳಿಗೆ ಕೃಷ್ಣಾ ಮತ್ತು ತುಂಗಭದ್ರಾ ನದಿಯ ನೀರನ್ನು ಬಳಸಲಾಗುತ್ತದೆ. ಇದರಿಂದ ಬರ ಪ್ರದೇಶದ ಜನರ ಮೇಲೆ ಮತ್ತೆ ಬರೆ ಎಳೆದಂತೆ ಆಗುತ್ತಿದೆ. ಅಣು ವಿದ್ಯುತ್ ಸ್ಥಾವರದ್ದೂ ಹೆಚ್ಚುಕಡಿಮೆ ಇದೇ ಕತೆ.

ಈಗೀಗ ನವೀಕರಿಸಬಹುದಾದ ಇಂಧನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಅದರ ಫಲವಾಗಿ ಪಾವಗಡದಲ್ಲಿ ಸುಮಾರು 13 ಸಾವಿರ ಎಕರೆ ಕೃಷಿಭೂಮಿಯಲ್ಲಿ 2 ಸಾವಿರ ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕ ಕಾರ್ಯ ನಿರ್ವಹಿಸುತ್ತಿದೆ. ಇದು ಪರಿಸರಸ್ನೇಹಿ ವಿದ್ಯುತ್ ಉತ್ಪಾದನಾ ಕ್ರಮವೆಂದು ಮೇಲ್ನೋಟಕ್ಕೆ ತೋರಿದರೂ ಇಲ್ಲೂ ಕೆಲವು ಮಿತಿಗಳಿವೆ. ದೇಶದಲ್ಲಿ ಅತಿ ಹೆಚ್ಚಿನ ನೀರಿನ ಅಭಾವವಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನವಿದೆ. ಪಾವಗಡ ತಾಲ್ಲೂಕು ಲಾಗಾಯ್ತಿನಿಂದ ಬರದಿಂದ ಬಳಲುತ್ತಿದೆ. ಸಾವಿರಾರು ಎಕರೆಯಲ್ಲಿ ಹರಡಿಕೊಂಡಿರುವ ಸೌರವಿದ್ಯುತ್ ಫಲಕಗಳನ್ನು ತೊಳೆದು ಶುಚಿಗೊಳಿಸಲು ಮತ್ತಷ್ಟು ನೀರು ಬೇಕು. ರೈತರಿಗೆ ಹಾಗೂ ಕುಡಿಯುವ ನೀರಿಗೆ ತೀವ್ರ ಅಭಾವವಿರುವಾಗ ಈ ತರಹದ ಮೆಗಾ ಯೋಜನೆಗಳು ಅಪ್ರಸ್ತುತವಾಗಬೇಕಿತ್ತು. ಹಾಗಾಗದೆ, ಪಾವಗಡದಲ್ಲೇ ಮತ್ತೆ 500 ಮೆ.ವಾ. ಸಾಮರ್ಥ್ಯದ ಹೆಚ್ಚುವರಿ ಸೌರ ವಿದ್ಯುತ್ ಫಲಕ ಅಳವಡಿಸಲು 1,500 ಎಕರೆ ಪ್ರದೇಶವನ್ನು ಗುರುತಿಸಲಾಗಿದೆ.

ಹವಾಮಾನ ವೈಪರೀತ್ಯದಿಂದ ಆಗುತ್ತಿರುವ ಅಡ್ಡಪರಿಣಾಮಗಳು ಈಗಾಗಲೇ ನಮ್ಮ ಅನುಭವಕ್ಕೆ ಬಂದಿವೆ. ಈ ವಿಕೋಪಗಳಿಗೆ ಕಾಡು, ಜೀವವೈವಿಧ್ಯ ನೆಲೆ ನಾಶದಂತಹ ಕಾರಣಗಳ ಕೊಡುಗೆಯೂ ಉಂಟು. ಇರುವ ಅರಣ್ಯ ಪ್ರದೇಶವನ್ನು ಉಳಿಸುವ ಬದಲಿಗೆ ಅದನ್ನು ಮುಳುಗಿಸಿ ಜಲವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳಿಗೆ ಇನ್ನಾದರೂ ವಿದಾಯ ಹೇಳಬೇಕು.

ಗರಿಷ್ಠ ವಿದ್ಯುತ್ ಬಳಕೆಯ ಹೊತ್ತಿನಲ್ಲಿ ವಿದ್ಯುತ್ತನ್ನು ಸಮರ್ಪಕವಾಗಿ ಪೂರೈಸಲು ಕರ್ನಾಟಕ ವಿದ್ಯುತ್ ನಿಗಮ ಹೊಸ ಹೊಸ ದಾರಿಗಳನ್ನು ಹುಡುಕುತ್ತಿದೆ. ಇದಕ್ಕೆ ಅಂತರ್ಗತ ಜಲವಿದ್ಯುತ್ ಯೋಜನೆಯೆಂಬ ಹೆಸರನ್ನೂ ನೀಡಲಾಗಿದೆ. ಅಂದರೆ, ಒಮ್ಮೆ ಬಳಕೆಯಾದ ನೀರನ್ನು ಮತ್ತೆ ಹಿಂದಿನ ಅಣೆಕಟ್ಟಿಗೆ ಎತ್ತಿ ತರುವುದು ಮತ್ತು ಗರಿಷ್ಠ ಬೇಡಿಕೆಯಿರುವ ಹೊತ್ತಿಗೆ ಆ ನೀರನ್ನು ಉಪಯೋಗಿಸಿ ವಿದ್ಯುತ್ ಉತ್ಪಾದಿಸುವುದು. ಇದಕ್ಕಾಗಿ ಹಾಲಿ ಎರಡು ಸ್ಥಳಗಳನ್ನು ಗುರುತಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ಶರಾವತಿ ನದಿಯ ಗೇರುಸೊಪ್ಪೆ ಅಣೆಕಟ್ಟಿನಿಂದ ತಲಕಳಲೆ ಅಣೆಕಟ್ಟಿಗೆ ನೀರನ್ನು ಎತ್ತಿ ತಂದು, ಮತ್ತೆ ಅದನ್ನು ಹರಿಸಿ ವಿದ್ಯುತ್ ಉತ್ಪಾದನೆ ಮಾಡುವುದು. ಇದಕ್ಕಾಗಿ ಶರಾವತಿ ಸಿಂಗಳೀಕ ಅಭಯಾರಣ್ಯದ ಅತಿಸೂಕ್ಷ್ಮ ಪ್ರದೇಶದಲ್ಲಿ ಸುಮಾರು 800 ಎಕರೆ ದಟ್ಟಾರಣ್ಯ ನಾಶವಾಗಲಿದೆ. ಇದೇ ರೀತಿಯಲ್ಲಿ ವಾರಾಹಿ ನದಿಗೆ ಅಡ್ಡಲಾಗಿ ಇನ್ನೊಂದು ಅಣೆಕಟ್ಟನ್ನು ನಿರ್ಮಿಸುವ ಯೋಜನೆಯೂ ಮುನ್ನೆಲೆಗೆ ಬರುತ್ತಿದೆ. ಇದಕ್ಕಾಗಿ ಸೋಮೇಶ್ವರ ವನ್ಯಜೀವಿ ಅಭಯಾರಣ್ಯದ ದಟ್ಟಕಾಡು ನಾಶವಾಗಲಿದೆ.

ಅತ್ತ ಕಾವೇರಿ ನದಿಗೆ ಮೇಕೆದಾಟು ಪ್ರದೇಶದಲ್ಲಿ ಸಮಾನಾಂತರ ಅಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಯೂ ಸರ್ಕಾರದ ಮುಂದಿದೆ. ಈ ಯೋಜನೆ ಕೂಡ ಸುಮಾರು 11 ಸಾವಿರ ಎಕರೆ ಕಾಡನ್ನು ಆಪೋಶನ ತೆಗೆದುಕೊಳ್ಳಲಿದೆ. ಕಾಡಿನಲ್ಲಿ ವಾಸಿಸುವ ಅಷ್ಟೂ ವನ್ಯಜೀವಿಗಳು ನೆಲೆ ಕಳೆದುಕೊಂಡು ಅನಾಥವಾಗಲಿವೆ. ಇದರಿಂದ ಮಾನವ- ವನ್ಯಜೀವಿ ಸಂಘರ್ಷ ಮತ್ತಷ್ಟು ಹೆಚ್ಚಲಿದೆ.

ಕರ್ನಾಟಕದ ಭೌಗೋಳಿಕ ಪ್ರದೇಶದ ಸಿಂಹಪಾಲು (ಶೇ 64) ಕೃಷಿ ಚಟುವಟಿಕೆಗಳಿಗೆ ಮೀಸಲಾಗಿದೆ. ಈ ಬಾರಿ ಮಳೆಯ ತೀವ್ರ ಕೊರತೆಯಾಗಿದ್ದರಿಂದ ಅಕ್ಟೋಬರ್‌ನಲ್ಲೇ ವಿದ್ಯುತ್ ಬೇಡಿಕೆಯು 6 ಸಾವಿರ ಮೆ.ವಾ.ಗೂ ಹೆಚ್ಚಿಗೆ ಇತ್ತು. ರೈತರಿಗೆ ರಾತ್ರಿ ಹೊತ್ತು ವಿದ್ಯುತ್ ಪೂರೈಸುವ ಪರಿಪಾಟವನ್ನು ವಿದ್ಯುತ್ ನಿಗಮ ಇಟ್ಟುಕೊಂಡಿದೆ. ಹಾಸನ, ಮೂಡಿಗೆರೆ, ಚಿಕ್ಕಮಗಳೂರಿನಂಥ ಪ್ರದೇಶಗಳಲ್ಲಿ ರೈತರು ರಾತ್ರಿ ಹೊತ್ತು ಜಮೀನಿಗೆ ನೀರುಣಿಸಲು ಹೋಗುವುದು ತುಂಬಾ ಅಪಾಯಕಾರಿ. ವನ್ಯಜೀವಿ- ಮಾನವ ಸಂಘರ್ಷಕ್ಕೆ ಅದು ಎಡೆಮಾಡಿಕೊಡುತ್ತದೆ. ಹಾಗಾದರೆ ಸರ್ಕಾರದ ಮುಂದೆ ಇರುವ ಇತರ ಸುಲಭ ಸಾಧ್ಯತೆಗಳೇನು?

ಅದೇ ವಿಕೇಂದ್ರೀಕೃತ ಸೌರವಿದ್ಯುತ್ ಫಲಕಗಳನ್ನು ಅಳವಡಿಸುವುದು. ಸಾಮಾನ್ಯವಾಗಿ ಎಲ್ಲಾ ರೈತರು ತಮ್ಮ ಹೊಲಗಳಿಗೆ ನೀರು ಹಾಯಿಸಲು ವಿದ್ಯುತ್ ಸಂಪರ್ಕ ಪಡೆದಿದ್ದು, ಪಂಪ್‌ಹೌಸುಗಳನ್ನು ಹೊಂದಿರುತ್ತಾರೆ. ಹಾಲಿ ಇರುವ ಪಂಪ್‌ಹೌಸಿನ ಮೇಲೆಯೇ ಸೌರವಿದ್ಯುತ್ ಫಲಕಗಳನ್ನು ಅಳವಡಿಸಿಕೊಳ್ಳುವುದರಿಂದ, ರೈತರ ವಿದ್ಯುತ್ ಸಮಸ್ಯೆಯು ಒಂದು ಹಂತಕ್ಕೆ ಶಾಶ್ವತವಾಗಿ ಪರಿಹಾರವಾಗುತ್ತದೆ. ಯಾವ ರೈತರು ಸೌರವಿದ್ಯುತ್‌ಚಾಲಿತ ಪಂಪ್‌ಸೆಟ್‌ಗಳನ್ನು ಬಳಸುವರೋ ಅವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ 60ರಷ್ಟು ಸಬ್ಸಿಡಿ ನೀಡುತ್ತಿವೆ. ಈಗಿನ ಸೌರ ಫಲಕಗಳು 25 ವರ್ಷ ಬಾಳಿಕೆ ಬರುತ್ತವೆ. ಈ ರೀತಿ ಸೌರ ಫಲಕ ಅಳವಡಿಸಿಕೊಳ್ಳುವುದರಿಂದಾಗಿ ಲೋಡ್ ಶೆಡ್ಡಿಂಗ್ ಎಂಬ ಕಣ್ಣಾಮುಚ್ಚಾಲೆ ಆಟ ಇರುವುದಿಲ್ಲ, ಸಾಗಣೆ ಮತ್ತು ವಿತರಣೆ ಸೋರಿಕೆಯೂ ಇರುವುದಿಲ್ಲ. ಸೂರ್ಯನ ಬೆಳಕಿದ್ದಾಗಲೇ ವಿದ್ಯುತ್ ಉತ್ಪಾದನೆ ಆಗುವುದರಿಂದ, ರಾತ್ರಿ ವೇಳೆ ರೈತರು ಹೊಲ-ಗದ್ದೆಗಳಿಗೆ ಹೋಗುವ ಪ್ರಮೇಯ ಇರುವುದಿಲ್ಲ.

ದಿನದಲ್ಲಿ ಎರಡರಿಂದ ಮೂರು ತಾಸು ಸೌರ ವಿದ್ಯುತ್ ಉಪಯೋಗಿಸಿಕೊಂಡು, ಉಳಿದ ಸಮಯದಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ನಿಗಮಕ್ಕೆ ಮಾರುವುದರಿಂದ ರೈತರಿಗೆ ಹೆಚ್ಚುವರಿ ಹಣವೂ ಸಿಗುವಂತಾಗುತ್ತದೆ. ಮುಖ್ಯವಾಗಿ ಸರ್ಕಾರ ಹಾಗೂ ರೈತರ ನಡುವೆ ಅನವಶ್ಯಕ ಸಂಘರ್ಷ ತಪ್ಪುತ್ತದೆ.

ವಿದ್ಯುತ್ತಿನ ಅಸಮರ್ಪಕ ಪೂರೈಕೆಯ ಕಾರಣಕ್ಕೇ ವಿದ್ಯುತ್ ಮತ್ತು ನೀರು ಈ ಎರಡೂ ಪೋಲಾಗುವ ಸಾಧ್ಯತೆಯನ್ನು ಅನೇಕ ಕಡೆ ಕಾಣಬಹುದು. ಯಾವಾಗ ವಿದ್ಯುತ್ ಪೂರೈಕೆಯಾಗುತ್ತದೋ ಆಗ ಪಂಪ್ ತಾನೇ ತಾನಾಗಿ ಚಾಲೂ ಆಗಿ, ನೀರು ಹಾಯುತ್ತದೆ–ರೈತರ ಅನುಪಸ್ಥಿತಿಯಲ್ಲೂ. ಆ ರೀತಿ ಸ್ವಯಂಚಾಲಿತ ವ್ಯವಸ್ಥೆಯನ್ನು ರೈತರು ಮಾಡಿಕೊಂಡಿದ್ದಾರೆ. ಈ ಕ್ರಮದಿಂದ ಹಲವು ಬಾರಿ ಅಗತ್ಯಕ್ಕಿಂತಲೂ ಹೆಚ್ಚು ನೀರು ಹರಿಯುತ್ತದೆ. ರೈತರೇ ವಿದ್ಯುತ್ ಸ್ವಾವಲಂಬಿಗಳಾದಲ್ಲಿ ಹಲವು ಬಗೆಯ ಸಂಕಷ್ಟಗಳಿಂದ ಪಾರಾಗಬಹುದು ಮತ್ತು ವಿದ್ಯುತ್ ಹಾಗೂ ನೀರು ಪೋಲಾಗುವುದನ್ನು ತಡೆಯಬಹುದು.



ಚುರುಮುರಿ



ಅತಿಥಿ ದೇವೋ ಭವ...

• ಆನಂದ

'ಏನ್ ಗುರೂ, ಇಂಡಿಯಾ ಸೋಲ್ತಲ್ಲ...' ಎಂದು ಗೆಳೆಯ ಹಲುಬಿದ.

'ಆಟ ಅಂದಮೇಲೆ ಒಬ್ಬರು ಸೋಲಲೇಬೇಕು ಇನ್ನೊಬ್ಬರು ಗೆಲ್ತಾರೆ' ಎಂದೆ.

'ನೋಡು ಗುರು, ಆಸ್ಟ್ರೇಲಿಯಾ ಮೊದಲ ಪಂದ್ಯ ಸೋತು ಕೊನೇ ಪಂದ್ಯ ಗೆಲ್ತು. ನಮ್ಮವರದ್ದು ಉಲ್ಟಾ. ನಮ್ಮವರೇ ಮೊದಲ ಪಂದ್ಯ ಸೋತು ಕೊನೇ ಪಂದ್ಯ ಗೆಲ್ಲಬೇಕಿತ್ತು' ಎಂದ.

'ಆದರೆ ನಮ್ಮವರು ಮೊದಲನೇ ಪಂದ್ಯದಲ್ಲೇ ಸೋತಿದ್ದರೆ ಕೊನೆಯವರೆಗೂ ಹೇಗೆ ಬರ್ತಿದ್ದರು ಎಂಬುದಕ್ಕೆ ಏನು ಗ್ಯಾರಂಟಿ?'

'ಅಂದಹಾಗೆ ಈ ರಿಷಭ್ ಪಂತ್ ಕಾರಣ ಅಲ್ವಾ ಭಾರತ ಸೋಲೋದಕ್ಕೆ?' ಎಂದವನು ಕೇಳಿದಾಗ ನನಗೆ ಕೊಹ್ಲಿ ಮೊದಲನೆ ಬಾಲಿಗೇ ಬೌಲ್ಡ್ ಆದರೆ ಅನುಷ್ಕಾ ಹೇಗೆ ದಿಗ್ಭ್ರಾಂತಿಗೊಳ್ಳುತ್ತಾರೋ ಹಾಗೆ ಆಯಿತು.

'ಅಲ್ಲಯ್ಯಾ, ಪಂತ್ ಆಡ್ತಿಲ್ಲ. ಅವನು ಅಪಘಾತದಿಂದ ಪೂರ್ತಿ ಚೇತರಿಸಿಕೊಂಡೇ ಇಲ್ಲ. ಅವನ ಮೇಲೆ ಏಕೆ, ಹೇಗೆ ಗೂಬೆ ಕೂರಿಸುತ್ತೀಯ?' ಎಂದು ಸಾವರಿಸಿಕೊಂಡು ಕೇಳಿದೆ.

'ಪಂತ್ ಆಡ್ತಿಲ್ಲ ನಿಜ. ಆದರೆ ಬೆಳಿಗ್ಗೆ 4 ಗಂಟೆಗೆ ಆರ್ಕೆಸ್ಟ್ರಾ ಸಮೇತ ಹೋಗಿ ಗಲಭೆ ಮಾಡಿ, ನಿದ್ದೆ ಮಾಡ್ತಿದ್ದ ರೋಹಿತ್ ಶರ್ಮಾನ ಎಬ್ಬಿಸಿ ಪ್ರಾಕ್ಟೀಸ್ ಮಾಡೋದಿಕ್ಕೆ ಹೋಗು ಅಂತ ಕಳಿಸಿದರೆ ಡಿಸ್ಟರ್ಬ್ ಆಗದೇ? ಪಂತ್ ಏನು ನಾರಾಯಣ ಮೂರ್ತೀನೇ ವಾರಕ್ಕೆ 70 ತಾಸು ತರಹ ದುಡೀ ಅಂತ ಹೇಳೋದಿಕ್ಕೆ?'

'ಅಲ್ಲಯ್ಯಾ...'

'ಅದೇ ಪಂತ್, ತಂಡದವರು ಹೋಗ್ತಿದ್ದ ಬಸ್ಸನ್ನು 15 ಕಿ.ಮೀ. ಮೊದಲೇ ನಿಲ್ಲಿಸಿ, ಎಲ್ಲಾ ಇಲ್ಲಿಂದ ನಡೆಯಿರಿ, ಬಾಡಿ ವಾರ್ಮ್ ಅಪ್ ಆಗುತ್ತೆ ಅಂತ ಹೇಳಿ ಇಳಿಸಿದರೆ ಆಟಗಾರರಿಗೆ ದಣಿವಾಗೋಲ್ಲವೇ? ಅವರು ಹೇಗೆ ಒಳ್ಳೆ ಪ್ರದರ್ಶನ ನೀಡೋದಿಕ್ಕೆ ಸಾಧ್ಯ?' ಎಂದು ಕೇಳಿದಾಗ, ಸೋಲಿನಿಂದ ಇವನ ತಲೆ ಕೆಟ್ಟಿದೆ ಎಂದು ನನಗೆ ಗ್ಯಾರಂಟಿ ಆಯಿತು.

'ನೋಡಪ್ಪಾ, ಭಾರತದವರೇ ಪಂದ್ಯಾವಳಿ ನಡೆಸಿ ಅವರೇ ಗೆದ್ದರೆ ಏನು ಶೋಭೆ? ಅತಿಥಿ ದೇವೋ ಭವ. ಅದಕ್ಕೇ ಇನ್ನೊಂದು ಸ್ಟ್ರಾಂಗ್ ತಂಡಕ್ಕೆ ಕಪ್ ಬಿಟ್ಟುಕೊಟ್ಟಿದ್ದಾರೆ' ಎಂದು ಅವನನ್ನು ಬೀಳ್ಕೊಟ್ಟೆ.

ಸಂಗತ

ಮಕ್ಕಳಿಗೆಂದೂ ಮನೆಯೇ ಮಾದರಿ

ಮಕ್ಕಳಲ್ಲಿ ಜೀವಪರತೆ ಮತ್ತು ಜೀವನೋತ್ಸಾಹವನ್ನು ಮೂಡಿಸಲು ಮನೆ ಯಶಸ್ವಿಯಾದರೆ ಅದು ದೊಡ್ಡ ಗೆಲುವು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಶಾಲಾಕಾಲೇಜಿನ ಪೋಷಕರ ಸಭೆಯ ನಂತರ ಶಿಕ್ಷಕ ವಲಯದಲ್ಲಿ ವ್ಯಕ್ತವಾಗುವ ಅಭಿಪ್ರಾಯದಲ್ಲಿ ಸಾಮ್ಯತೆ ಇರುತ್ತದೆ. ಸಭೆಯಲ್ಲಿ ಕಲಿಕೆಗಿಂತಲೂ ಹೆಚ್ಚು ಚರ್ಚೆಗೆ ಒಳಗಾಗುತ್ತಿರುವುದು ಮಕ್ಕಳ ನಡವಳಿಕೆಯ ವಿಷಯ. ತಮ್ಮದೇ ಮನೆಮಕ್ಕಳು ಜವಾಬ್ದಾರಿ ಮರೆವ ರೀತಿ, ವರ್ತನೆಯಲ್ಲಿ ತೋರುತ್ತಿರುವ ಅನಾದರ, ಅಗೌರವದ ಬಗೆಗಿನ ಬಹುತೇಕ ಪೋಷಕರ ಅಳಲು, ಆತಂಕವನ್ನು ಸೂಕ್ಷ್ಮವಾಗಿ ಗ್ರಹಿಸಬೇಕು. ಅಪಾರ ಕಾಳಜಿಯಿಂದ, ಜೀವಿತದುದ್ದಕ್ಕೂ ನಿದ್ದೆಗೆಟ್ಟು, ಅನ್ನನೀರು ಬಿಟ್ಟು ಸಾಕಿ ಸಲಹಿ, ಅಷ್ಟಿಷ್ಟು ಸಂಪಾದಿಸಿದುದರ ಶ್ರಮವ ನೆನೆಯದೆ, ಮೌಲ್ಯವನ್ನರಿಯದೆ ಹೋಗುತ್ತಿರುವ ಪರಿಯೇ ಅವರ ಅಚ್ಚರಿ.

ಬುದ್ಧಿಮಾತು ಹೇಳುವುದು ಹಾಗಿರಲಿ, ತಾವು ಬಯಸಿದ್ದನ್ನು ಆ ಹೊತ್ತಿಗೇ ದಕ್ಕಿಸಿಕೊಳ್ಳಲು ರಚ್ಚೆ ಹಿಡಿಯುವ ತಮ್ಮದೇ ಮಕ್ಕಳೆದುರು ಮಂಡಿಯೂರಬೇಕಾದ ಅಸಹಾಯಕ ಪರಿಸ್ಥಿತಿ ಹೆತ್ತವರದು. ಅನುಕೂಲಸ್ಥ ಕುಟುಂಬಗಳ ಗೋಳು ಇನ್ನೂ ಹೆಚ್ಚಿನದು.

ಮಕ್ಕಳ ಅಸಹಜ ವರ್ತನೆಗೆ ಕಾರಣವೂ ಸ್ಪಷ್ಟ. ಸರಳ, ಸಂತೃಪ್ತ ಜೀವನಶೈಲಿ, ಮಾನವೀಯ ಮೌಲ್ಯಗಳನ್ನು ಮರೆತು ದುಡ್ಡಿನ ಹಿಂದೆ ದಿಕ್ಕೆಟ್ಟು ಓಡುವ ಜನಮನದಲ್ಲಿ ಬೇರೂರಿದ ಧನದಾಹ, ಯಾಂತ್ರಿಕ ಜೀವನಕ್ರಮವು ಬಾಂಧವ್ಯದ ತಂತುವನ್ನು ಸಡಿಲಗೊಳಿಸುತ್ತಿದೆ. ಅನಿವಾರ್ಯ ಎಂಬಂತೆ ಎಳವೆಯಲ್ಲೇ ಮಕ್ಕಳನ್ನು ಕಾನ್ವೆಂಟ್ ಸಂಸ್ಕೃತಿಗೆ ತಳ್ಳಿ, ಮೆರಿಟ್ಟು-ರ‍್ಯಾಂಕ್, ನೀಟ್, ಜೆಇಇ ಎಂಬ ಭ್ರಮೆಯಲ್ಲಿ ಅಪರಿಮಿತ ಒತ್ತಡ ಹೇರುತ್ತಾ, ಮಕ್ಕಳನ್ನೂ ಯಾಂತ್ರಿಕ ಬದುಕಿಗೆ ನೂಕುತ್ತಿರುವ ಮತಿಭ್ರಾಂತ ಸನ್ನಿವೇಶ ಇಂದಿನದು. ಯಂತ್ರಗಳೇ ನಮ್ಮನ್ನಾಳುತ್ತಿರುವ ಡಿಜಿಟಲ್ ಯುಗ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಮರುಳಲ್ಲಿ ತೇಲುತ್ತಿರುವ ನಾವು ಬಾಯಿಮಾತಿಗಷ್ಟೇ ದೇಶಭಕ್ತರು. ಸಹಜತೆ, ಮುಕ್ತತೆ ಮರೆಯಾಗಿ ಪ್ರೀತಿ, ವಿಶ್ವಾಸದ ಜಾಗದಲ್ಲೀಗ ಸ್ವಾರ್ಥ, ಪ್ರತಿಷ್ಠೆಗಳ ಮೆರೆದಾಟವಿದೆ. ಮಕ್ಕಳಿಗೆ ನೆಲದ ನಂಟನ್ನೂ ಕೂಡುಕುಟುಂಬದ ಒಡನಾಟವನ್ನೂ ವಂಚಿಸಿದ ಹೆತ್ತವರದು ಸ್ವಯಂಕೃತ ಅಪರಾಧವೂ ಹೌದು. ಹಾಗಾಗಿಯೇ, ಮಕ್ಕಳನ್ನು ತಿದ್ದಿತೀಡಿ ಪೊರೆಯಬೇಕಾದ ಕುಟುಂಬಗಳು ತಮ್ಮ ವೈಭವ ಹಾಗಿರಲಿ ಸಹಜ ಗುಣಚೈತನ್ಯವನ್ನೂ ಕಳೆದುಕೊಂಡು ನಿತ್ರಾಣಗೊಳ್ಳುತ್ತಿರುವುದು.

ಖಲೀಲ್ ಗಿಬ್ರಾನ್ ಹೇಳುವಂತೆ 'ಬಿಲ್ಲು ಬಾಗಿದಷ್ಟೂ ಬಾಣ ಮುಂದೆ ಹೋಗುತ್ತದೆ...' ಆರೋಗ್ಯಕರ ಅಭ್ಯಾಸ- ಹವ್ಯಾಸಗಳಿಗೆ ಮೊದಲ ಪ್ರೇರಣೆ, ಪೋಷಣೆ ದೊರಕಬೇಕಾದದ್ದು ಮನೆ ಮಂದಿಯಿಂದಲೇ. ಮೊಬೈಲ್ ಫೋನ್, ಟಿ.ವಿ. ರಿಮೋಟುಗಳನ್ನು ತಾವು ಹಿಡಿದುಕೊಂಡು, ಮಕ್ಕಳ ಕೈಲಿ ಪುಸ್ತಕವಿರಲಿ ಎಂದು ಬಯಸುವುದು ನಿರರ್ಥಕ. ಮಕ್ಕಳಿಗೆ ಸಂಸ್ಕಾರ, ಹೊಣೆಗಾರಿಕೆ ಮತ್ತು ಆತ್ಮವಿಶ್ವಾಸವನ್ನು ಬಿತ್ತಬೇಕಾದ ಮೊದಲ ಪ್ರಶಸ್ತ ಜಾಗವೇ ಮನೆ. ಬಾಂಧವ್ಯದ ಹಿಗ್ಗು ಮತ್ತು ಗುರುಹಿರಿಯರೆಡೆಗಿನ ಸನ್ನಡತೆಯ ಮಾದರಿಗಳು ಒಡಮೂಡಬೇಕಾದದ್ದು ಅಲ್ಲಿಯೇ. ಹಾಗಾಗಿ, ಬಂಧುಮಿತ್ರರ ಮನೆಗಳಿಗೆ ಪರಸ್ಪರ ಭೇಟಿ ನೀಡುವ, ಆ ಕುಟುಂಬಗಳೊಟ್ಟಿಗೆ ಆಗಾಗ ಕೂಡಿ ಕಲೆಯುವ ಪರಿಪಾಟವನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಮನೆಯ ಹೊಸ್ತಿಲಿಗೆ ಬಂದುನಿಂತ ಅತಿಥಿಗಳನ್ನು ಒಳಕರೆದು ಸತ್ಕರಿಸುವ ನಡೆನುಡಿಗಳು ಇಂದಿನ ಮಕ್ಕಳಲ್ಲಿ ಮಾಯವಾಗಿರುವುದರ ಬಗ್ಗೆ ಹಿರಿಯರಲ್ಲಿನ ಕಳವಳಕ್ಕೂ ಪರಿಹಾರ ಹುಡುಕಿಕೊಳ್ಳಬೇಕು.

ಎಟಿಎಂನಿಂದ ದುಡ್ಡು ಬರುತ್ತದೆ, ಗೂಗಲ್‌ನಲ್ಲಿ ಪಾಠ ಕಲಿತರಾಯ್ತು ಅಂದುಕೊಳ್ಳುವ ಮಕ್ಕಳಿಗೆ ಭೌತಿಕ ಉಪಸ್ಥಿತಿಯ ಅರಿವು ಮೂಡಿಸಬೇಕಿದೆ. ಮೊಬೈಲು, ಟಿ.ವಿ. ಗೀಳಿನಿಂದಾಗಿ ತಮ್ಮದೇ ಲೋಕದಲ್ಲಿ ವಿಹರಿಸುವ ಮಕ್ಕಳಿಗೆ ಬಾಂಧವ್ಯದ ಹಂಗಿಲ್ಲ. ಬೆರಳ ತುದಿಯಲ್ಲಿ ಬ್ರಹ್ಮಾಂಡವೇ ಕಾಣಸಿಗುತ್ತಿರುವ ಸಂದರ್ಭದಲ್ಲಿ ತರಗತಿ ಕಲಿಕೆ ಸಪ್ಪೆಯಾಗುವ ಅಪಾಯವಿದೆ. ಮಕ್ಕಳು ಸಹಪಠ್ಯ ಚಟುವಟಿಕೆ, ಆರೋಗ್ಯಕರ ಹವ್ಯಾಸಗಳನ್ನು ಹಚ್ಚಿಕೊಳ್ಳಲು ನೆರವಾಗಬೇಕು.

ಅಗಾಧ ಸಾಮರ್ಥ್ಯ, ಅವಕಾಶಗಳೊಟ್ಟಿಗೆ ಹುಟ್ಟಿ ಬರುವ ಮಕ್ಕಳು ಮುಂದೆ ತಮ್ಮ ಆಶಯ, ನಿರೀಕ್ಷೆಯ ಬದುಕು ಕಟ್ಟಿಕೊಳ್ಳುವ ಅಭಿಲಾಷೆಗೆ ನಿಯಂತ್ರಣ ಯಾಕೆ? ಮಕ್ಕಳನ್ನು ಚೆನ್ನಾಗಿ ಸಾಕಿ, ವಿಶಾಲ ಸಾಧ್ಯತೆಗಳನ್ನು ಅವರಿಗೇ ಬಿಟ್ಟು, ಬಾಳ್ವೆಗೆ ಬೇಕಿರುವ ಕೌಶಲ, ಅರಿವು, ವ್ಯಕ್ತಿತ್ವವನ್ನು ಕರುಣಿಸಬೇಕು. ಬದುಕಿನ ಸಾರ್ಥಕತೆಗೆ ಅಷ್ಟು ಸಾಕು.



ಜೀವಮಾನವಿಡೀ ತಾವು ಸಂಪತ್ತಿನ ಕ್ರೋಡೀಕರಣವನ್ನೇ ವ್ರತದಂತೆ ಆಚರಿಸುತ್ತಾ ಹೋದರೆ ಎಳೆಯ ಕುಡಿಗಳಿಗೆ ಬದುಕಿನ ಅರ್ಥ ತಿಳಿಯುವುದಾದರೂ ಹೇಗೆ? ಜೀವದಯೆ, ಮನುಷ್ಯಪ್ರೀತಿ, ಸಮತೆ, ಸೋದರತೆಯನ್ನು ಬದುಕಲ್ಲಿ ಬಾಳಿಸಿಕೊಳ್ಳದಿದ್ದರೆ ಕಷ್ಟ. ನಾಳೆಗಳು ಸಹನೀಯವಾಗಿ ಉಳಿಯಬೇಕೆಂದರೆ ಸಹನೆ, ಸರಳತೆಯೆಂಬ ಸಾತ್ವಿಕ ಬದುಕಿನ ತಾತ್ವಿಕ ಸೆಲೆಯು ಎದೆಯೊಳಗೆ ಬತ್ತಕೂಡದು. ಹಾಗೆಯೇ ಉದಾತ್ತ ಚಿಂತನೆಗಳನ್ನು ಮಾತಿನಲ್ಲಷ್ಟೇ ಅಲ್ಲದೆ ಕೃತಿಯಲ್ಲಿಯೂ ಬಾಳುವ ಧೈರ್ಯವನ್ನೂ ಬೆಂಬಲಿಸುವ ಔದಾರ್ಯವನ್ನೂ ತೋರುವುದು ಮುಖ್ಯ. ಬೆಳಕಿನ ಬೀಜಗಳಂತೆ ಬೆಳೆವ ಮಕ್ಕಳು ತಾಜಾ ಪರಿಸರದ ಗಾಳಿ, ನೀರು ಹೀರಿ ಬೆಳೆಯಬೇಕು, ಹೊಳೆಯಬೇಕು.

ವಿಶ್ವಮಾನವರಾಗಿ ಹುಟ್ಟುವ ಮಕ್ಕಳನ್ನು ಸಂಕುಚಿತತೆಯಿಂದ ಮುಕ್ತಗೊಳಿಸುವುದು ಮತ್ತು ಮಾನವಶ್ರೇಷ್ಠತೆಯ ಉದಾತ್ತ ಚಿಂತನೆಗಳತ್ತ ಮನೆಯೇ ದಾರಿತೋರಲಿ. ಮಕ್ಕಳಲ್ಲಿ ಜೀವಪರತೆ ಮತ್ತು ಜೀವನೋತ್ಸಾಹವನ್ನು ಮೂಡಿಸಲು ಮನೆ ಯಶಸ್ವಿಯಾದರೆ ಅದು ದೊಡ್ಡ ಗೆಲುವು. ಮುಂದಿನದು ಸನ್ನಿವೇಶ ಪ್ರೇರಿತ ಬದುಕು-ಬೆಳವಣಿಗೆ.

ವಾಚಕರ ವಾಣಿ

ಪಾಳೆಗಾರಿಕೆ ಗುಣದ ಬಲಾಢ್ಯರು

'ಒತ್ತುವರಿ ಮಾಡಿಕೊಂಡ ಜಾಗದಲ್ಲಿ ಮಾಲ್ ನಿರ್ಮಿಸಲಾಗಿದೆ, ಅನ್ಯರ ಜಾಗ ಕಬಳಿಸಿ ತೋಟ ಮಾಡಲಾಗಿದೆ' ಎಂಬ ರಾಜಕಾರಣಿಗಳ ಪರಸ್ಪರ ಮೂದಲಿಕೆ ಆಟದ ಕುರಿತಾಗಿ 'ಎಲ್ಲರ ಬಣ್ಣ ಬಯಲಾಗಲಿ' ಎಂಬ ಶೀರ್ಷಿಕೆಯಡಿ ರೋಹಿತ್ ಸಿಂಹ ಅವರ ಟ್ವೀಟ್ ಪ್ರಕಟವಾಗಿರುವುದು (ಪ್ರ.ವಾ., ನ. 21) ಸರಿಯಷ್ಟೆ. ಆದರೆ ಇಂತಹ ಸಾಮಾಜಿಕ ಕಳಕಳಿ ವೃಥಾ ವ್ಯರ್ಥಾಲಾಪವಷ್ಟೆ! ಈ ಬಗೆಯ ಆರೋಪ, ಪ್ರತ್ಯಾರೋಪಗಳು ರಾಜಕಾರಣಿಗಳಿಗೆ ಹೊಸವಲ್ಲ. ಸಂವಿಧಾನದ ಪರಿಧಿಯಲ್ಲಿ ಇಂತಹವುಗಳಿಗೆ ಕಡಿವಾಣ ಹಾಕುವ ಅಂಶಗಳು ವಿಪುಲವಾಗಿ ಇವೆಯಾದರೂ ಅವು ಯಾವುವೂ ಅಷ್ಟು ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಏಕೆಂದರೆ, ಕಾನೂನುರೀತ್ಯಾ ಆ ವಿಷಯವಾಗಿ ನಿಷ್ಕರ್ಷೆ ಮಾಡಲು ಹಾಸುಗಂಬಳಿ ಬಲು ಸುದೀರ್ಘವಾಗಿರುವುದೇ ಕಾರಣ! ಏತನ್ಮಧ್ಯೆ ಒತ್ತುವರಿ, ಕಬಳಿಕೆಯು ಅವ್ಯಾಹತವಾಗಿ ನಡೆಯುತ್ತಲೇ ಇರುತ್ತದೆ.

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಂದುದೇ ಸರ್ವಾಧಿಕಾರದ ಧೋರಣೆಯಿದ್ದ ರಾಜಪ್ರಭುತ್ವ ಮತ್ತು ಪಾಳೆಗಾರಿಕೆಯ ಹಿನ್ನೆಲೆಯಿಂದ. ಹಾಗಾಗಿ, ಇಂದಿನ ರಾಜಕಾರಣಿಗಳು ಆ ಗುಣಗಳನ್ನು ಅರಿತೋ ಅರಿವಿಲ್ಲದೆಯೋ ಮೈಗೂಡಿಸಿಕೊಂಡಿರುವುದರಿಂದ, ಇಂತಹ ಒತ್ತುವರಿಗಳು ನಡೆಯುತ್ತಿರುತ್ತವೆ. ಈ ಗುಣ ಬರೀ ರಾಜಕಾರಣಿಗಳಿಗೆ ಸೀಮಿತವಲ್ಲ, ಇತರ ಬಲಾಢ್ಯ ವ್ಯಕ್ತಿಗಳು, ಸಂಘ ಸಂಸ್ಥೆಗಳಿಗೂ ಹಬ್ಬಿರಬಹುದು. ಇದು ಎಲ್ಲರಿಗೂ ತಿಳಿದಿದೆಯಾದರೂ ಬೆಕ್ಕಿಗೆ ಗಂಟೆ ಕಟ್ಟುವವರಾರು?! ಸಂವಿಧಾನವೇ, ಸಂವಿಧಾನಾತ್ಮಕ ಸಂಸ್ಥೆಗಳೇ, ಚುನಾವಣಾ ಆಯೋಗವೇ ಅಥವಾ ನ್ಯಾಯಾಲಯಗಳೇ?

ರಮೇಶ್, ಬೆಂಗಳೂರು

ಕಾಡು ಕಾಯುವವರು ಕಚೇರಿ ಸೇರಿದರೆ...

ಅರಣ್ಯ ಕಾಪಾಡಲು ಮನಸ್ಸಿಲ್ಲದ ಐಎಫ್‌ಎಸ್ ಅಧಿಕಾರಿಗಳು ಮೂಲ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಬದಲಾಗಿ, ರಾಜಧಾನಿ ಬೆಂಗಳೂರಿನಲ್ಲಿ ಬೇರೂರಿ, ನಿಗಮ, ಮಂಡಳಿಗಳ ಆಡಳಿತಾತ್ಮಕ ಹುದ್ದೆಗಳಿಗೇ ಮುಗಿಬಿದ್ದಿರುವುದು ವರದಿಯಾಗಿದೆ (ಪ್ರ.ವಾ., ನ. 21). ಇಲಾಖೆಯ ಹುದ್ದೆಗಳಲ್ಲಿ ಇದ್ದು ಎಲ್ಲ ವರ್ಗದ ಸಿಬ್ಬಂದಿಗೆ ಉತ್ತೇಜನ ನೀಡಬೇಕಾದ ಹಿರಿಯ ಅಧಿಕಾರಿಗಳೇ ಈ ರೀತಿ ಕರ್ತವ್ಯ ವಂಚನೆ ಎಸಗುವುದು ಅನ್ಯಾಯವಲ್ಲವೇ? ಕಾಡು ಕಾಯುವ ಅಧಿಕಾರಿಗಳು ಕಚೇರಿ ಸೇರಿದರೆ ಹೇಗೆ ಎಂಬ ಪ್ರಶ್ನೆ ಪರಿಸರಪ್ರೇಮಿಗಳು ಹಾಗೂ ಸಾರ್ವಜನಿಕರದು.

ಆಯಕಟ್ಟಿನ ಜಾಗಗಳಲ್ಲಿ ಕುಳಿತುಕೊಂಡು ಲಾಬಿ ನಡೆಸುತ್ತಿರುವ ಈ ಅಧಿಕಾರಿಗಳನ್ನು ಅರಣ್ಯ ಇಲಾಖೆಗೇ ವಾಪಸು ಕಳಿಸಬೇಕು. ಅರಣ್ಯ ರಕ್ಷಣೆಗೆ, ಅಭಿವೃದ್ಧಿಗೆ ಅವರ ಸೇವೆ ಬಳಕೆಯಾಗುವಂತೆ ಮಾಡಬೇಕು.

ಆರ್.ಶಿವರಾಮ್, ಸಂಡೂರು

ಪೂಜಾರಿಗಳ ಬದುಕಿಗಿದೆ ಹಲವು ಮಾರ್ಗ

ಕಾಣಿಕೆ ಹುಂಡಿಗಳು ಇಲ್ಲದಿದ್ದರೆ ದೇಗುಲದಲ್ಲಿ ಪೂಜಾರಿಗಳು ಇರುವುದಿಲ್ಲ ಎಂಬ ಮಹಾರಾಷ್ಟ್ರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್ ಅವರ ಹೇಳಿಕೆ (ಪ್ರ.ವಾ., ನ. 21) ಸರಿಯಲ್ಲ. ಸರಿಯಾಗಿ ಸಂಬಳ ಕೊಟ್ಟರೆ ಪೂಜಾರಿಗಳು ಅರ್ಚಕತ್ವಕ್ಕೆ ಬಂದೇಬರುತ್ತಾರೆ. ಅಲ್ಲದೆ ಕಾಣಿಕೆ ಹುಂಡಿಗಳಿರುವುದು ದೇವಸ್ಥಾನದ ಉದ್ಧಾರಕ್ಕೆ. ಅಂದರೆ, ಕಟ್ಟಡಕ್ಕೆ ಬಣ್ಣ ಬಳಿಯುವ ಹಾಗೂ ಸಣ್ಣಪುಟ್ಟ ಕೆಲಸಗಳಿಗೆ ಬಳಸಿಕೊಳ್ಳಲು ಮಾತ್ರ.

ರಾಜಕೀಯ ವ್ಯಕ್ತಿಗಳಿಗೆ ರಾಜಕೀಯ ಮಾಡುವುದಷ್ಟೇ ಗೊತ್ತು. ಪೂಜಾರಿಗಳು ಮಂತ್ರವಿದ್ಯೆಯಲ್ಲಿ ಪಾರಂಗತರಾಗಿರುವುದರಿಂದ ಶಾಸ್ತ್ರ ಹೇಳುವುದು, ಪೌರೋಹಿತ್ಯ, ಪೂಜಾ ವಿಧಿಗಳನ್ನು ಮಾಡುವಂತಹ ಹಲವು ಮಾರ್ಗಗಳು ಅವರಿಗೆ ಇರುತ್ತವೆ ಎಂಬುದನ್ನು ಅರಿಯಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಗ್ರಂಥಾಲಯ ಕರ ಸದ್ಬಳಕೆಯಾಗಲಿ

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ (ನ. 14–20) ಸಂದರ್ಭದಲ್ಲಿ ಪು.ಸೂ.ಲಕ್ಷ್ಮೀನಾರಾಯಣ ರಾವ್ (ಚರ್ಚೆ, ನ. 20) ಮತ್ತು ಬಿ.ಆರ್.ಸತ್ಯನಾರಾಯಣ (ಚರ್ಚೆ, ನ. 21) ಅವರು ಗ್ರಂಥಾಲಯ ಕಾಳಜಿಯಿಂದ ಬರೆದ ಲೇಖನಗಳು ಸರಿಯಾಗಿವೆ. ನಾನು ಸಹ ನಮ್ಮೂರಿನಲ್ಲಿ ಒಂದು ಖಾಸಗಿ, ವಿಶಿಷ್ಟ, ಉಚಿತ ಗ್ರಂಥಾಲಯ ನಡೆಸುತ್ತಿದ್ದೇನೆ. ಈ ನನ್ನ ಅನುಭವದಲ್ಲಿ ಹೇಳಬಯಸುವುದೇನೆಂದರೆ, ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಿಂದ ಗ್ರಂಥಾಲಯ ಕರವನ್ನು ಸ್ವೀಕರಿಸುತ್ತವೆ. ಈ ಹಣವೇ ಕೋಟ್ಯಂತರ ರೂಪಾಯಿ ಆಗುತ್ತದೆ. ಆದರೆ ಗ್ರಾಮೀಣ ಪ್ರದೇಶದ ಗ್ರಂಥಾಲಯಗಳಿಗೆ ಸರಬರಾಜು ಮಾಡುವ ದಿನಪತ್ರಿಕೆ ಮತ್ತು ನಿಯತಕಾಲಿಕಗಳ ತಿಂಗಳ ಮೊತ್ತವನ್ನು ಮಾತ್ರ ಸಕಾಲದಲ್ಲಿ ನೀಡುವುದಿಲ್ಲ! ಪತ್ರಿಕಾ ಸರಬರಾಜಿನ ತಿಂಗಳ ಮೊತ್ತವನ್ನು ಆರು ತಿಂಗಳಿಗೊಮ್ಮೆ ನೀಡುತ್ತವೆ, ಅದೂ ಬಹಳಷ್ಟು ಸತಾಯಿಸಿದ ಬಳಿಕ. ಹೀಗಾದಾಗ ಪತ್ರಿಕೆ ಸರಬರಾಜು ಮಾಡುವ ಪತ್ರಿಕಾ ಮಾರಾಟ ಪ್ರತಿನಿಧಿಗಳಿಗೆ ತುಂಬಾ ತೊಂದರೆ ಆಗುತ್ತದೆ. ಒಮ್ಮೊಮ್ಮೆ ಪತ್ರಿಕೆಗಳ ಸರಬರಾಜು ನಿಂತುಹೋಗಿ, ಸಾರ್ವಜನಿಕ ಗ್ರಂಥಾಲಯಗಳ ನಿತ್ಯ ಓದುಗರಿಗೆ ತೊಂದರೆಯಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿರುವ ಯುವ ಉದ್ಯೋಗಾಕಾಂಕ್ಷಿಗಳಿಗೂ ಹೇಳತೀರದ ತೊಂದರೆ ಆಗುತ್ತದೆ.

ಸಾರ್ವಜನಿಕರಿಂದ ಕರದ ರೂಪದಲ್ಲಿ ಸ್ವೀಕರಿಸಿದ ಗ್ರಂಥಾಲಯ ತೆರಿಗೆಯ ಹಣ ಕೋಟ್ಯಂತರ ರೂಪಾಯಿ ಇದ್ದರೂ ಈ ಸಮಸ್ಯೆ ಏಕೆ ಉದ್ಭವಿಸುತ್ತದೆಯೋ ಅರ್ಥವಾಗುತ್ತಿಲ್ಲ. ಗ್ರಂಥಾಲಯ ಇಲಾಖೆ ಈ ಕುರಿತು ಗಮನಹರಿಸದಿರುವುದು ಸರಿಯಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಆಟಗಾರರಿಗೆ ನೀಡಬೇಕಿದೆ ನೈತಿಕ ಬೆಂಬಲ

ವಿಶ್ವಕಪ್ ನಮ್ಮ ಕೈತಪ್ಪಿದರೆ ಏನಾಯಿತು? ನಮ್ಮ ಆಟಗಾರರು ಬರೋಬ್ಬರಿ ಹತ್ತೂ ಪಂದ್ಯಗಳಲ್ಲಿ ಎದುರಾಳಿ ತಂಡಗಳನ್ನು ಸೋಲಿಸಿರುವುದನ್ನು ಮರೆಯಬಾರದು. ಒಂದೊಂದು ಪಂದ್ಯವನ್ನು ಗೆದ್ದಾಗಲೂ ನಾವು ಭಾರತೀಯರು ಸಂಭ್ರಮಿಸಿದ್ದೇವೆ, ಕುಣಿದು ಕುಪ್ಪಳಿಸಿದ್ದೇವೆ, ಆನಂದಿಸಿದ್ದೇವೆ. ಆಗ ನಮಗೆ ಅವರು ದೇವರಾಗಿಯೋ ಹೀರೊಗಳಾಗಿಯೋ ಕಂಡದ್ದು ಸುಳ್ಳಲ್ಲ. ಒಂದೇ ಒಂದು ಪಂದ್ಯವನ್ನು ಅವರು ಸೋತ ಮಾತ್ರಕ್ಕೆ ಅವರನ್ನು ಖಳನಾಯಕರನ್ನಾಗಿ ಮಾಡಿ ನಮ್ಮ ಸಣ್ಣತನವನ್ನು ತೋರಿಸುವುದು ಬೇಡ. ಗೆದ್ದಾಗ ಆಟಗಾರರನ್ನು ಹೊಗಳುವುದರಲ್ಲಿ ಏನೇನೂ ಹೆಚ್ಚುಗಾರಿಕೆಯಿಲ್ಲ. ಬದಲಿಗೆ, ಸೋತಾಗ ಅವರಿಗೆ ನೈತಿಕ ಬೆಂಬಲವನ್ನು ನೀಡುವ ದೊಡ್ಡತನವನ್ನು ನಾವು ಮೆರೆಯಬೇಕಿದೆ. ಎಷ್ಟೇ ಆದರೂ ಅವರು ನಮ್ಮ ಹೆಮ್ಮೆಯ ಆಟಗಾರರು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶೇ 48ರಷ್ಟು ಉದ್ಯೋಗ ಹೆಣ್ಣಿಗೆ ಸಿಗಲಿ

• ಡಾ. ಎಚ್. ಎಸ್. ಅನುಪಮಾ



ಹೆಣ್ಣೆಂಬ ಕಾರಣಕ್ಕೆ ಮಹಿಳೆಯರು ಎದುರಿಸುತ್ತಿರುವುದು ಆದಿಮ ತಾರತಮ್ಯ. ಅದರಲ್ಲೂ ಕರ್ನಾಟಕದ ಮಹಿಳೆಯರು ಹಲವು ನೆಲೆಗಳಿಂದ ಅವಕಾಶವಂಚಿತರು. ಅವರು ಎದುರಿಸುವ ತಾರತಮ್ಯಗಳೂ ಒಂದೇ ಪ್ರಕಾರವಾಗಿಲ್ಲ. ದಲಿತ, ಆದಿವಾಸಿ, ಧಾರ್ಮಿಕ ಅಲ್ಪಸಂಖ್ಯಾತ, ಅಸಂಘಟಿತ ಕಾರ್ಮಿಕ, ಗ್ರಾಮೀಣ, ನಿರುದ್ಯೋಗಿ ಮಹಿಳೆಯರ ಸಂಕಟಗಳನ್ನು ಏಕಾಕಾರವಾಗಿ ನೋಡಲು ಸಾಧ್ಯವಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡೇ ಸಾವಿರಾರು ವರ್ಷಗಳಿಂದ ಅನೂಚಾನವಾಗಿ ನಡೆಯುತ್ತಿರುವ ತಾರತಮ್ಯವನ್ನು 25 ವರ್ಷಗಳಲ್ಲಿ ಆಡಳಿತಾತ್ಮಕ ಕ್ರಮಗಳ ಮೂಲಕ ಸ್ವಲ್ಪವಾದರೂ ನಿವಾರಿಸುವುದು ಸಾಧ್ಯವೇ? ಅದಕ್ಕಾಗಿ ಆಗಬೇಕಿರುವ ಬದಲಾವಣೆಗಳಾವುವು ಎಂಬುದನ್ನಿಲ್ಲಿ ಪರಿಶೀಲಿಸಲಾಗಿದೆ.

ಆಧುನಿಕತೆಯ ಜೊತೆಜೊತೆಗೆ ಸ್ತ್ರೀದ್ವೇಷವೂ ಬೆಳೆಯುತ್ತಿರುವುದನ್ನು ನೋಡಿದರೆ ಹೆಣ್ಣುಮಗುವಿಗೆ ಹುಟ್ಟುವ ಅವಕಾಶ ನೀಡುವುದೇ ಬದಲಾವಣೆಯ ಮೊದಲ ಹೆಜ್ಜೆಯಾಗಬೇಕು. ಹೆಣ್ಣುಭ್ರೂಣ ಹತ್ಯೆ, ಹೆಣ್ಣು ಶಿಶುಹತ್ಯೆಗಳನ್ನು ತಡೆಗಟ್ಟಲು ವೈದ್ಯಕೀಯ ರಂಗದ ಕಟ್ಟುನಿಟ್ಟಾದ ನಿಯಂತ್ರಣದ ಜೊತೆಗೆ ಗಂಡು, ಹೆಣ್ಣುಮಕ್ಕಳನ್ನು ಸಮಾನವಾಗಿ ಕಾಣುವ ಸಾಮಾಜಿಕ ಪರಿಸರ ನಿರ್ಮಾಣವಾಗಬೇಕು. ಮಕ್ಕಳನ್ನು ಮಕ್ಕಳಂತೆ, ಲೋಕಪ್ರವಾಹದಲ್ಲಿ ಮುಂದೆ ಚಲಿಸುತ್ತಿರುವ ವಿಶ್ವಕಣಗಳಂತೆ ಬೆಳೆಸಬೇಕು. ಅವರ ಮಾತಿಗೆ ಕಿವಿಯಾಗುತ್ತ, ಅಭಿಪ್ರಾಯಗಳನ್ನು ಗೌರವಿಸುತ್ತ 'ಪ್ರಜಾಪ್ರಭುತ್ವ'ದಂತೆ ಬದುಕುವ ಕ್ರಮವನ್ನು ಕುಟುಂಬ, ಶಾಲೆಯ ಮಟ್ಟದಲ್ಲಿಯೇ ರೂಢಿಸಬೇಕು.

ಪ್ರತಿ ಕುಟುಂಬದ ಯಜಮಾನನಿಂದ ಹಿಡಿದು ಕರ್ನಾಟಕವನ್ನು ಆಳಿದ/ಆಳುವ ವ್ಯಕ್ತಿಗಳಲ್ಲೂ ಲಿಂಗಾಧಾರಿತ ಪೂರ್ವಗ್ರಹ ತುಂಬಿಕೊಂಡು ಮಹಿಳಾ ದೌರ್ಜನ್ಯಗಳಿಗೆ ಕಾರಣವಾಗಿದೆ. ವಾಸಿಸುವ, ಓದುವ, ವಿಹರಿಸುವ, ವಿರಮಿಸುವ, ಉದ್ಯೋಗ ಮಾಡುವ ಸ್ಥಳಗಳಲ್ಲಿ ಮಹಿಳೆಯರು ಲೈಂಗಿಕ ಹಿಂಸೆ, ದೌರ್ಜನ್ಯ, ಹತ್ಯೆಗೊಳಗಾಗುತ್ತಿದ್ದಾರೆ. ಬಾಲ್ಯವಿವಾಹ, ವರದಕ್ಷಿಣೆ, ವಧುದಹನ, ಕೌಟುಂಬಿಕ ದೌರ್ಜನ್ಯ ಎಗ್ಗಿಲ್ಲದೇ ಮುಂದುವರಿದಿವೆ. ಮಹಿಳಾಪರ ಕಾನೂನುಗಳೇನು ಕಡಿಮೆಯೇ? ಆದರೆ ಈಗಲೂ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತಿವೆ. ಎಳೆಯ ಹುಡುಗಿಯರು, ಯುವತಿಯರು ಮಾನವ ಸಾಗಾಟಕ್ಕೊಳಗಾಗುತ್ತಿದ್ದಾರೆ. ಜಾತಿ ಹೆಸರಿನಲ್ಲಿ ದೌರ್ಜನ್ಯ, ಅವಕಾಶ ವಂಚನೆ, ಲೈಂಗಿಕ ಹಿಂಸೆ ಎದುರಿಸುತ್ತಿದ್ದಾರೆ. ಈಗಾಗಲೇ ಇರುವ, ಮಹಿಳಾ ಘನತೆಯನ್ನು ಎತ್ತಿಹಿಡಿಯುವ ಕಾನೂನು, ಯೋಜನೆಗಳನ್ನು ಸರ್ಕಾರ ಅನುಷ್ಠಾನಗೊಳಿಸಬೇಕು.

> ಮನೆವಾರ್ತೆ ನೋಡಿಕೊಳ್ಳುತ್ತಿರುವ ಗೃಹಿಣಿಯರಿಗೆ ಮನೆಯಿಂದಾಚೆ ದುಡಿಯುವವರು ಗಳಿಸಿದ್ದರಲ್ಲಿ ಒಂದು ಭಾಗ ಸಲ್ಲುವಂತಾಗಬೇಕು. ಆಗ ಕರ್ನಾಟಕದ ಮಹಿಳೆಯರು ಬರಿಯ ಕೌಟುಂಬಿಕ ಮಹಿಳೆಯಾಗಿರದೇ ಸಾಮಾಜಿಕ ಮಹಿಳೆಯರಾಗಿ ಬೆಳೆಯುತ್ತಾರೆ

ಯಾವುದೇ ಸಂಘ–ಸಂಸ್ಥೆ, ನಿಯೋಜನೆ, ನೇಮಕಾತಿ, ಆಯ್ಕೆಗಳಲ್ಲಿ ಮಹಿಳೆಯರು ಶೇ 48ರಷ್ಟು ಇರಲೇಬೇಕು; ಶೇ 2ರಷ್ಟು ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಬೇಕು ಎಂಬ ನಿಯಮ ಜಾರಿಯಾಗಬೇಕು. ಮಹಿಳಾ ಮೀಸಲಾತಿಯನ್ನು ಕೆಲವೆಡೆಗಳಲ್ಲಿ ತೋರಿಕೆಗೆಂದು ನೀಡಿದರೂ ಆ ಸ್ಥಾನಕ್ಕೆ ಮಹಿಳೆಯರು ಬರುವುದನ್ನು ತಡೆಯಲಾಗುತ್ತಿದೆ. ಹಾಗಾಗದಂತೆ ಸಮಾಜದ ಲಿಂಗಪೂರ್ವಗ್ರಹಗಳನ್ನು ನಿವಾರಿಸುವ ಲಿಂಗಸೂಕ್ಷ್ಮತೆಯ ಕಾರ್ಯಾಗಾರಗಳನ್ನು ನಿರಂತರ ನಡೆಸಬೇಕು.

ಮದುವೆ, ತಾಯ್ತನಗಳು ಹೆಣ್ಣು ತಲುಪಲೇಬೇಕಾದ ಅನಿವಾರ್ಯ ಗುರಿಗಳೆಂಬ ಮನೋಭಾವ ಬದಲಾಗಬೇಕು. ಮದುವೆಯಾದ ತಕ್ಷಣವೇ ಕೊನೆಮೊದಲಿರದ, ಏಕತಾನತೆಯ ಪುಕ್ಕಟೆ ಮನೆಗೆಲಸ ಮಹಿಳೆಯರ ಬೆನ್ನೇರುತ್ತದೆ. ಉನ್ನತ ವಿದ್ಯಾಭ್ಯಾಸ, ಪದೋನ್ನತಿ, ಅಧಿಕಾರ ಸ್ಥಾನ, ರಾಜಕೀಯ-ಸಾಮಾಜಿಕ ತೊಡಗಿಕೊಳ್ಳುವಿಕೆಗಳಲ್ಲಿ ಮಹಿಳೆ ಕಾಣೆಸದಿರಲು ಮನೆವಾರ್ತೆಯೇ ಕಾರಣವಾಗಿದೆ. ಮನೆಗೆಲಸವು ಮನೆಯಲ್ಲಿರುವ ಸ್ತ್ರೀಪುರುಷರಲ್ಲಿ ಸಮಾನವಾಗಿ ಹಂಚಿಕೆಯಾಗುವುದನ್ನು ಉತ್ತೇಜಿಸಲು ಮನೆಗೆಲಸವೂ ಉದ್ಯೋಗವೆಂದು ಪರಿಗಣಿಸಲ್ಪಡಬೇಕು. ಮನೆವಾರ್ತೆ ನೋಡಿಕೊಳ್ಳುತ್ತಿರುವ ಗೃಹಿಣಿಯರಿಗೆ ಮನೆಯಿಂದಾಚೆ ದುಡಿಯುವವರು ಗಳಿಸಿದ್ದರಲ್ಲಿ ಒಂದು ಭಾಗ ಸಲ್ಲುವಂತಾಗಬೇಕು. ಆಗ ಕರ್ನಾಟಕದ ಮಹಿಳೆಯರು ಬರಿಯ ಕೌಟುಂಬಿಕ ಮಹಿಳೆಯಾಗಿರದೇ ಸಾಮಾಜಿಕ ಮಹಿಳೆಯಾಗಿ ಬೆಳೆಯುತ್ತಾರೆ. ನಿರ್ಧಾರಕ ಸ್ಥಾನಗಳಲ್ಲೂ ಅವರನ್ನು ಕಾಣುವುದು ಸಾಧ್ಯವಾಗುತ್ತದೆ.

ಸಾಮಾಜಿಕ ತಾರತಮ್ಯಗಳ ಯಥಾಸ್ಥಿತಿ ಮುಂದುವರಿದಿರುವುದರಲ್ಲಿ ಮಾಧ್ಯಮಗಳ ಪಾಲು ದೊಡ್ಡದಿದೆ. ಸಿನಿಮಾ, ಧಾರಾವಾಹಿ, ಜಾಹೀರಾತು, ಜಾಲತಾಣದಲ್ಲಿ ಬರುವ ಅಸಂಖ್ಯ ತುಣುಕು ಸುದ್ದಿ-ವಿಡಿಯೊಗಳು ಲಿಂಗ-ಜಾತಿಮತ ತಾರತಮ್ಯವನ್ನೇ ಉಸಿರಾಡುವ, ಪೋಷಿಸುವ ಯಜಮಾನ (ಗಂಡು) ಮನಃಸ್ಥಿತಿ ಸೃಷ್ಟಿಸಿರುವಂಥವಾಗಿವೆ. ಇಂಥದ್ದನ್ನು ಬಿಂಬಿಸುವ ದೃಶ್ಯ ಮಾಧ್ಯಮ-ಜಾಲತಾಣಗಳನ್ನು ನಿಯಂತ್ರಿಸಲು ಸರ್ಕಾರ ಮಂಡಳಿ ರಚಿಸಬೇಕು ಮತ್ತು ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮಹಿಳೆಯರು ಸಾಮೂಹಿಕತೆ, ಸರಳ ಬದುಕು, ದಿಟದ ನಡೆಗಳನ್ನು ರೂಢಿಸಿಕೊಳ್ಳಬೇಕು. ಆದರೆ ಬಯಲಿನೆಡೆಗಿನ ಹಾದಿ ಸುಲಭವಿಲ್ಲ. ಗುರಿಯತ್ತ ನಡೆಯಲಾಗದಂತೆ ಕುಟುಂಬ-ಜಾತಿ-ಪಕ್ಷ-ಧರ್ಮ ರಾಜಕಾರಣಗಳು ಮಹಿಳಾ ಸಮೂಹವನ್ನು ಒಡೆಯುತ್ತಲೇ ಇರುತ್ತವೆ. ತಮ್ಮ ಸ್ಥಿತಿಯ ಅರಿವೂ ಅವರಿಗಾಗದಂತೆ ಮಾರುಕಟ್ಟೆಯು ಕಣ್ಕಟ್ಟಿನ ಮಾಯಾಜಾಲವನ್ನು ಹೆಣೆಯುತ್ತದೆ. ಅಂತಹ ಹುಸಿಪರದೆಗಳ ಅತ್ತ ಸರಿಸಬೇಕು. ಮುಳ್ಳುಬೇಲಿಗಳ ಕಿತ್ತೊಗೆಯಬೇಕು. ಕಾಯ್ದೆಕಾನೂನು, ಸರ್ಕಾರದ ನೆರವಿಗಾಗಿ ಕಾಯದೇ ಈ ನೆಲದ ಹೆಣ್ಣುಗಳು ಕೈಕೈ ಹಿಡಿದು ನಡೆಯಬೇಕು.


ಆಗ ಉದಯಿಸುವ ಕರ್ನಾಟಕವು ಈಗಿರುವ ಕರ್ನಾಟಕವಾಗಿರುವುದಿಲ್ಲ. ಅಂತಹ ಕರ್ನಾಟಕದಲ್ಲಿ 'ಸಾಮರಸ್ಯದ ಬಾಳುವೆ'ಯನ್ನು ಕುಂಡದಲ್ಲಿಟ್ಟು ಪೋಷಿಸಬೇಕಾಗಿಲ್ಲ. ಅದು ತಂತಾನೇ ಅರಳುತ್ತದೆ, ಬೆಟ್ಟದ ಹೂವಿನಂತೆ.

ಲೇಖಕಿ: ಬರಹಗಾರ್ತಿ, ಸಾಮಾಜಿಕ ಹೋರಾಟಗಾರ್ತಿ

ಕರ್ನಾಟಕ 50 | 25 ವರ್ಷಗಳ ಮುನ್ನೋಟ

ಹೂಳು ತುಂಬಿದ ಭವಿಷ್ಯ

• ಕೆ.ಪಿ.ಸುರೇಶ



'ಅಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳು' ಎಂದು ಪಂಡಿತ ಜವಾಹರಲಾಲ್ ನೆಹರೂ ಕರೆದಾಗ ಅದೊಂದು ಅಭಿವೃದ್ಧಿಯ ಹೊಸ ವ್ಯಾಖ್ಯಾನವಾಗಿತ್ತು. 60 ವರ್ಷಗಳ ಬಳಿಕ ತಾನು ಕಟ್ಟಿದ ಎಲ್ಲವೂ ಶಿಥಿಲವಾಗುತ್ತಿರುವಾಗ ಆ ಪಟ್ಟಿಯಲ್ಲಿ ಈ ಅಣೆಕಟ್ಟುಗಳೂ ಸೇರುತ್ತವೆ ಎಂದು ನೆಹರೂ ಕೂಡಾ ಊಹಿಸಿರಲಾರರು.

ಕರ್ನಾಟಕದಲ್ಲಿನ ಅಣೆಕಟ್ಟುಗಳ ಸಂಖ್ಯೆ 230. ಇವುಗಳಲ್ಲಿ 15 ಅಣೆಕಟ್ಟುಗಳಿಗೆ ನೂರು ವರ್ಷ ದಾಟಿದೆ. ನೀತಿ ಆಯೋಗದ ಪ್ರಕಾರ ಪ್ರಸ್ತುತ ನಮ್ಮ ದೇಶ ಕೃಷಿ, ಕೈಗಾರಿಕೆ ಮತ್ತು ಗೃಹೋಪಯೋಗಕ್ಕೆ 634 ಬಿಸಿಎಂ (ಬಿಲಿಯನ್ ಘನ ಮೀಟರ್) ನೀರು ಉಪಯೋಗಿಸುತ್ತಿದ್ದು 2050ರ ವೇಳೆಗೆ ಈ ಪ್ರಮಾಣ 800 ಬಿಸಿಎಂಗೆ ಏರಲಿದೆ. ಈ ಬೇಡಿಕೆಯನ್ನು ಜಲಾಶಯಗಳ ಮೂಲಕ ತಕ್ಕ ಮಟ್ಟಿಗೆ ಪೂರೈಸುವ ಲೆಕ್ಕಾಚಾರವೂ ಇದೆ. ಆದರೆ ಜಲಾಶಯಗಳ ನಿಜ ಸಂಗ್ರಹ ಎಷ್ಟು ಎಂಬ ಲೆಕ್ಕ ಪರಿಶೋಧನೆ ನಡೆದರೆ ಈ ಭವಿಷ್ಯದ ಲೆಕ್ಕವೂ ಮಸುಕಾಗಲಿದೆ.

ಬಹುತೇಕ ಜಲಾಶಯಗಳನ್ನು ಕಟ್ಟುವಾಗ ಕ್ಲೈಮು ಮಾಡಿದ ನೀರಾವರಿ ಸಾಮರ್ಥ್ಯದ ಅರ್ಧದಷ್ಟನ್ನೂ ಈ ಜಲಾಶಯಗಳು ಒದಗಿಸುತ್ತಿಲ್ಲ. ಬಹುತೇಕ ಜಲಾಶಯಗಳಲ್ಲಿ ಊಹಿಸಿದ್ದಕ್ಕಿಂತ ಎಷ್ಟೋ ಪಾಲು ಹೂಳು ತುಂಬಿಕೊಂಡಿದೆ. ಕರ್ನಾಟಕದ ಮುಖ್ಯ ಜಲಾಶಯಗಳು ಪಶ್ಚಿಮ ಘಟ್ಟ ಮತ್ತು ಅದರ ಸೆರಗಿನ ಪ್ರದೇಶಗಳ ಮುಂಗಾರು ಮಳೆಯನ್ನು ನೆಚ್ಚಿಕೊಂಡಿದ್ದು, ಈ ಮುಂಗಾರು ಮಳೆ ಕೊಚ್ಚಿ ತರುವ ಹೂಳು ಈ ಜಲಾಶಯಗಳನ್ನು ತುಂಬುತ್ತಿದೆ. ಈ ಬಗ್ಗೆ ನಿಖರವಾದ ವಿವರಗಳೇ ಸರ್ಕಾರದಲ್ಲಿಲ್ಲ.

ನಮ್ಮ ತುಂಗಭದ್ರೆಯ ಅಣೆಕಟ್ಟಿನ ಸಂಗ್ರಹ ಪ್ರಮಾಣ ಎಷ್ಟು ಕುಸಿದಿದೆಯೆಂದರೆ, ಸರ್ಕಾರವೇ ಈ ಕುಸಿದ ಟಿಎಂಸಿ ಲೆಕ್ಕ ಹಾಕಿ ಅದರ ಕೆಳಗೆ ಇನ್ನೊಂದು ಅಣೆಕಟ್ಟು ಕಟ್ಟುವ ಧಾವಂತದಲ್ಲಿದೆ.

ಜಲ ಸಂಪನ್ಮೂಲ ಇಲಾಖೆಯ ಪ್ರಕಾರ (ಐಸೆಕ್ ಅಧ್ಯಯನ ವರದಿ) ಕರ್ನಾಟಕದಲ್ಲಿ ನೀರಾವರಿ ಸಾಮರ್ಥ್ಯದ ಅಂದಾಜು 31 ಲಕ್ಷ ಹೆಕ್ಟೇರ್ (ಜಲಾಶಯ ನಿರ್ಮಾಣಕ್ಕಿರುವ ಅತ್ಯಂತ ದೊಡ್ಡ ಸಮರ್ಥನೆ ಇದು). ನೀರಾವರಿ ಒದಗಿರುವುದು ಕೇವಲ 16 ಲಕ್ಷ ಹೆಕ್ಟೇರ್. ಈ ಉಬ್ಬಿಸಿದ ಅಂದಾಜು, ಜಲಾಶಯದ ನಿರ್ಮಾಣ ವೆಚ್ಚವನ್ನು ಹಿಗ್ಗಿಸುತ್ತದೆ. ಇದರ ತಕ್ಷಣದ ಲಾಭ ಎಲ್ಲಿಗೆ ಹೋಗುತ್ತದೆ ಎಂಬುದು ಚಿದಂಬರ ರಹಸ್ಯವೇನಲ್ಲ.

ದಶಕದ ಹಿಂದೆ ಜಗದೀಶ್ ಶೆಟ್ಟರ್ ಅವರು ಮಂಡಿಸಿದ ಬಜೆಟ್‌ನಲ್ಲಿ ಕರ್ನಾಟಕದ ಅಂದಾಜು 2.5 ಲಕ್ಷ ಹೆಕ್ಟೇರ್ ಚೌಳು ಭೂಮಿಯಾಗಿ ರೂಪಾಂತರಗೊಂಡಿದ್ದು ಅವುಗಳನ್ನು ಮರುಪಡೆಯಲು ಕಾರ್ಯಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂಬ ವಿವರ ಇದೆ. ಇದೇವೇಳೆಗೆ ವಿಧಾನಮಂಡಲದಲ್ಲಿ ನೀಡಲಾದ ಉತ್ತರದ ಪ್ರಕಾರ ಬೆಳಗಾವಿ ಜಿಲ್ಲೆ ಒಂದರಲ್ಲೇ 1 ಲಕ್ಷ ಹೆಕ್ಟೇರ್ ಜಮೀನು ಚೌಳು. ಈ ಅಂಕಿ-ಅಂಶ ಹತ್ತು ವರ್ಷ ಹಳೆಯದು. ಸದ್ಯದ ಸ್ಥಿತಿ ಬಗ್ಗೆ ಯಾವುದೇ ಮಾಹಿತಿಯಿಲ್ಲ. ಅತಿ ನೀರಾವರಿ ತಂದಿರುವ ವೈರುಧ್ಯ ಇದು.

ಜಲಾಶಯಗಳ ನೀರಿನ ಶೇ 80ರಷ್ಟು ಭತ್ತ ಮತ್ತು ಕಬ್ಬು ಬೆಳೆಯಲು ಬಳಕೆಯಾಗುತ್ತಿದ್ದು ಇಲ್ಲೆಲ್ಲ ಬೆಳೆ ವೈವಿಧ್ಯ ಸಂಪೂರ್ಣ ನಾಶವಾಗಿ ಭತ್ತದಂಥಾ ಏಕಬೆಳೆ ಹರಡಿ ಕೂತಿದೆ. ಇಲ್ಲಿ ಬಳಕೆಯಾಗುವ ರಾಸಾಯನಿಕ ಗೊಬ್ಬರ, ಕ್ರಿಮಿ/ ಕೀಟನಾಶಕಗಳನ್ನು ಲೆಕ್ಕ ಹಾಕಿದರೆ ನೀರಾವರಿ ಸೃಷ್ಟಿಸಿರುವ ಬಹು ಆಯಾಮದ ಸಂಕಷ್ಟಗಳ ರಾಕ್ಷಸೀ ಸ್ವರೂಪ ಅನಾವರಣಗೊಳ್ಳುತ್ತದೆ (ಕರ್ನಾಟಕ ಸರ್ಕಾರಕ್ಕೆ ಈ ಕೀಟನಾಶಕಗಳ ಬಳಕೆ ಪ್ರಮಾಣ ಎಷ್ಟಿದೆ ಎಂಬುದೂ ಅಧಿಕೃತವಾಗಿ ಗೊತ್ತಿಲ್ಲ).

> ಸರ್ಕಾರ ಇನ್ನಷ್ಟು ಜಲಾಶಯ ನಿರ್ಮಾಣದ ಹುಂಬ ನಿರ್ಧಾರದಲ್ಲಿ ಇದೆಯೇ ವಿನಾ ಈಗಿರುವ ಜಲಾಶಯಗಳ ಸಂಗ್ರಹ, ಅದು ಒದಗಿಸುವ ನೀರಾವರಿ, ಅಲ್ಲಿ ಕೈಗೊಳ್ಳಬಹುದಾದ ನೀರುಳಿಸುವ ಉಪಕ್ರಮಗಳ ಬಗ್ಗೆ ಗಂಭಿರವಾದ ಅಧ್ಯಯನ, ಸಾರ್ವಜನಿಕ ಸಂವಾದಗಳಲ್ಲಿ ತೊಡಗಿಯೇ ಇಲ್ಲ

ಇನ್ನು ಈ ನೀರಾವರಿ ಅಚ್ಚುಕಟ್ಟಿನಲ್ಲಿ ಬೆಳೆ ಬೆಳೆಯುವ ರೂಲುಬುಕ್ಕು ನೋಡಿದರೆ, ಬೆಳೆ ಬದಲಾವಣೆ ಮಾಡಬೇಕು ಇತ್ಯಾದಿ ಶಿಫಾರಸುಗಳಿವೆ. ಇದೇನಿದ್ದರೂ ಮುದ್ರಣದಲ್ಲಿರುವ ಅಕ್ಷರಗಳಷ್ಟೇ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲೇ ವರ್ಷಕ್ಕೆ 20 ಸಾವಿರ ಹೆಕ್ಟೇರಿನಲ್ಲಿ ಒಂದು ಬೆಳೆ ದ್ವಿದಳ ಧಾನ್ಯ ಬೆಳೆಯಲು ಸಬ್ಸಿಡಿ ನೀಡಿ ಅದನ್ನು ಸರ್ಕಾರವೇ ಕೊಂಡುಕೊಂಡರೂ ಹೆಚ್ಚೆಂದರೆ ₹60 ಕೋಟಿ ವೆಚ್ಚವಾಗಬಹುದು. ಆದರೆ ಇದರಿಂದ ಉಳಿಯುವ ನೀರಿನ ಪ್ರಮಾಣ ಅಮೂಲ್ಯವಾದದ್ದು. ಅಷ್ಟೇ ಅಲ್ಲ. ಬೆಳೆ ಬದಲಾವಣೆಯಿಂದ ಮಣ್ಣಿನ ಫಲವತ್ತತೆಯಲ್ಲಿ ಆಗುವ ಬದಲಾವಣೆ ಇನ್ನೂ ಅಮೂಲ್ಯವಾದದ್ದು.

ಮುಂದಿನ 25 ವರ್ಷಗಳಲ್ಲಿ ಕರ್ನಾಟಕದ ನೀರಿನ ಉಪಯೋಗದ ಮೇಲೆ ಬೀಳುವ ಒತ್ತಡ ಊಹಿಸಲೂ ಅಸಾಧ್ಯ. ಬೆಂಗಳೂರು ರಾಕ್ಷಸಾಕಾರವಾಗಿ ಬೆಳೆಯುತ್ತಾ ಅದರ ದಾಹ ತಣಿಸಲು ಮತ್ತೆ ಕಾವೇರಿಯ ಮೊರೆ ಹೋಗುವ ಧಾವಂತ ಹೆಚ್ಚಬಹುದು.

ಆಗ ನಮ್ಮ ಮುಖ್ಯ ಜಲಾಶಯಗಳ ಸ್ಥಿತಿ ಹೇಗಿರಬಹುದು? ನೀರಾವರಿಗಿರುವ ಹಾರಂಗಿ, ಕಬಿನಿ ಹೇಮಾವತಿಗಳು ನೇರ ಮಳೆ ನೀರು ಕೊಚ್ಚಿ ತರುವ ಮಣ್ಣಿನ ಸಂಗ್ರಹಾಗಾರಗಳೇ. ಇದರೊಂದಿಗೇ ಪಶ್ಚಿಮ ಘಟ್ಟದ ಮಳೆ ಬಿರುಸು ನಂಬಿರುವ ಜಲ ವಿದ್ಯುದಾಗಾರಗಳನ್ನೂ ಲೆಕ್ಕ ಹಾಕಿದರೆ ಬಹುತೇಕ ಭವಿಷ್ಯದ ಲೆಕ್ಕಾಚಾರಗಳೆಲ್ಲಾ ನೆಲ ಕಚ್ಚುವುದು ಖಚಿತ.

ಸರ್ಕಾರ ಇನ್ನಷ್ಟು ಜಲಾಶಯ ನಿರ್ಮಾಣದ ಹುಂಬ ನಿರ್ಧಾರದಲ್ಲಿ ಇದೆಯೇ ವಿನಃ ಈಗಿರುವ ಜಲಾಶಯಗಳ ಸಂಗ್ರಹ, ಅದು ಒದಗಿಸುವ ನೀರಾವರಿ, ಅಲ್ಲಿ ಕೈಗೊಳ್ಳಬಹುದಾದ ನೀರುಳಿಸುವ ಉಪಕ್ರಮಗಳ ಬಗ್ಗೆ ಗಂಭಿರವಾದ ಅಧ್ಯಯನ, ಸಾರ್ವಜನಿಕ ಸಂವಾದಗಳಲ್ಲಿ ತೊಡಗಿಯೇ ಇಲ್ಲ.

ಭವಿಷ್ಯದ ಚಿಂತೆ ವರ್ತಮಾನದ ದುಗುಡವಾದರಷ್ಟೇ ಹೊರದಾರಿ ಕಾಣಬಹುದು. ಕಣ್ಣಿಗೆ ಗಿಡಿಯುವ ಈ ಭವಿಷ್ಯದ ಮುಂಗಾಣ್ಕೆಯನ್ನು ನಿಭಾಯಿಸುವುದು ಉತ್ತಮ ನಾಗರಿಕ ಆಡಳಿತದ ಹೊಣೆ. 5ಜಿಯಿಂದ 10ಜಿಗೆ ಜಿಗಿಯುವುದೇ ಪರಮ ಸಾಧನೆ ಎಂದು ಭಾವಿಸಿದರೆ ಅನ್ನ ಬೆಳೆವ ಜಮೀನು ಶಾಶ್ವತವಾಗಿ ಬಂಜೆಯಾಗುತ್ತದೆ. 'ಪೃಥ್ವಿ ಗತ ಯೌವ್ವನಾ' ಎಂದು ಭರ್ತೃಹರಿ ಹೇಳಿದ್ದು ಸಾವಿರ ವರ್ಷಗಳ ಹಿಂದೆ. ಭೂಮಿಯ ಯೌವ್ವನ ಕಳೆದು ಹೋಯಿತು ಎಂದು ನಾವು ನಮ್ಮ ಮಕ್ಕಳಿಗೆ ಹೇಳುವುದು ಮಹಾ ಸಂಕಟದ ವಿಷಯ.


ಲೇಖಕ: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಜ್ಞ

ಹೊರಬಂತು 'ಗಾರುಡಿಗ'ನ ಹಾಡು

ಹೊಸಬರ 'ಗಾರುಡಿಗ' ಚಿತ್ರದ ಹಾಡು ಬಿಡುಗಡೆಗೊಂಡಿದೆ. ಸೂಪರ್ ಸ್ಟಾರ್ ರಜನಿಕಾಂತ್ ಅವರ ಆಪ್ತ ಸ್ನೇಹಿತ ರಾಜ್‌ಬಹದ್ದೂರ್ ಇತ್ತೀಚೆಗೆ ಹಾಡು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಡಾ.ಎಂ.ವೆಂಕಟಸ್ವಾಮಿ ಅವರು ಎಂ.ವಿ.ಫಿಲ್ಮ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಚಿತ್ರಕ್ಕೆ ವಿಧಾ.ಆರ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಶ್ರೀಕೃಷ್ಣ ಒಂದು ತೊಟ್ಟು ರಕ್ತವನ್ನೂ ಕೈಗೆ ತಾಗಿಸಿಕೊಳ್ಳದೆ ಯುದ್ಧವನ್ನು ಗೆಲ್ಲಿಸುವ ಮಹಾಪುರುಷ. ಅದೇ ರೀತಿ ಚಿತ್ರದ ಕಥೆಯಲ್ಲಿ ನಾಯಕ ರೈತನಾಗಿದ್ದು, ಪಟ್ಟಣಕ್ಕೆ ಬಂದು ಬದುಕಿನ ಯುದ್ಧ ಗೆಲ್ಲುತ್ತಾನೆ. ಸಸ್ಪೆನ್ಸ್ ಥ್ರಿಲ್ಲರ್ ಕಥೆ' ಎಂದರು ನಿರ್ದೇಶಕರು.

ಮಾಗಡಿ ಮೂಲದ ರುದ್ವಿನ್ ನಾಯಕ. ನಾಯಕಿಯಾಗಿ ಮಾನಸ ಕಾಣಿಸಿಕೊಂಡಿದ್ದಾರೆ. ಎಂ.ಸಂಜೀವ್‌ರಾವ್ ಸಂಗೀತ, ಅನಿರುದ್ಧ್-ಭರತ್ ಛಾಯಾಗ್ರಹಣ ಚಿತ್ರಕ್ಕಿದೆ. ಬೆಂಗಳೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಪೇಟೆ, ಆನೇಕಲ್, ಕನಕಪುರ, ಹಾರೋಹಳ್ಳಿ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.




ಮಾನಸ

ಶಿವಭಕ್ತಿಯ 'ತ್ರಿಷ'

ನಟ ಸುಮನ್ ಪ್ರಮುಖ ಪಾತ್ರದಲ್ಲಿ ನಟಿಸಿ, ಶಿವಭಕ್ತಿಯ ಕಥೆ ಹೊಂದಿರುವ 'ತ್ರಿಷ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ತಯಾರಾಗುತ್ತಿರುವ ಚಿತ್ರವನ್ನು ಆರ್.ಕೆ. ಗಾಂಧಿ ನಿರ್ದೇಶಿಸುತ್ತಿದ್ದಾರೆ.

ಶಿವನೇ ಸರ್ವಸ್ವ ಎಂದು ನಂಬಿರುವ ಶಿವಭಕ್ತನಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವುಗಳಿಂದ ನೊಂದ ಆ ಶಿವಭಕ್ತ ದುಷ್ಕರ್ಮಿಗಳಿಗೆ ಕೊಡುವ ಶಾಪ ಹೇಗೆಲ್ಲ ಪರಿಣಾಮ ಬೀರುತ್ತದೆ ಎಂಬ ವಸ್ತುವಿನ ಕಥೆ ಹೊಂದಿರುವ ಚಿತ್ರವನ್ನು ಈಶ್ವರ್ ನಾಗನಾಥ್, ಹನುಮಂತರಾಯ ಮತ್ತು ಎಂ.ಎಸ್. ದಂಡಿನ್ ನಿರ್ಮಿಸುತ್ತಿದ್ದಾರೆ.

ಹೊಸಕೋಟೆ ತಾಲೂಕಿನ ಭಕ್ತರಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕಿನ ಅಜ್ಜವಾರ ಮತ್ತು ಮುಳಬಾಗಿಲು ತಾಲೂಕಿನ ವಿರೂಪಾಕ್ಷ ದೇವಾಲಯದಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ಚಿತ್ರತಂಡ ಹೇಳಿದೆ. ಎಂ.ಎಲ್.ರಾಜ ಅವರ ಸಾಹಿತ್ಯ, ಸಂಗೀತ, ಮರಳಿಕೃಷ್ಣ ಅವರ ಛಾಯಾಗ್ರಹಣ ಚಿತ್ರಕ್ಕಿದೆ.



ಸುಮನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಆಸ್ಟ್ರೇಲಿಯಾ ಹಾಗೂ ಭಾರತದ ಮಧ್ಯ ನಡೆದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ನರೇಂದ್ರ ಮೋದಿ ಕ್ರೀಡಾಂಗಣದ ಹೊರಗಡೆ ಹನುಮಾನ್ ಚಾಲೀಸಾ ಪಠಣ' ಎಂಬ ಬರಹ ಇರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಕುರಿತು ಜೀ ಸುದ್ದಿ ವಾಹಿನಿ ಸೇರಿದಂತೆ ಹಲವರು ಸುದ್ದಿಯನ್ನೂ ಬಿತ್ತರಿಸಿದ್ದಾರೆ. ಹಲವು ವೆಬ್‌ಸೈಟ್‌ಗಳು ಸುದ್ದಿಯನ್ನೂ ಮಾಡಿವೆ. ಇದೇ ಕ್ರೀಡಾಂಗಣದಲ್ಲಿ ಅಕ್ಟೋಬರ್ 4ರಂದು ನಡೆದಿದ್ದ ಭಾರತ ಹಾಗೂ ಪಾಕಿಸ್ತಾನ ಪಂದ್ಯದ ವೇಳೆಯೂ ಹನುಮಾನ್ ಚಾಲೀಸಾ ಪಠಣ ಮಾಡಲಾಗಿತ್ತು ಎಂದೂ ವಿಡಿಯೊವೊಂದು ಹರಿದಾಡಿತ್ತು. ಈ ಬೆಳವಣಿಗೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪರ–ವಿರೋಧ ಚರ್ಚೆಯೂ ನಡೆದಿತ್ತು. ಆದರೆ, ಇದು ಸುಳ್ಳು ಸುದ್ದಿ.

✓ ಆಸ್ಟ್ರೇಲಿಯಾ ಮತ್ತು ಭಾರತದ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ಹನುಮಾನ್ ಚಾಲೀಸಾ ಪಠಣ ನಡೆದಿದೆ ಎಂದು ಹರಿದಾಡುತ್ತಿರುವ ವಿಡಿಯೊದಲ್ಲಿನ ಕೆಲವು ತುಣುಕುಗಳು ಭಾರತ ಹಾಗೂ ಪಾಕಿಸ್ತಾನ ಮಧ್ಯೆ ನಡೆದ ಪಂದ್ಯದ ವೇಳೆ ಹನುಮಾನ್ ಚಾಲೀಸಾ ಪಠಣ ಮಾಡಿತ್ತು ಎನ್ನಲಾದ ವಿಡಿಯೊದ ತುಣುಕುಗಳಿಗೂ ಸಾಮ್ಯತೆ ಇದೆ. ಇನ್ನೂ ಹೆಚ್ಚಿನ ಪರಿಶೀಲನೆ ನಡೆಸಿದಾಗ ವಿಡಿಯೊಗೆ ಬೇರೆ ಆಡಿಯೊವನ್ನು ಅಳವಡಿಸಿರುವುದು ಕಂಡುಬಂದಿತು. ಜೈಪುರದಲ್ಲಿ ಹನುಮಾನ್ ಚಾಲೀಸಾ ಮಹಾಸಮ್ಮೇಳನ ನಡೆದಿತ್ತು. ಇದರ ವಿಡಿಯೊವೊಂದು ನ.9ರಂದು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಇದೇ ವಿಡಿಯೊದ ಆಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾದ ವಿಡಿಯೊಗಳಿಗೆ ಅಳವಡಿಸಲಾಗಿದೆ ಎಂದು 'ಬೂಮ್‌ಲೈವ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಹಕ್ಕಿಯ ಹಾಡಿಗೆ ತಲೆದೂಗುವಾಸೆ

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಹಕ್ಕಿಗಳ ಚಿತ್ರ ತೆಗೆಯಲು ದಾಂಡೇಲಿ ಕಾಡಿಗೆ ಹೋಗಿದ್ದಾಗ ವಯಸ್ಸಾದ ದಂಪತಿಯನ್ನು ಕಂಡೆ. ಅವರು ಮುಂಬೈಯಿಂದ ಬಂದಿದ್ದರು. ಇಬ್ಬರ ನಡುವೆ ಅಪರೂಪದ ಹೊಂದಾಣಿಕೆ ಹಾಗೂ ಅನ್ಯೋನ್ಯತೆ ಇತ್ತು. ವಯಸ್ಸಾದಾಗ ಎಲ್ಲರೂ ಹೀಗೆ ಇರಬೇಕು ಎಂಬ ಒಂದು ಮಾದರಿಯಂತೆ ಅವರು ಕಾಣುತ್ತಿದ್ದರು.

ಗಂಡ ತಮ್ಮ ಕಾಯಿಲೆಯ ಕಾರಣಕ್ಕೆ ಕೊಂಚ ನಿತ್ರಾಣವಾಗಿದ್ದ ವ್ಯಕ್ತಿ. ಹೆಂಡತಿ ಮಗುವಿನಂತೆ ಅವರನ್ನು ಸಂಭಾಳಿಸುತ್ತಿದ್ದರು. ಇಬ್ಬರೂ ಮೌನವಾಗಿ ಕೂತು ಹಕ್ಕಿಗಳನ್ನು ದುರ್ಬೀನಿನಲ್ಲಿ ಹುಡುಕಿ ನೋಡಿ ಸಂತೋಷ ಪಡುತ್ತಿದ್ದರು. ಪಕ್ಷಿ ಕೂಗನ್ನು ಕಣ್ಣು ಮುಚ್ಚಿ ಆಸ್ವಾದಿಸುತ್ತಿದ್ದರು. ನಾನವರ ಸ್ನೇಹ ಸಂಪಾದಿಸಿ ಮಾತಾಡಿಸಿದೆ. ಅವರು ಮುಂಬೈಯಲ್ಲಿ ಬಹಳ ದೊಡ್ಡ ವ್ಯಾಪಾರ ಹೊಂದಿದ್ದರು. ಗಂಡ ಹಣ ದುಡಿಯುವ ಏಕಮಾತ್ರ ಜಿದ್ದಿಗೆ ಬಿದ್ದು ಆರೋಗ್ಯ ಕಳೆದುಕೊಂಡರು. ಅವರಿಗೀಗ ಕ್ಯಾನ್ಸರ್ ರೋಗ.

ವೈದ್ಯರು ಔಷಧೋಪಚಾರ ಮಾಡಿ ಕೊನೆಗೆ ನೀವು ಬದುಕಿರುವುದು ಕೆಲವೇ ತಿಂಗಳು ಎಂದರು. ಮತ್ತೆ ಅವರೇನೆ ಹಕ್ಕಿಗಳ ದನಿಯನ್ನು ಕೇಳುತ್ತಾ ಕಾಲ ಕಳೆದರೆ, ಕಾಡಿನ ಬದುಕನ್ನು ಸವಿದರೆ ಮನಸ್ಸಿಗೆ ಹಿತವೂ ಆಗುತ್ತದೆ. ಆರೋಗ್ಯವೂ ಕೊಂಚ ಸುಧಾರಿಸಬಹುದು ಪ್ರಯತ್ನಿಸಿ ನೋಡಿ ಎಂದು ಸೂಚಿಸಿದರು. ಡಾಕ್ಟರ್ ಮಾತಿನಂತೆ ಹಕ್ಕಿಗಳ ಬದುಕನ್ನು ಹತ್ತಿರದಿಂದ ನೋಡುವ ಆಸೆ ಹೆಚ್ಚಿಸಿಕೊಂಡು ಅನೇಕ ಪಕ್ಷಿಧಾಮಗಳಲ್ಲಿ ಕಾಲ ಕಳೆಯುತ್ತಿದ್ದೇವೆ ಎಂದರು. ಬದುಕಿನ ಲಯ ಹದಗೆಡಿಸಿಕೊಂಡ ಮನುಷ್ಯ ಕೊನೆಗೆ ಪ್ರಕೃತಿಯ ಪುಟಾಣಿ ದೇವತೆಗಳಾದ ಪಕ್ಷಿಗಳ ಬಳಿಗೆ ಬಂದು ತನ್ನ ಮನಶ್ಯಾಂತಿ, ನೆಮ್ಮದಿ, ಆರೋಗ್ಯವನ್ನು ಮರಳಿ ಪಡೆಯುವ ಈ ಪ್ರಯತ್ನ ಭಿಕ್ಷೆಯೇ ಸೋಜಿಗವೆನಿಸಿತು.

ಅಮೆರಿಕ ದೇಶದ ಪ್ರೊಯೆಬ್ ಸ್ನೆಟ್ ಸಿಂಗರ್ ಎಂಬ ಮಹಿಳೆಗೆ ಐವತ್ತನೇ ವಯಸ್ಸಿನಲ್ಲಿ ಕ್ಯಾನ್ಸರ್ ಇರುವುದು ಗೊತ್ತಾಯಿತು. ವೈದ್ಯರು ಇವಳಿಗೂ ಕೊಟ್ಟಿದ್ದು ಕೆಲವೇ ತಿಂಗಳ ಗಡುವು. ಆಕೆಗೆ ವಯಸ್ಸಿಗೆ ಬಂದ ನಾಲ್ಕು ಮಕ್ಕಳಿದ್ದರು. ಹೆದರದ ಈಕೆ ಪತಿ ಡೇವಿಡ್‌ಗೆ ಹೇಳಿ ತನ್ನ ಬದುಕಿನ ಉಳಿದ ಸಮಯವನ್ನು ಹಕ್ಕಿಗಳ ನೋಡುತ್ತಾ ಕಳೆಯುವ ಇರಾದೆ ವ್ಯಕ್ತಪಡಿಸಿದಳು. ಜಗತ್ತಿನ ಹಕ್ಕಿಗಳ ಗಾನ ಕೇಳುತ್ತಾ, ಅವುಗಳ ಚಲನವಲನ ಗಮನಿಸುತ್ತಾ ಪ್ರೊಯೆಬ್ ಮುಂದೆ ಹದಿನೆಂಟು ವರ್ಷ ಬದುಕಿದಳು.

ಪ್ರಪಂಚದಲ್ಲಿ ಅತಿ ಹೆಚ್ಚು ಖಗಗಳನ್ನು ನೋಡಿ ಅವುಗಳ ಮೇಲೆ ನಿಖರ ಟಿಪ್ಪಣಿ ತಯಾರಿಸಿದ ಇವಳ ಸಾಧನೆ ಗಿನ್ನೆಸ್ ದಾಖಲೆ ಸೇರಿತು. ತನಗೆ ನೋವು ಕೊಡುವ ಕಾಯಿಲೆಗೆ ಆಗಾಗ ಚಿಕಿತ್ಸೆ ಪಡೆಯುತ್ತಲೇ; ಪ್ರಪಂಚ ಸುತ್ತಿದ ಈಕೆ ಪಕ್ಷಿಗಳು ನನ್ನ ಪ್ರಾಣ ಉಳಿಸುತ್ತಿವೆ ಎಂದು ಕರ್ನಾಟಕದ ನೆಲದಲ್ಲೂ ಓಡಾಡುವಾಗ ಸಂತೋಷದಿಂದ ನುಡಿದಿದ್ದಳು.

ಬದುಕಲ್ಲಿ ಬಂದೇ ಬರುವ ರೋಗ, ಸಾವುಗಳ ತಡೆದು, ಹಿಡಿದು ನಿಲ್ಲಿಸಲಿಕ್ಕೆ ಆಗುವುದಿಲ್ಲ. ಆತ್ಮ ವಿಶ್ವಾಸದಿಂದ ಹೊಸ ಮಾರ್ಗ ಹುಡುಕಿದರೆ ಬದುಕುವ ಪಥ ಹಿಗ್ಗಿಸಬಹುದು. ಬಾಕಿ ಉಳಿದ ಮುಗುಳು ನಗೆ ಎಲ್ಲರಿಗಾಗಿ ಬಳಸಬಹುದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ನವೆಂಬರ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದಶಮಿ ಗಂ.23-05 ನಕ್ಷತ್ರ: ಪೂರ್ವಾಭಾದ್ರ ಗಂ. 18-37 ಯೋಗ: ಹರ್ಷಣ ಗಂ 14-46 ಕರಣ: ತೈತಿಲ ಗಂ 12-07, ವೃಶ್ಚಿಕ ಮಾಸದ 06 ನೇ ದಿನ, ಮಳೆನಕ್ಷತ್ರ: ಅನುರಾಧ 1.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-37 ಸೂರ್ಯಾಸ್ತ : 05-57

ಮುಸ್ಲಿಂ ದಿನಾಂಕ : 07 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 3, 1

ಮೇಷ: ಪ್ರತಿಯೊಂದಕ್ಕೂ ಯಶಸ್ಸು ಹೊಂದಲು ಹಲವು ಬಾರಿ ಪ್ರಯತ್ನ ಪಡಬೇಕಾದೀತು. ಧಾರ್ಮಿಕ ಪರಂಪರೆಯ ವ್ಯಕ್ತಿಗಳಿಗೆ ಒತ್ತಡ ಹೆಚ್ಚಲಿದೆ. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಿಗೆ ಬರುವರು.

ವೃಷಭ: ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಏರು-ಪೇರಾಗಬಹುದು. ಹಿರಿಯರಿಂದ ಪಡೆದ ಸಲಹೆಯು ನಿಮ್ಮ ಜೀವನಕ್ಕೆ ಹೊಸ ಬುನಾದಿಯಾಗಲಿದೆ. ಮನೆಯವರೊಂದಿಗೆ ಸುಖ ಭೋಜನ ಮಾಡುವ ಅವಕಾಶ ಸಿಗಲಿದೆ.

ಮಿಥುನ: ಟಿವಿ, ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯವಿರುವುದು. ಈ ದಿನ ಧನಾಗಮನ ಹೆಚ್ಚಿದ್ದರೂ ಸಹ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ.

ಕರ್ಕಾಟಕ: ಹೆಚ್ಚು ಸ್ವತಂತ್ರವಾಗಿರಲು ಇಚ್ಛಿಸಿದಲ್ಲಿ ಉತ್ತಮ ಅವಕಾಶಗಳು ಎದುರಾಗಲಿವೆ. ಸ್ವಚ್ಛತಾ ಕಾರ್ಯಗಳಲ್ಲಿ ಪಾಲ್ಗೊಂಡ ಕಾರಣ ಅಲರ್ಜಿ ಉಂಟಾಗಬಹುದು. ಬೇಳೆ ವ್ಯಾಪಾರಸ್ಥರಿಗೆ ಅಧಿಕ ವ್ಯಾಪಾರವಿರುವುದು.

ಸಿಂಹ: ಉದ್ಯೋಗದಲ್ಲಿ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ರಂಗಕರ್ಮಿಗಳಿಗೆ ಹೆಚ್ಚಿನ ಜನಸಂಪರ್ಕ ವಾಗಲಿದೆ. ಜೀವನದಲ್ಲಿ ನಿಮ್ಮದ್ದೇ ಆದ ನಿಯಮವನ್ನು ರೂಡಿಸಿಕೊಳ್ಳಿ.

ಕನ್ಯಾ: ಮಕ್ಕಳ ಆಸೆ, ಆಕಾಂಕ್ಷೆ ತೀರಿಸುವ ಉದ್ದೇಶದಲ್ಲಿ ನಿಮ್ಮ ಹಣಕಾಸಿನ ಪರಿಸ್ಥಿತಿ ನಿಯಂತ್ರಣವನ್ನು ತಪ್ಪಿಹೋಗುವುದು. ಧ್ಯಾನ ಹಾಗೂ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ.

ತುಲಾ: ಆಡಳಿತಾತ್ಮಕ ವಿಚಾರದಲ್ಲಿ ನಡೆದ ಭಾರಿ ಬದಲಾವಣೆಗಳು ನಿಮ್ಮನ್ನು ಗುರಿಮಾಡುವುದು. ರಫ್ತು, ಆಮದು ವ್ಯಾಪಾರಗಳಲ್ಲಿ ಹೇರಳ ಲಾಭದ ಜೊತೆಯಲ್ಲಿ ತಲೆಬಿಸಿಯ ವಾತಾವರಣಗಳೆರಡೂ ಇರುವುದು.

ವೃಶ್ಚಿಕ: ರಾಜಕೀಯ ಸಮೂಹದವರು ಯಾವುದೇ ಗಲಭೆಗೆ ಕಾರಣರಾಗದಂತೆ ಇರುವುದು ಉತ್ತಮ. ಎಲೆಕ್ಟ್ರಾನಿಕ್ ಉಪಕರಣಗಳ ರಿಪೇರಿಯಿಂದ ಖರ್ಚು ಉಂಟಾಗಲಿದೆ. ಕೆಲಸ ಕಾರ್ಯದಲ್ಲಿ ಏಕಾಗ್ರತೆ ಕಡಿಮೆಯಾಗಲಿದೆ.

ಧನು: ವೃತ್ತಿಯನ್ನು ಸವಾಲೆಂಬಂತೆ ಯಾವುದೇ ವಿಶ್ರಾಂತಿಗಳಿಲ್ಲದೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತವೆ. ಪ್ರಭಾವಿ ವ್ಯಕ್ತಿಗಳ ಸಂಪರ್ಕವು ನಿಮ್ಮ ವೈಯಕ್ತಿಕ ಬೆಳವಣಿಗೆಗೆ ಉಪಯೋಗವಾಗುವುದು.

ಮಕರ: ಅಲಂಕಾರಿಕ ವಿಭಾಗದಲ್ಲಿ ಸ್ವ ಸಾಮರ್ಥ್ಯವನ್ನು ಉತ್ತಮವಾಗಿ ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಸುಲಭವಾಗಿ ಪಡೆಯುವಿರಿ. ಈ ದಿನ ವ್ಯವಹರಿಸುವಾಗ ಪ್ರದರ್ಶಿಸಿದ ಬುದ್ಧಿವಂತಿಕೆಯು ಲಾಭಕ್ಕೆ ಕಾರಣವಾಗುವುದು.

ಕುಂಭ: ವೃತ್ತಿ ವಿಷಯದಲ್ಲಿ ಒಪ್ಪಂದ ಏರ್ಪಡಿಸುವ ಬಗ್ಗೆ ಅಭಿಪ್ರಾಯ ಬರುವುದು, ಸೂಕ್ಷ್ಮವಾದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ. ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸ ಬೇಕಾಗುವುದು.

ಮೀನ: ಪ್ರದರ್ಶನ ಮಾರಾಟ ಮಳಿಗೆಯವರಿಗೆ ಲೋಹದ ಉತ್ಪನ್ನ ಮಾರಾಟದಿಂದ ನಿರೀಕ್ಷೆಗೂ ಮೀರಿದ ಲಾಭವಿದೆ. ಮನೆಯಲ್ಲಿನ ಕೆಲ ಸಮಸ್ಯೆಗಳು ಈ ದಿನ ಸುಲಭವಾಗಿ ಪರಿಹಾರವಾಗುವುದು. ಹೊಟ್ಟೆ ನೋವು ಎದುರಾಗಬಹುದು.


ಪದಬಂಧ 5507 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೇರವಲ್ಲದ ನುಡಿ (5)
4.ಮುಪ್ಪು ಹೀಗೆ ಬಂದಿದೆ (3)
5.ವೇಗ ಅಥವಾ ಜೋರು (3)
6.ಗಡಿ ಹತ್ತಿರ ತಲೆದೋರಿದ ಶೀತ (3)
8.ನೆನಪಿಗೆ ಬಾರದಿರುವುದು (3)
9.ಸತಿಯಿರುವ ಅತಿಥಿ ಗೃಹ (3)
12.ನೈಜ್ಯವಲ್ಲದ್ದು ಉಲ್ಟಾ ಆಗಿದೆ (3)
15.ಹಾಸ್ಯ ಈ ವಿಧವಾಗಿ ಬಂದಿದೆ (3)
16.ಉತ್ಸವದ ಸಮಯದಲ್ಲಿ ಎರಚುವ ಕೆಂಪುಬಣ್ಣದಪುಡಿ (3)
17.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ

1.ಬರದಲ್ಲಿ ಹೊರದೂಡುವಿಕೆ (4)
2.ಅತ್ಯಂತ ಚಲುವಾದುದು ಸುರದೊಳಗಿದೆ (5)
3.ಆತುರವಾಗಿ ಓಡುತ್ತಿರುವ ಕುದುರೆ (3)
4.ಒಳ್ಳೆಯ ಅಥವಾ ಕೆಟ್ಟನಾತ (3)
7.ಗಣದವರು ಮಾಡಿದ ಎಣಿಕೆ (3)
8.ಕರುವಿಗೆ ತೋರಿದ ದಯೆ (3)
10.ಕಡಲಿನ ಮೇಲೆ ಕೈಗೊಂಡಿರುವ ಪಯಣ (5)
11.ಕೊನೆಗೆ ಮಾನವನ್ನು ಹೊಂದಿರುವ ಹೆಮ್ಮೆ (4)
13.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
14.ಪದ ಹೇಳಿ ಕನ್ನಡಿಗನು ಪಡೆದ ಡಿಗ್ರಿ! (3)



5506ನೇ ಪದಬಂಧದ ಉತ್ತರ


ಎಡದಿಂದ ಬಲಕ್ಕೆ:

1.ಕಡವರ 3.ಪಾಲುಗಾರ 5.ಸಿತಾರ 6.ಸುರಲೋಕ 8.ಜಠರ 10.ವಕೀಲ 12.ತರತಮ 15.ವಠಾರ 16.ಪರಿಮಾಣ 17.ಗುಣಾಕಾರ

ಮೇಲಿಂದ ಕೆಳಕ್ಕೆ:

1.ಕಡಸು 2.ರಸಿಕ 3.ಪಾರಜ 4.ರವಿ 7.ರಜತೋತ್ಸವ 9.ರತ್ನಖಚಿತ 11.ಲವಣ 12.ತರಗು 13.ಮಧುರ 14.ತಾಪ

ಸುಡೊಕು 5893



3	7			4				9
			6		9		4	2
	9			7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5892 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ನ್ಯಾಷನಲ್ ಹೆರಾಲ್ಡ್ ಆಸ್ತಿ ಜಪ್ತಿ

ಗಾಂಧಿ ಕುಟುಂಬಕ್ಕೆ ಸೇರಿದ ಕಂಪನಿ: ಹಣದ ಅಕ್ರಮ ವರ್ಗಾವಣೆ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನ್ಯಾಷನಲ್ ಹೆರಾಲ್ಡ್' ಜೊತೆ ನಂಟು ಹೊಂದಿರುವ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಮತ್ತು ಯಂಗ್ ಇಂಡಿಯನ್‌ಗೆ ಸೇರಿದ ₹751.9 ಕೋಟಿ ಮೊತ್ತದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಹೇಳಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇ.ಡಿ. ತಿಳಿಸಿದೆ. ಇ.ಡಿ. ಕ್ರಮಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, 'ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಸೋಲು ಖಚಿತವಾಗಿರುವ ಕಾರಣ ಜನರ ಗಮನವನ್ನು ಬೇರೆಡೆ ಸೆಳೆಯಲು ಹೀಗೆ ಮಾಡಲಾಗಿದೆ' ಎಂದು ಹೇಳಿದೆ. 'ಇದು ಸಣ್ಣ ಬುದ್ಧಿಯ, ಸೇಡು ತೀರಿಸಿಕೊಳ್ಳುವ ಕ್ರಮ' ಎಂದು ಕೂಡ ಕಾಂಗ್ರೆಸ್ ಟೀಕಿಸಿದೆ.

ಅಕ್ರಮವಾಗಿ ಸಂಪಾದಿಸಿದ ₹661.69 ಕೋಟಿ ಮೌಲ್ಯದ ಆಸ್ತಿಯನ್ನು ಎಜೆಎಲ್ ಹೊಂದಿತ್ತು, ಎಜೆಎಲ್‌ನ ಷೇರುಗಳಲ್ಲಿ ಹೂಡಿಕೆ ರೂಪದಲ್ಲಿ ಯಂಗ್ ಇಂಡಿಯಾ ₹90.21 ಕೋಟಿ ಹೊಂದಿತ್ತು ಎಂಬುದು ತನಿಖೆಯ ಸಂದರ್ಭದಲ್ಲಿ ಗೊತ್ತಾಯಿತು ಎಂದು ಇ.ಡಿ. ಹೇಳಿದೆ. ದೆಹಲಿ ಹಾಗೂ ಮುಂಬೈನಲ್ಲಿನ ನ್ಯಾಷನಲ್ ಹೆರಾಲ್ಡ್ ಹೌಸ್ ಕಟ್ಟಡಗಳು, ಲಖನೌನಲ್ಲಿನ ನೆಹರೂ ಭವನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯು ಕಾಂಗ್ರೆಸ್ಸಿನ ಮುಖವಾಣಿ ಎಂದು ಪರಿಗಣಿತವಾಗಿದೆ.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ ದೂರು ಆಧರಿಸಿ ನ್ಯಾಯಾಲಯವೊಂದು ಆದೇಶಿಸಿದ ನಂತರದಲ್ಲಿ ಇ.ಡಿ. ತನಿಖೆ ಆರಂಭಿಸಿತ್ತು. ಏಳು ಮಂದಿ ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದು ಹೇಳಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಅಧಿಕಾರಿಗಳು ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಈ ಹಿಂದೆ ಪ್ರಶ್ನಿಸಿದ್ದರು.

ಬಿಜೆಪಿಗೆ ಎದುರಾಗಲಿರುವ ಸೋಲನ್ನು ತಪ್ಪಿಸಲು ಆ ಪಕ್ಷದ ಮೈತ್ರಿಕೂಟದ ಭಾಗವಾಗಿರುವ ಇ.ಡಿ., ಸಿಬಿಐ ಅಥವಾ ಆದಾಯ ತೆರಿಗೆ ಇಲಾಖೆಗೆ ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ವ್ಯಂಗ್ಯವಾಡಿದ್ದಾರೆ.

ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, 'ದೇಶದ ಅತಿದೊಡ್ಡ ವಿರೋಧ ಪಕ್ಷದ ವಿರುದ್ಧವಾಗಿ ಕ್ರಮ ಕೈಗೊಳ್ಳುವುದು ಅಂದರೆ ದೇಶದ ಪ್ರಜಾತಂತ್ರದ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಸಮ ಎಂಬುದನ್ನು ಬಿಜೆಪಿ ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಇ.ಡಿ ಕ್ರಮವನ್ನು ಟೀಕಿಸಿದ್ದಾರೆ. 'ಬಿಜೆಪಿಯು ಗಾಬರಿಗೊಂಡಿರುವುದರ ಸ್ಪಷ್ಟ ಸೂಚನೆ ಇದು... ಚುನಾವಣೆ ಸಂದರ್ಭದಲ್ಲಿ ತನಿಖಾ ಏಜೆನ್ಸಿಗಳನ್ನು ಅದು ದುರ್ಬಳಕೆ ಮಾಡಿಕೊಳ್ಳುವುದು ಹೊಸದೇನೂ ಅಲ್ಲ' ಎಂದು ಖರ್ಗೆ ಹೇಳಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಪ್ರಕಾಶನ ಸಂಸ್ಥೆ ಎಜೆಎಲ್. ಇದರ ಮಾಲೀಕತ್ವವು ಯಂಗ್ ಇಂಡಿಯನ್ ಪ್ರೈ.ಲಿ. ಕೈಯಲ್ಲಿದೆ. ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಯಂಗ್ ಇಂಡಿಯನ್‌ನಲ್ಲಿ ಹೆಚ್ಚಿನ ಷೇರುಪಾಲು (ಇಬ್ಬರೂ ತಲಾ ಶೇ 38ರಷ್ಟು) ಹೊಂದಿದ್ದಾರೆ.

ವಿ.ವಿ ಕಾಯ್ದೆಯ ತಿದ್ದುಪಡಿ ಮಸೂದೆ: ಸ್ಟಾಲಿನ್ ಸಮರ್ಥನೆ

'ವಿ.ವಿ ಕುಲಾಧಿಪತಿ ಮುಖ್ಯಮಂತ್ರಿ'

ಪ್ರಜಾವಾಣಿ ವಾರ್ತೆ



ಎಂ.ಕೆ. ಸ್ಟಾಲಿನ್

ಚೆನ್ನೈ: 'ಸರ್ಕಾರಿ ಅನುದಾನಿತ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರ ಬದಲಾಗಿ ಮುಖ್ಯಮಂತ್ರಿಯೇ ಕುಲಾಧಿಪತಿಯಾಗಬೇಕಿದೆ. ಆಗಷ್ಟೇ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರಕ್ಕೆ ಜನರ ಆಶೋತ್ತರಗಳಿಗೆ ಅನುಗುಣವಾಗಿ ನಿರ್ಣಯ ಕೈಗೊಳ್ಳಲು ಅನುಕೂಲವಾಗುತ್ತದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಪಾದಿಸಿದ್ದಾರೆ.

ತಮಿಳುನಾಡು ವಿಶ್ವವಿದ್ಯಾಲಯಗಳ ಕಾಯ್ದೆಯ ತಿದ್ದುಪಡಿ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು. ಅಧಿವೇಶನದಲ್ಲಿ ಇದಕ್ಕೆ ಮರು ಅಂಗೀಕಾರ ನೀಡಿದ್ದು, ಮತ್ತೆ ರಾಜಭವನಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ. ಮದ್ರಾಸ್ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಸರ್ಕಾರಿ ಅನುದಾನಿತ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕ ಸಂಬಂಧ ರಾಜ್ಯಪಾಲರಿಗೆ ನೀಡಿರುವ ಅಧಿಕಾರವನ್ನು ಮೊಟಕುಗೊಳಿಸುವ ಬಗ್ಗೆ ಇದರಲ್ಲಿ ಪ್ರಸ್ತಾಪಿಸಲಾಗಿದೆ.

ಡಾ.ಜೆ. ಜಯಲಲಿತಾ ಸಂಗೀತ ಮತ್ತು ಲಲಿತ ಕಲಾ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾತನಾಡಿದ ಸ್ಟಾಲಿನ್, ವಿಶ್ವವಿದ್ಯಾಲಯಗಳ ಕಾಯ್ದೆಯ ತಿದ್ದುಪಡಿ ಮಸೂದೆಯನ್ನು ಸಮರ್ಥಿಸಿಕೊಂಡರು.

'ಜಯಲಲಿತಾ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಈ ಸಂಗೀತ ವಿ.ವಿಗೆ ಮುಖ್ಯಮಂತ್ರಿಯನ್ನೇ ಕುಲಾಧಿಪತಿಯಾಗಿ ನೇಮಿಸಿ ಆದೇಶಿಸಿದರು. ವಿ.ವಿಯ ಅಧಿಕಾರವು ಇತರರ (ರಾಜ್ಯಪಾಲ) ಹಿಡಿತದಲ್ಲಿ ಇರಬಾರದು. ಆಗಷ್ಟೇ ನಿರ್ದಿಷ್ಟ ಗುರಿ ಸಾಧನೆ ಸಾಧ್ಯ ಎಂಬುದು ಅವರಿಗೆ ಅರಿವಿತ್ತು. ಹಾಗಾಗಿಯೇ, ವಿ.ವಿಯನ್ನು ಕಾನೂನುಬದ್ಧ ಹಿತಾಸಕ್ತಿಯಿಂದ ರಕ್ಷಿಸುವ ಕೆಲಸ ಮಾಡಿದ್ದಾರೆ' ಎಂದು ಶ್ಲಾಘಿಸಿದರು.

ಗಾಯಕಿ ಪಿ. ಸುಶೀಲಾ ಹಾಗೂ ಸಂಗೀತ ನಿರ್ದೇಶಕ ಪಿ.ಎಂ. ಸುಂದರಂ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದ್ದನ್ನು ಉಲ್ಲೇಖಿಸಿದ ಸ್ಟಾಲಿನ್, 'ಮುಖ್ಯಮಂತ್ರಿಯೇ ಕುಲಾಧಿಪತಿಯಾಗಿದ್ದರೆ ಇಂತಹ ಜನಪರ ನಿರ್ಧಾರ ಕೈಗೊಳ್ಳಲು ಸಹಕಾರಿಯಾಗುತ್ತದೆ' ಎಂದರು. 'ಮಸೂದೆಗೆ ಸಂಬಂಧಿಸಿದ ವಿಷಯವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಹಾಗಾಗಿ, ನಾನು ವಿವಾದ ಸೃಷ್ಟಿಸಲು ಬಯಸುವುದಿಲ್ಲ. ಶೀಘ್ರವೇ, ನ್ಯಾಯಾಲಯದಿಂದ ಸಿಹಿ ಸುದ್ದಿ ಬರುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆರೋಪಿ ಸಹೋದರನಿಂದ ಅತ್ಯಾಚಾರ ಸಂತ್ರಸ್ತೆಯ ಕೊಲೆ

ಪ್ರಜಾವಾಣಿ ವಾರ್ತೆ

ಲಖನೌ: ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ದೂರು ಹಿಂಪಡೆಯಲು ನಿರಾಕರಿಸಿದ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯನ್ನು ಆರೋಪಿಯ ಸಹೋದರನೊಬ್ಬ ಸಾರ್ವಜನಿಕರ ಎದುರಿನಲ್ಲಿಯೇ ಕೊಡಲಿಯಿಂದ ಪ್ರಹಾರ ನಡೆಸಿ ಕೊಲೆಗೈದಿರುವ ಘಟನೆ ಉತ್ತರ ಪ್ರದೇಶದ ಕೌಶಾಂಬಿ ಜಿಲ್ಲೆಯಲ್ಲಿ ನಡೆದಿದೆ.

ಠಾಣೆಯಿಂದ ಮನೆಗೆ ಹಿಂದಿರುಗುತ್ತಿದ್ದ ಆಕೆಯನ್ನು ರಸ್ತೆಯಲ್ಲಿ ಅಡ್ಡಗಟ್ಟಿದ ದುಷ್ಕರ್ಮಿಯು ಈ ಕೃತ್ಯ ಎಸಗಿ ಪರಾರಿಯಾಗಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ಹಿನ್ನೆಲೆ ಏನು?: 20 ವರ್ಷದ ಯುವತಿಯ ಮೇಲೆ ಕಳೆದ ವರ್ಷ ಪವನ್ ನಿಶಾದ್ ಎಂಬಾತ ಅತ್ಯಾಚಾರ ಎಸಗಿದ್ದ ಎಂದು ಹೇಳಲಾಗಿದೆ. ಸಂತ್ರಸ್ತೆಯ ನೆರೆಹೊರೆಯವನಾದ ಈತನ ಕೃತ್ಯದ ಬಗ್ಗೆ ಪಂಚಾಯಿತಿಯಲ್ಲಿ ಸಭೆ ಸೇರಿ ಚರ್ಚಿಸಿ ಯುವತಿಯನ್ನು ವಿವಾಹವಾಗುವಂತೆ ಆತನಿಗೆ ಸೂಚಿಸಲಾಗಿತ್ತು. ಆದರೆ, ಇದಕ್ಕೆ ಆತ ನಿರಾಕರಿಸಿದ್ದ. ಹಾಗಾಗಿ, ಯುವತಿ ನೀಡಿದ್ದ ದೂರಿನ ಮೇರೆಗೆ ಆತನನ್ನು ಬಂಧಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಕೆಲವು ದಿನಗಳ ಹಿಂದೆ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದಿದ್ದ ಪವನ್, ಪ್ರಕರಣದ ರಾಜೀ ಸಂಧಾನಕ್ಕಾಗಿ ಸಂತ್ರಸ್ತೆಯ ಕುಟುಂಬದ ಮೇಲೆ ಒತ್ತಡ ಹೇರಿದ್ದ. ಜತೆಗೆ, ದೂರು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದ್ದ. ಆದರೆ, ಸಂತ್ರಸ್ತೆಯು ಇದಕ್ಕೆ ಒಪ್ಪಿಗೆ ನೀಡಿರಲಿಲ್ಲ ಎಂದು ಹೇಳಿವೆ.

ಪವನ್ ಹಾಗೂ ಆತನ ಸಹೋದರ ಅಶೋಕ್ ನಿಶಾದ್ ಎಂಬಾತ ಕಿರುಕುಳ ನೀಡುತ್ತಿದ್ದಾರೆ ಎಂದು ಸಂತ್ರಸ್ತೆಯು ಸೋಮವಾರ ಠಾಣೆಯಲ್ಲಿ ಮತ್ತೊಂದು ದೂರು ದಾಖಲಿಸಿದ್ದರು. ಸಂಜೆ ಠಾಣೆಯಿಂದ ಮನೆಯತ್ತ ಹೊರಟಿದ್ದ ಆಕೆಯನ್ನು ಅಶೋಕ್ ಅಡ್ಡಗಟ್ಟಿದ್ದಾನೆ. ದೂರು ಹಿಂಪಡೆಯುವಂತೆ ಒತ್ತಾಯಿಸಿದ್ದಾನೆ. ಇದಕ್ಕೆ ಆಕೆ ಒಪ್ಪಿಲ್ಲ. ನಂತರ ಆರೋಪಿಯು ತನ್ನೊಟ್ಟಿಗೆ ತಂದಿದ್ದ ಕೊಡಲಿಯಿಂದ ಆಕೆಯ ಮೇಲೆ ಹಲವು ಬಾರಿ ಪ್ರಹಾರ ನಡೆಸಿದ್ದಾನೆ. ತೀವ್ರ ರಕ್ತಸ್ರಾವಗೊಂಡ ಆಕೆಯು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿಸಿವೆ.

ಸಾರ್ವಜನಿಕರ ಎದುರಿನಲ್ಲಿಯೇ ಈ ದುಷ್ಕೃತ್ಯ ನಡೆದರೂ ಯಾರೊಬ್ಬರು ಆಕೆಯ ರಕ್ಷಣೆಗೆ ಮುಂದಾಗಿಲ್ಲ. ಆತನ ಮೇಲೆ ಕೊಲೆ ಪ್ರಕರಣವೊಂದು ದಾಖಲಾಗಿದ್ದು, ಕೆಲವು ದಿನಗಳ ಹಿಂದೆ ಜಾಮೀನಿನ ಮೇಲೆ ಆತ ಹೊರಬಂದಿದ್ದ ಎಂದು ತಿಳಿಸಿವೆ.

'ಬೈಜೂಸ್ ವಿರುದ್ಧದ ತನಿಖೆ ಅಂತಿಮ ಹಂತಕ್ಕೆ'

ನವದೆಹಲಿ (ಪಿಟಿಐ): 'ಬೈಜೂಸ್' ಸಂಸ್ಥೆ, ಅದರ ಸಿಇಒ, ಸಹ ಸ್ಥಾಪಕ ರವೀಂದ್ರನ್ ಬೈಜು ವಿದೇಶಿ ವಿನಿಮಯ ಕಾಯ್ದೆ (ಫೆಮಾ) ಉಲ್ಲಂಘಿಸಿದ್ದಾರೆ ಎಂಬ ಪ್ರಕರಣದ ತನಿಖೆ ಅಂತಿಮ ಹಂತಕ್ಕೆ ತಲುಪಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ತನಿಖಾ ಸಂಸ್ಥೆಯು ಈ ವರ್ಷದ ಏಪ್ರಿಲ್‌ನಲ್ಲಿ ಬೈಜೂಸ್ ಮತ್ತು ಥಿಂಕ್ ಅಂಡ್ ಲರ್ನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳಿಗೆ ಸೇರಿದ ಎರಡು ಕಚೇರಿ ಮತ್ತು ಒಂದು ವಸತಿ ತಾಣದಲ್ಲಿ ಶೋಧ ನಡೆಸಿತ್ತು. ಫೆಮಾ ಪ್ರಾಧಿಕಾರವು ಶೀಘ್ರದಲ್ಲಿಯೇ ಕಂಪನಿಗೆ ಷೋಕಾಸ್ ನೋಟಿಸ್ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ನಿರಾಕರಣೆ: ಫೆಮಾ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂಬ ಮಾಧ್ಯಮ ವರದಿಗಳನ್ನು ಬೈಜೂಸ್ ಸಂಸ್ಥೆಯು ನಿರಾಕರಿಸಿದೆ.

ಸಲಿಂಗ ವಿವಾಹ: ಥಾಯ್ಲೆಂಡ್ ಸಂಪುಟ ಒಪ್ಪಿಗೆ

ಬ್ಯಾಂಕಾಕ್ (ಎಪಿ): ಸಲಿಂಗ ವಿವಾಹಕ್ಕೆ ಅನುಮತಿ ನೀಡುವುದಕ್ಕಾಗಿ ನಾಗರಿಕ ಸಂಹಿತೆಯ ತಿದ್ದುಪಡಿಗೆ ಥಾಯ್ಲೆಂಡ್ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಈ ಕುರಿತ ಕರಡು ಮಸೂದೆಯು ಮುಂದಿನ ತಿಂಗಳು ನಡೆಯುವ ಸಂಸತ್ತಿನ ಅಧಿವೇಶನದಲ್ಲಿ ಮಂಡನೆಯಾಗುವ ನಿರೀಕ್ಷೆಯಿದೆ.

ತಪ್ಪು ಮಾಹಿತಿ ಬೇಡ: ಪತಂಜಲಿಗೆ ತಾಕೀತು

ನವದೆಹಲಿ (ಪಿಟಿಐ): ಪತಂಜಲಿ ಆಯುರ್ವೇದ್ ಕಂಪನಿಯು ತಾನು ತಯಾರಿಸುವ ಔಷಧಗಳು ಹಲವು ಕಾಯಿಲೆಗಳನ್ನು ವಾಸಿ ಮಾಡುತ್ತವೆ ಎಂದು ಹೇಳುವ ಜಾಹೀರಾತುಗಳಲ್ಲಿ 'ತಪ್ಪು ದಾರಿಗೆ ಎಳೆಯುವ' ಮತ್ತು 'ಸತ್ಯಕ್ಕೆ ದೂರವಾದ' ಸಂದೇಶಗಳು ಇರದಂತೆ ನೋಡಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

'ಕಂಪನಿಯ, ತಪ್ಪುದಾರಿಗೆ ಎಳೆಯುವ ಹಾಗೂ ಸತ್ಯಕ್ಕೆ ದೂರವಾದ ಜಾಹೀರಾತುಗಳು ತಕ್ಷಣಕ್ಕೆ ಸ್ಥಗಿತವಾಗಬೇಕು. ಕಂಪನಿಯು ಕಾನೂನು ಉಲ್ಲಂಘಿಸುವುದನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸುತ್ತದೆ...' ಎಂದು ನ್ಯಾಯಮೂರ್ತಿಗಳಾದ ಅಹ್ಸನುದ್ದೀನ್ ಅಮಾನುಲ್ಲಾ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ನ್ಯಾಯಪೀಠವು ಹೇಳಿದೆ. ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

ಲಸಿಕೆ ಅಭಿಯಾನ ಹಾಗೂ ಆಧುನಿಕ ಔಷಧಗಳ ವಿರುದ್ಧ ಬಾಬಾ ರಾಮದೇವ್ ಅವರು ಸುಳ್ಳು ಅಭಿಯಾನ ನಡೆಸಿದ್ದಾರೆ ಎಂದು ಐಎಂಎ ಅರ್ಜಿ ಸಲ್ಲಿಸಿದೆ.

ನಿರ್ದಿಷ್ಟ ಕಾಯಿಲೆಯನ್ನು ಗುಣಪಡಿಸುತ್ತದೆ ಎಂದು ಯಾವುದೇ ಉತ್ಪನ್ನದ ವಿಚಾರದಲ್ಲಿ ತಪ್ಪಾಗಿ ಮಾಹಿತಿ ನೀಡಿದರೆ, ಪ್ರತಿ ಉತ್ಪನ್ನಕ್ಕೆ ₹1 ಕೋಟಿಯಷ್ಟು ದಂಡ ವಿಧಿಸುವುದನ್ನು ಪರಿಶೀಲಿಸಬೇಕಾಗಬಹುದು ಎಂದು ನ್ಯಾಯಪೀಠ ಎಚ್ಚರಿಕೆ ನೀಡಿದೆ.

ವಿಚಾರಣೆಯನ್ನು ಮುಂದೂಡಲಾಗಿದೆ.

ಇಂಡೊನೇಷ್ಯಾ ಆಸ್ಪತ್ರೆ ಈಗ ಕದನದ ಕೇಂದ್ರಬಿಂದು

ಗಾಜಾ ಆವರಿಸಿದ ಇಸ್ರೇಲ್ ಭೂಸೇನೆ

ಡೀರ್ ಅಲ್-ಬಾಲಾಹ್ (ಗಾಜಾ ಪಟ್ಟಿ) (ಎಪಿ): ಸೇನೆಯ ವಾಯುದಾಳಿಯಿಂದ ತತ್ತರಿಸಿ, ಇಂಧನ ಹಾಗೂ ಅಗತ್ಯ ವಸ್ತುಗಳಿಗೆ ತೀವ್ರ ಸಮಸ್ಯೆ ಉಂಟಾಗಿರುವ ಗಾಜಾ ಪಟ್ಟಿಯನ್ನು ಈಗ ಇಸ್ರೇಲ್‌ನ ಭೂಸೇನೆ ಬಹುತೇಕ ಆವರಿಸಿದೆ.

ಭೂಸೇನೆಯ ಶಸ್ತ್ರಸಜ್ಜಿತ ಯೋಧರು ಈಗ ಉತ್ತರ ಗಾಜಾದುದ್ದಕ್ಕೂ ಕಾರ್ಯಾಚರಣೆ ಚುರುಕುಗೊಳಿಸಿದ್ದು, ನಗರ ನಿರಾಶ್ರಿತರ ಶಿಬಿರ ಹಾಗೂ ಸಮೀಪದ ಆಸ್ಪತ್ರೆಗಳ ಆಸುಪಾಸಿನಲ್ಲಿ ಹಮಾಸ್ ಬಂಡುಕೋರರನ್ನು ಹತ್ತಿಕ್ಕಲು ಕದನ ಮುಂದುವರಿಸಿದ್ದಾರೆ.

ಹಮಾಸ್ ಬಂಡುಕೋರರನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಸತತ ಏಳನೇ ವಾರವೂ ದಾಳಿ ಮುಂದುವರಿಸಿದೆ. ಹಮಾಸ್ ಬಂಡುಕೋರರು ಈಗ ಗುಂಪುಗಳಾಗಿ ಬೇರ್ಪಟ್ಟಿದ್ದು, ಇತರೆ ನಗರಗಳಲ್ಲಿ ನೆಲೆಯೂರಿದ್ದಾರೆ ಎಂದು ಇಸ್ರೇಲ್ ಪ್ರತಿಪಾದಿಸಿದೆ.

ಸೇನೆ ಈಗ ಗಾಜಾಸಿಟಿಯ ಜಬಾಲಿಯ ವಲಯವನ್ನು ಆವರಿಸಿದೆ. ಇಲ್ಲಿನ ಇಂಡೊನೇಷ್ಯಾ ಆಸ್ಪತ್ರೆಯ ಹೊರ ಭಾಗದಲ್ಲಿ ಕದನ ತೀವ್ರಗೊಂಡಿದೆ. ಶೆಲ್ ದಾಳಿಯಿಂದಾಗಿ ಸೋಮವಾರ ಇದೇ ಆಸ್ಪತ್ರೆಯಲ್ಲಿ 12 ಜನರು ಹತರಾಗಿದ್ದರು.

ಆಸ್ಪತ್ರೆಯಿಂದ 200 ರೋಗಿಗಳನ್ನು ಸ್ಥಳಾಂತರಿಸಲಾಗಿದೆ. ಸದ್ಯ, ಮೂಲ ಸೌಕರ್ಯ ಕಡಿತಗೊಳಿಸುವ ಆಸ್ಪತ್ರೆಯಲ್ಲಿ ನೂರಾರು ಸಂಖ್ಯೆಯಲ್ಲಿ ರೋಗಿಗಳು, ನಿರಾಶ್ರಿತರು ಸಿಕ್ಕಿಬಿದ್ದಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಆಸ್ಪತ್ರೆ ಮೇಲೆ ಶೆಲ್ ದಾಳಿ ನಡೆಸಲಾಗಿದೆ ಎಂಬುದನ್ನು ಇಸ್ರೇಲ್ ಮಂಗಳವಾರ ತಳ್ಳಿಹಾಕಿದೆ. ಆಸ್ಪತ್ರೆಯ ಒಳಗಿನಿಂದ ಬಂಡುಕೋರರು ಗುಂಡಿನ ದಾಳಿ ನಡೆಸಿದ್ದರು. ಪ್ರತಿಯಾಗಿ ನಮ್ಮ ಯೋಧರೂ ದಾಳಿ ನಡೆಸಿದ್ದಾರೆ ಎಂದು ತಿಳಿಸಿದೆ. ಗಾಜಾ ಆರೋಗ್ಯ ಸಚಿವಾಲಯದ ಪ್ರಕಾರ, 200 ಗಾಯಾಳುಗಳನ್ನು ಸ್ಥಳಾಂತರಿಸಿದ್ದು, ಇನ್ನೂ 600 ರೋಗಿಗಳು, 2000 ನಿರಾಶ್ರಿತರು ಸಿಕ್ಕಿಬಿದ್ದಿದ್ದಾರೆ. ಇಂಥದೇ ಸ್ಥಿತಿ ಕೆಲದಿನಗಳ ಹಿಂದೆ ಅಲ್ ಶಿಫಾ ಆಸ್ಪತ್ರೆಯಲ್ಲಿತ್ತು.

ಕದನದ ತೀವ್ರತೆ ಹಾಗೂ ಗುಂಡಿನ ಚಕಮಕಿಯಿಂದಾಗಿ ಗಾಯಾಳುಗಳಿರುವ ಆಂಬುಲೆನ್ಸ್‌ಗಳು ಆಸ್ಪತ್ರೆಗೆ ಬರಲು ಆಗುತ್ತಿಲ್ಲ ಎನ್ನುತ್ತಾರೆ ಅಲ್ಲಿನ ವೈದ್ಯಕೀಯ ಸಿಬ್ಬಂದಿ ಮಾರ್ವನ್ ಅಬ್‌ದಲ್ಲಾ. ಈ ಕುರಿತು ಸೇನೆ ಪ್ರತಿಕ್ರಿಯೆ ನೀಡಿಲ್ಲ.



ಗಾಜಾಪಟ್ಟಿಯಲ್ಲಿ ವಶಕ್ಕೆ ಪಡೆದ ಪ್ಯಾಲೆಸ್ಟೀನಿಯರ ಕಣ್ಣಿಗೆ ಬಟ್ಟೆಕಟ್ಟಿ ಇಸ್ರೇಲ್‌ನ ಸೈನಿಕರು ವಾಹನದಲ್ಲಿ ಗಾಜಾದಿಂದ ಹೊರಗೆ ಕರೆದೊಯ್ದರು –ಎಎಫ್‌ಪಿ ಚಿತ್ರ



ಇಸ್ರೇಲ್–ಹಮಾಸ್ ಸಮರ

'ನೀರು, ಆಹಾರಕ್ಕೆ ಹೆಚ್ಚಿದ ಪರಿತಾಪ'

- ಗಾಜಾಪಟ್ಟಿಯಲ್ಲಿ ಈಗ ವಿದ್ಯುತ್, ನೀರು ಪೂರೈಕೆ ಬಹುತೇಕ ಸ್ಥಗಿತವಾಗಿದೆ. ಜನರು ಆಹಾರ ಧಾನ್ಯಗಳ ನೆರವಿನ ನಿರೀಕ್ಷೆಯಲ್ಲಿದ್ದು, ವಿಶ್ವಸಂಸ್ಥೆ ನೆರವಿನ ಸಂಘಟನೆಗಳು ನಿರಾಶ್ರಿತರ ಕ್ಯಾಂಪ್‌ಗಳಲ್ಲಿ ಆಹಾರದ ಚೀಲಗಳನ್ನು ವಿತರಿಸಿವೆ.
- ಹೆಚ್ಚಿನ ಕಟ್ಟಡಗಳು ಜಖಂಗೊಂಡಿದ್ದು, ನಗರ ಪಾಳುಭೂಮಿಯ ಸ್ವರೂಪ ಪಡೆದಿದೆ. ವಿಶ್ವಸಂಸ್ಥೆಯ ಏಜೆನ್ಸಿ ಪ್ರಕಾರ, ಗಾಜಾದ ಉತ್ತರ ಭಾಗದಲ್ಲಿ ಸದ್ಯ ಸುಮಾರು 1.6 ಲಕ್ಷ ಜನರು ಉಳಿದಿರಬಹುದು.
- ಗಾಜಾದ ದಕ್ಷಿಣದಲ್ಲಿ ಸಾವಿರಾರು ಪ್ಯಾಲೆಸ್ಟೀನಿಯರು ವಿಶ್ವಸಂಸ್ಥೆ ನಡೆಸುತ್ತಿರುವ ಶಾಲೆಗಳು, ಇತರೆಡೆ ಆಶ್ರಯ ಪಡೆದಿದ್ದಾರೆ. ದಟ್ಟಣೆ ಹೆಚ್ಚಿದಂತೆ ಹೆಚ್ಚಿನವರು ನಿದ್ರೆ, ವಿರಾಮಕ್ಕೆ ರಸ್ತೆಯನ್ನೇ ಆಶ್ರಯಿಸುವಂತಾಗಿದೆ.
- ಮೂರು ಆಸ್ಪತ್ರೆಗಳು ರೋಗಿಗಳ ಸ್ಥಳಾಂತರಕ್ಕೆ ನೆರವು ಕೋರಿವೆ. ಇದಕ್ಕಾಗಿ ಯೋಜನೆ ರೂಪಿಸಲಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

ಐಟಿಎಫ್ ಟೆನಿಸ್: ಕ್ವಾರ್ಟರ್ ಫೈನಲ್‌ಗೆ ರುತುಜಾ–ಝಿಬೆಕ್ ಜೋಡಿ

ವೈದೇಹಿ, ಶ್ರೀವಲ್ಲಿ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ವೈದೇಹಿ ಚೌಧರಿ ಮತ್ತು ಶ್ರೀವಲ್ಲಿ ರಶ್ಮಿಕಾ ಅವರು ಇಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳೆಯರ ವಿಶ್ವ ಟೂರ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬೌರಿಂಗ್ ಇನ್‌ಸ್ಟಿಟ್ಯೂಟ್ ಟೆನಿಸ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ವೈದೇಹಿ 6–3, 6–3 ರಿಂದ ಅಂಜಲಿ ಅವರನ್ನು ಮಣಿಸಿದರು.

ಈಚೆಗೆ ನಡೆದಿದ್ದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದ ಶ್ರೀವಲ್ಲಿ ಅವರು 6–1, 7–5 ರಿಂದ ಹುಮೇರಾ ಬಹಾರ್ಮಸ್ ಎದುರು ಗೆದ್ದರು. ಮೊದಲ ಸೆಟ್ ಸುಲಭವಾಗಿ ಜಯಿಸಿದ ರಶ್ಮಿಕಾ ಅವರಿಗೆ ಎರಡನೇ ಸೆಟ್‌ನಲ್ಲಿ ಸಾಕಷ್ಟು ಪೈಪೋಟಿ ಎದುರಿಸಬೇಕಾಯಿತು. 5–5 ರಲ್ಲಿ ಸಮಬಲ ಕಂಡುಬಂದ ಬಳಿಕ 11ನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅವರು ಮುಂದಿನ ಗೇಮ್‌ನಲ್ಲಿ ತಮ್ಮ ಸರ್ವ್ ಕಾಪಾಡಿಕೊಂಡು ಪಂದ್ಯ ಜಯಿಸಿದರು.

ಅರ್ಹತಾ ಹಂತದಲ್ಲಿ ಗೆದ್ದು ಬಂದಿದ್ದ ಯಶಸ್ವಿನಿ ಪನ್ವಾರ್ ಮೊದಲ ಸುತ್ತಿನಲ್ಲೇ ಎಡವಿದರು. ಆರನೇ ಶ್ರೇಯಾಂಕದ ಆಟಗಾರ್ತಿ ಸ್ವಿಟ್ಜರ್‌ಲೆಂಡ್‌ನ ಜೆನ್ನಿ ಡುಯೆಸ್ಟ್ 6–3, 6–2 ರಿಂದ ಯಶಸ್ವಿನಿ ಅವರನ್ನು ಮಣಿಸಿದರು.

ಇನ್ನೊಂದು ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಆಟಗಾರ್ತಿ ಇಟಲಿಯ ಡಿಲೆಟಾ ಚೆರುಬಿನಿ 6–1, 6–2 ರಿಂದ ಅನಸ್ತೇಸಿಯಾ ಸುಖೋಟಿನಾ ವಿರುದ್ಧ ಗೆದ್ದರು.

ಕ್ವಾರ್ಟರ್ ಫೈನಲ್‌ಗೆ ರುತುಜಾ–ಝಿಬೆಕ್: ಡಬಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ರುತುಜಾ ಭೋಸಲೆ ಮತ್ತು ಕಜಕಸ್ತಾನದ ಝಿಬೆಕ್ ಕುಲಂಬಯೇವಾ 6–1, 6–0 ರಿಂದ ಆಕಾಂಕ್ಷಾ ದಿಲೀಪ್– ನಿಧಿತ್ರಾ ರಾಜಮೋಹನ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. 43 ನಿಮಿಷ ನಡೆದ ಹಣಾಹಣಿಯಲ್ಲಿ ಭಾರತ– ಕಜಕಸ್ತಾನದ ಜೋಡಿ ಒಂದು ಗೇಮ್‌ಅನ್ನು ಮಾತ್ರ ಎದುರಾಳಿಗಳಿಗೆ ಬಿಟ್ಟುಕೊಟ್ಟಿತು.

ಡಬಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಪೂಜಾ ಇಂಗಳೆ–ಸಂದೀಪ್ತಿ ಸಿಂಗ್ ರಾವ್ 7–5, 6–0 ರಿಂದ ಶರ್ಮದಾ ಬಾಲು– ಡೆಮಿ ಟ್ರಾನ್ (ನೆದರ್ಲೆಂಡ್ಸ್) ವಿರುದ್ಧ; ಜೆನ್ನಿ ಡುಯೆಸ್ಟ್–ಏಕ್ತರಿನಾ ಯಶಿನಾ 6–4, 7–5 ರಿಂದ ಝೀಲ್ ದೇಸಾಯಿ–ಅನಸ್ತೇಸಿಯಾ ಸುಖೋಟಿನಾ ವಿರುದ್ಧ; ಡಿಲೆಟಾ ಚೆರುಬಿನಿ–ಆಂಟೋನಿಯಾ ಶ್ಮಿತ್ (ಜರ್ಮನಿ) 6–2, 6–2 ರಿಂದ ವೈಷ್ಣವಿ –ಶ್ರಾವ್ಯ ಶಿವಾನಿ ವಿರುದ್ಧ ಗೆದ್ದು ಎಂಟರಘಟ್ಟ ಪ್ರವೇಶಿಸಿದರು.

ರುತುಜಾಗೆ ಸನ್ಮಾನ: ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಮಿಶ್ರ ಡಬಲ್ಸ್ ವಿಭಾಗದ ಚಿನ್ನ ಜಯಿಸಿದ್ದ ರುತುಜಾ ಅವರಿಗೆ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ವತಿಯಿಂದ ₹1 ಲಕ್ಷ ಮೊತ್ತದ ಚೆಕ್ ನೀಡಿ ಸನ್ಮಾನಿಸಲಾಯಿತು.



ಡಬಲ್ಸ್ ವಿಭಾಗದ ಪಂದ್ಯದಲ್ಲಿ ಭಾರತದ ರುತುಜಾ ಭೋಸಲೆ ಚೆಂಡನ್ನು ರಿಟರ್ನ್ ಮಾಡಲು ಮುಂದಾದರು. ಕಜಕಸ್ತಾನದ ಝಿಬೆಕ್ ಕುಲಂಬಯೇವಾ ಇದ್ದಾರೆ –ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ಧನ್

ವಿಶ್ವಕಪ್ ಟೂರ್ನಿ: 12.50 ಲಕ್ಷ ಮಂದಿ ವೀಕ್ಷಣೆ

ನವದೆಹಲಿ (ಎಪಿ): ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯು ವೀಕ್ಷಕರ ಸಂಖ್ಯೆಯಲ್ಲಿ ಹೊಸ ದಾಖಲೆ ಬರೆದಿದೆ. ಭಾನುವಾರ ಕೊನೆಗೊಂಡ ಟೂರ್ನಿಯ ಪಂದ್ಯಗಳನ್ನು 12.50 ಲಕ್ಷಕ್ಕೂ ಅಧಿಕ ಮಂದಿ ಕ್ರೀಡಾಂಗಣಗಳಲ್ಲಿ ವೀಕ್ಷಿಸಿದ್ದಾರೆ ಎಂದು ಐಸಿಸಿ ಮಂಗಳವಾರ ಹೇಳಿದೆ.

ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಆತಿಥ್ಯದಲ್ಲಿ 2015 ರಲ್ಲಿ ನಡೆದಿದ್ದ ಟೂರ್ನಿಯ ಪಂದ್ಯಗಳನ್ನು 10.16 ಲಕ್ಷ ಮಂದಿ ವೀಕ್ಷಿಸಿದ್ದರೆ, 2019 ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೂರ್ನಿಯ ವೀಕ್ಷಕರ ಸಂಖ್ಯೆ 7.52 ಲಕ್ಷದಷ್ಟಿತ್ತು.

ಭಾನುವಾರ ನಡೆದಿದ್ದ ಫೈನಲ್‌ನಲ್ಲಿ ಭಾರತ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿದ್ದ ಆಸ್ಟ್ರೇಲಿಯಾ ದಾಖಲೆಯ ಆರನೇ ಬಾರಿ ಟ್ರೋಫಿ ಜಯಿಸಿತ್ತು.

ಟೂರ್ನಿಯಲ್ಲಿ ಒಟ್ಟು 48 ಪಂದ್ಯಗಳು ನಡೆದಿದ್ದವು. ಪ್ರತಿ ಪಂದ್ಯವನ್ನು ಸರಾಸರಿ 26 ಸಾವಿರ ಮಂದಿ ವೀಕ್ಷಿಸಿದ್ದಾರೆ.

ಬ್ಯಾಡ್ಮಿಂಟನ್: ಚೀನಾ ಮಾಸ್ಟರ್ಸ್ ಸೂಪರ್ 750 ಟೂರ್ನಿ

ಎರಡನೇ ಸುತ್ತಿಗೆ ಪ್ರಣಯ್

ಶೆನ್‌ಝೆನ್ (ಪಿಟಿಐ): ಭಾರತದ ಆಟಗಾರ ಎಚ್.ಎಸ್. ಪ್ರಣಯ್, ಮಂಗಳವಾರ ಆರಂಭವಾದ ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಂಗಳವಾರ ಚೀನಾ ತೈಪೆಯ ಚೌ ತಿಯೆನ್ ಚೆನ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಬೆನ್ನು ನೋವಿನಿಂದ ಕೆಲವು ಟೂರ್ನಿಗಳನ್ನು ಕಳೆದುಕೊಂಡಿದ್ದ, 31 ವರ್ಷದ ಪ್ರಣಯ್ ಮೊದಲ ಸುತ್ತಿನಲ್ಲಿ 21–18, 22–20 ರಿಂದ ವಿಶ್ವ ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಚೆನ್ ಅವರನ್ನು ಸೋಲಿಸಿದರು. ಆ ಮೂಲಕ ಕಳೆದ ವಾರ ಜಪಾನ್‌ನಲ್ಲಿ ಅನುಭವಿಸಿದ ಸೋಲಿಗೆ ಸೇಡು ತೀರಿಸಿಕೊಂಡರು.

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಆಟಗಾರ, ಎರಡನೇ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಲೀ ಚುಕ್ ಯಿಯು ಮತ್ತು ಡೆನ್ಮಾರ್ಕ್‌ನ ಮ್ಯಾಗ್ನಸ್ ಜೊಹಾನ್ಸೆನ್ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ 21–13, 21–10 ರಿಂದ ಇಂಗ್ಲೆಂಡ್‌ನ ಬೆನ್ ಲೇನ್– ಸೀನ್ ವೆಂಡಿ ಅವರನ್ನು ಸೋಲಿಸಿ ಶುಭಾರಂಭ ಮಾಡಿತು. ಸಾತ್ವಿಕ್–ಚಿರಾಗ್ ಜೋಡಿ ಏಷ್ಯನ್ ಕ್ರೀಡಾಕೂಟದ ಚಾಂಪಿಯನ್ ಆಗಿದೆ. ಭಾರತದ ಆಟಗಾರರು ಮುಂದಿನ ಸುತ್ತಿನಲ್ಲಿ ಜಪಾನ್‌ನ ಅಕಿರಾ ಕೊಗಾ–ತೈಚಿ ಸೈಟೊ ಜೋಡಿಯನ್ನು ಎದುರಿಸಲಿದ್ದಾರೆ.

ಮಹಿಳಾ ವಿಭಾಗದಲ್ಲಿರುವ ಭಾರತದ ಏಕೈಕ ಆಟಗಾರ್ತಿ ಆಕರ್ಷಿ ಕಶ್ಯಪ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಚೀನಾದ ಝಾಂಗ್ ಯಿ ಮನ್ ಅವರು ಕೇವಲ 33 ನಿಮಿಷಗಳಲ್ಲಿ 21–12, 21–14 ರಿಂದ ಆಕರ್ಷಿ ಅವರನ್ನು ಮಣಿಸಿದರು.


ಎರಡನೇ ಸುತ್ತು ಪ್ರವೇಶಿಸಿದ ಎಚ್.ಎಸ್.ಪ್ರಣಯ್

ಬಿಡಬ್ಲ್ಯುಎಫ್ ಪ್ರಶಸ್ತಿ: ಸ್ಪರ್ಧೆಯಲ್ಲಿ ಸಾತ್ವಿಕ್–ಚಿರಾಗ್

ನವದೆಹಲಿ (ಪಿಟಿಐ): ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) 'ವರ್ಷದ ಆಟಗಾರ' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಭಾರತದ ಜೋಡಿ ಈ ಋತುವಿನಲ್ಲಿ ಪುರುಷರ ಡಬಲ್ಸ್ ವಿಭಾಗದಲ್ಲಿ ಗಮನಾರ್ಹ ಪ್ರದರ್ಶನ ನೀಡಿದೆ. ಬಿಡಬ್ಲ್ಯುಎಫ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಡಿ.11 ರಂದು ಹಾಂಗ್‌ಝೌನಲ್ಲಿ ನಡೆಯಲಿದೆ. ಒಟ್ಟು ಎಂಟು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

ನಿಧನ ವಾರ್ತೆ

ಪಿ.ಸಿ.ಅಪ್ಪಾಜಿ



ಬೆಂಗಳೂರು: 'ಪ್ರಜಾವಾಣಿ'ಯ ಕ್ರೀಡಾ ವಿಭಾಗದಲ್ಲಿ ಸುಮಾರು ಮೂರು ದಶಕಗಳ ಕಾಲ ಕಾರ್ಯನಿರ್ವಹಿಸಿದ್ದ ಪತ್ರಕರ್ತ ಪಿ.ಸಿ. ಅಪ್ಪಾಜಿ (ಪೇರಿಯಂಡ ಅಪ್ಪಾಜಿ) (80) ಅವರು ಮಂಗಳವಾರ ನಗರದಲ್ಲಿ ವಯೋಸಹಜ ಕಾರಣದಿಂದ ನಿಧನರಾದರು.

ಅವರ ಪತ್ನಿ ಒಂದೂವರೆ ವರ್ಷದ ಹಿಂದೆ ನಿಧನರಾಗಿದ್ದು ದಂಪತಿಗೆ ಮಕ್ಕಳಿರಲಿಲ್ಲ. ಕೊಡಗು ಪ್ರೆಸ್ ಹೆಸರಿನ ದೈನಿಕದಲ್ಲಿ ವೃತ್ತಿ ಜೀವನ ಆರಂಭಿಸಿದ್ದ ಅವರು ನಂತರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲೂ ಕೆಲಕಾಲ ಕಾರ್ಯನಿರ್ವಹಿಸಿದ್ದರು. 1972ರ ಸುಮಾರಿಗೆ 'ಪ್ರಜಾವಾಣಿ'ಗೆ ಸೇರ್ಪಡೆಯಾದ ಅವರು ಸೇವಾವಧಿಯ ಕೊನೆಯ ಕೆಲವು ವರ್ಷ ಕುದುರೆ ರೇಸ್ ವರದಿ ಮಾಡುತ್ತಿದ್ದರು. 2002ರಲ್ಲಿ ನಿವೃತ್ತರಾಗಿದ್ದರು. ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 11 ಕ್ಕೆ ಸುಮನಹಳ್ಳಿಯ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ

ಪಂಕಜ್‌ಗೆ 26ನೇ ಕಿರೀಟ

ದೋಹಾ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಅವರು ದೋಹಾದಲ್ಲಿ ನಡೆದ ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಕಿರೀಟ ಮುಡಿಗೇರಿಸಿಕೊಂಡರು. ಬಿಲಿಯರ್ಡ್ಸ್ ಮತ್ತು ಸ್ನೂಕರ್‌ನಲ್ಲಿ ಅವರು ಒಟ್ಟಾರೆಯಾಗಿ ಗೆದ್ದ 26ನೇ ವಿಶ್ವ ಕಿರೀಟ ಇದು.

ಮಂಗಳವಾರ ನಡೆದ ಫೈನಲ್‌ನಲ್ಲಿ ಪಂಕಜ್ 1000– 416 ರಿಂದ ಭಾರತದವರೇ ಆದ ಸೌರವ್ ಕೊಠಾರಿ ಅವರನ್ನು ಮಣಿಸಿದರು. ಕಳೆದ ವರ್ಷ ಕ್ವಾಲಾಂಪುರದಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲೂ ಇವರಿಬ್ಬರು ಪೈಪೋಟಿ ನಡೆಸಿದ್ದರು.

ಆರಂಭದಲ್ಲಿ 26–180 ರಿಂದ ಹಿನ್ನಡೆಯಲ್ಲಿದ್ದ ಪಂಕಜ್, ಆ ಬಳಿಕ ನಿಖರ ಪ್ರದರ್ಶನ ನೀಡಿದರು. ಒಂದು ಬ್ರೇಕ್‌ನಲ್ಲಿ 214 ಪಾಯಿಂಟ್ಸ್ ಗಳಿಸಿ ಮುನ್ನಡೆ ಸಾಧಿಸಿದ ಅವರು ಗೆಲುವಿನತ್ತ ಹೆಜ್ಜೆಯಿಟ್ಟರು.

ಬೆಂಗಳೂರಿನ ಪಂಕಜ್ ಅವರು 2003 ರಲ್ಲಿ ತಮ್ಮ ಮೊದಲ ವಿಶ್ವ ಚಾಂಪಿಯನ್‌ಪಿಪ್ ಗೆದ್ದುಕೊಂಡಿದ್ದರು. ಬಿಲಿಯರ್ಡ್ಸ್ ಸ್ಪರ್ಧೆಯ 'ಪಾಯಿಂಟ್ ಫಾರ್ಮ್ಯಾಟ್'ನಲ್ಲಿ ಎಂಟು ಹಾಗೂ 'ಲಾಂಗ್ ಫಾರ್ಮ್ಯಾಟ್'ನಲ್ಲಿ ಒಂಬತ್ತು ಪ್ರಶಸ್ತಿ ಜಯಿಸಿದ್ದಾರೆ. ವಿಶ್ವ ತಂಡ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ಅನ್ನು ಒಮ್ಮೆ ಗೆದ್ದುಕೊಂಡಿದ್ದಾರೆ. ಸ್ನೂಕರ್‌ನಲ್ಲಿ ಅವರು ಎಂಟು ಸಲ ವಿಶ್ವ ಚಾಂಪಿಯನ್ ಆಗಿದ್ದಾರೆ.

'ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿರುವುದು ನನ್ನ ಯಶಸ್ಸಿನ ಗುಟ್ಟು. ದೇಶಕ್ಕಾಗಿ ಈ ರೀತಿ ವಿಶ್ವ ಕಿರೀಟ ತಂದುಕೊಡುವುದು ನನಗೆ ಹೆಚ್ಚಿನ ಉತ್ತೇಜನ ನೀಡುತ್ತದೆ' ಎಂದು ಪಂಕಜ್ ಪ್ರತಿಕ್ರಿಯಿಸಿದ್ದಾರೆ.



ಟ್ರೋಫಿಯೊಂದಿಗೆ ಪಂಕಜ್ ಅಡ್ವಾಣಿ (ಬಲ) ಹಾಗೂ ಸೌರವ್ ಕೊಠಾರಿ

ಟಿ–20 ಸರಣಿಗೆ ವಾರ್ನರ್ ಅಲಭ್ಯ

ಮೆಲ್ಬರ್ನ್ (ಪಿಟಿಐ): ಇತ್ತೀಚಿನ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ಪರ ಅತಿ ಹೆಚ್ಚು ರನ್ ಗಳಿಸಿದ್ದ ಅನುಭವಿ ಆರಂಭ ಆಟಗಾರ ಡೇವಿಡ್ ವಾರ್ನರ್ ಅವರಿಗೆ ಭಾರತ ವಿರುದ್ಧ ಐದು ಪಂದ್ಯಗಳ ಟಿ–20 ಸರಣಿಗೆ ವಿಶ್ರಾಂತಿ ನೀಡಲು ಆಯ್ಕೆಗಾರರು ನಿರ್ಧರಿಸಿದ್ದಾರೆ.

ವಾರ್ನರ್ ಭಾನುವಾರ ಮುಕ್ತಾಯಗೊಂಡಿದ್ದ ಏಕದಿನ ವಿಶ್ವಕಪ್‌ನಲ್ಲಿ 535 ರನ್ ಗಳಿಸಿದ್ದರು. ಮ್ಯಾಥ್ಯೂ ವೇಡ್ ನೇತೃತ್ವದ ಮೂಲ ತಂಡದಲ್ಲಿ ವಾರ್ನರ್ ಅವರ ಹೆಸರೂ ಇತ್ತು. ವಿಶಾಖಪಟ್ಟಣದಲ್ಲಿ ನ. 23ರಂದು ಆರಂಭವಾಗುವ ಸರಣಿಗೆ ಕಳೆದ ತಿಂಗಳೇ ತಂಡವನ್ನು ಪ್ರಕಟಿಸಲಾಗಿತ್ತು.

ವಾರ್ನರ್ ಅವರು ಸ್ವದೇಶಕ್ಕೆ ಮರಳಲಿದ್ದಾರೆ. ಆಲ್‌ರೌಂಡರ್ ಆರನ್ ಹಾರ್ಡಿ ಅವರು ವಾರ್ನರ್ ಅವರ ಸ್ಥಾನ ತುಂಬಲಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾದ ಹೇಳಿಕೆ ಮಂಗಳವಾರ ತಿಳಿಸಿದೆ.

ಪಾಕಿಸ್ತಾನ ಎದುರಿನ ಟೆಸ್ಟ್ ಸರಣಿ, ದೀರ್ಘ ಮಾದರಿಯ ಟೆಸ್ಟ್‌ನಲ್ಲಿ ತಮ್ಮ ಕೊನೆಯ ಸರಣಿಯಾಗಲಿದೆ. ಆದರೆ ನಿಯಮಿತ ಓವರುಗಳ ಟೂರ್ನಿಯಲ್ಲಿ ಮುಂದುವರಿಯುವುದಾಗಿ ಈ ವರ್ಷದ ಆರಂಭದಲ್ಲಿ ವಾರ್ನರ್ ಸುಳಿವು ನೀಡಿದ್ದರು.

ವಾರ್ನರ್ ಅಲಭ್ಯತೆಯಿಂದಾಗಿ, ವಿಶ್ವಕಪ್ ಗೆದ್ದ ತಂಡದ ಏಳು ಮಂದಿ ಮಾತ್ರ ಭಾರತ ಪ್ರವಾಸದಲ್ಲಿ ಮುಂದುವರಿಯುವಂತಾಗಿದೆ. ಸೀನ್ ಅಬೋಟ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಗ್ಲೆನ್ ಮ್ಯಾಕ್ಸ್‌ವೆಲ್, ಸ್ಟೀವ್ ಸ್ಮಿತ್, ಮಾರ್ಕಸ್ ಸ್ಟೊಯಿನಿಸ್ ಮತ್ತು ಆ್ಯಡಂ ಜಂಪಾ ಈ ಏಳು ಮಂದಿ ಆಟಗಾರರು.

ಸೋಮವಾರ ರಾತ್ರಿ ಭಾರತ ಈ ಸರಣಿಗೆ ತನ್ನ ತಂಡವನ್ನು ಪ್ರಕಟಿಸಿದೆ. ವಿಶ್ವಕಪ್‌ನಲ್ಲಿ ಆಡಿದ್ದ ತಂಡದ ಮೂವರು ಮಾತ್ರ ಟಿ–20 ತಂಡದಲ್ಲಿ ಇರಲಿದ್ದಾರೆ. ಅವರೆಂದರೆ ನಾಯಕನಾಗಿ ಆಯ್ಕೆಯಾಗಿರುವ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ಪ್ರಸಿದ್ಧ ಕೃಷ್ಣ. ಶ್ರೇಯಸ್ ಅಯ್ಯರ್ ಅವರು ಕೊನೆಯ ಎರಡು ಪಂದ್ಯಗಳಿಗೆ (ರಾಯಪುರ ಮತ್ತು ಬೆಂಗಳೂರು) ಲಭ್ಯರಿರುತ್ತಾರೆ.



ಡೇವಿಡ್ ವಾರ್ನರ್

ಕಬಡ್ಡಿ ಆಟ: ಪ್ರಭಾವಿತರಾದ ನ್ಯೂಜಿಲೆಂಡ್ ಕ್ರಿಕೆಟಿಗರು

ಮುಂಬೈ (ಪಿಟಿಐ): ನ್ಯೂಜಿಲೆಂಡ್ ತಂಡದ ವೇಗದ ಬೌಲರ್ ಟ್ರೆಂಟ್ ಬೌಲ್ಟ್, ವಿಕೆಟ್ ಕೀಪರ್ ಟಾಮ್ ಲೇಥಮ್ ಮತ್ತು ಮಿಚೆಲ್ ಸ್ಯಾಂಟ್ನರ್ ಅವರು ಕಬಡ್ಡಿ ಆಟದಿಂದ ಪ್ರಭಾವಿತರಾಗಿದ್ದಾರೆ. ಇತ್ತೀಚಿನ ವಿಶ್ವಕಪ್ ವೇಳೆ ಈ ಆಟದ ಬಗ್ಗೆ ತಿಳಿದುಕೊಂಡಿದ್ದರು. ತಮ್ಮ ತಂಡದ ಗ್ಲೆನ್ ಫಿಲಿಪ್ಸ್, ಡೇರಿಲ್ ಮಿಚೆಲ್ ಮತ್ತು ಟಿಮ್ ಸೌಥಿ ಅವರು ಒಳ್ಳೆಯ ಕಬಡ್ಡಿ ಆಟಗಾರರಾಗಬಹುದು ಎಂಬುದು ಅವರ ಸಲಹೆ.

ಲೇಥಮ್ ಅವರು ಕಬಡ್ಡಿ ಮತ್ತು ರಗ್ಬಿಯಲ್ಲಿ ಸಾಮ್ಯತೆ ಕಂಡಿದ್ದಾರೆ. ರಗ್ಬಿ, ನ್ಯೂಜಿಲೆಂಡ್‌ನಲ್ಲಿ ಭಾರಿ ಜನಪ್ರಿಯ ಕ್ರೀಡೆಯಾಗಿದೆ. ಭಾರತದಲ್ಲಿ ಕ್ರಿಕೆಟ್‌ನಷ್ಟೇ ರಗ್ಬಿಗೆ ಅಲ್ಲಿ ಅರಾಧಕರಿದ್ದಾರೆ.

'ನಾನು ಒಂದೆರಡು ಸಲ ಈ ಆಟ ನೋಡಿದೆ. ಮಿಚೆಲ್ ಮತ್ತು ಸೌಥಿ ಅವರು ಈ ಆಟ ಆಡಲು ಬೇಕಾದ ದೃಢ ಮೈಕಟ್ಟು, ಚುರುಕಿನ ಪಾದಚಲನೆ ಹೊಂದಿದ್ದಾರೆ. ನಾನು ಅವರನ್ನು ಈ ಆಟಕ್ಕೆ ಶಿಫಾರಸು ಮಾಡುವೆ' ಎಂದು ಸ್ವಾರಸ್ಯಕರವಾಗಿ ಹೇಳಿದರು.


ವಿಶ್ವಕಪ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡ, ಆತಿಥೇಯ ಭಾರತ ತಂಡಕ್ಕೆ ಮಣಿದಿತ್ತು. ಮುಂಬೈನಲ್ಲಿದ್ದ ಸಂದರ್ಭದಲ್ಲಿ ಅವರಿಗೆ ಪ್ರೊ ಕಬಡ್ಡಿ ಲೀಗ್ ಹೈಲೈಟ್ಸ್ ತೋರಿಸಲಾಗಿತ್ತು. ಇದು ಅವರಿಗೆ ಕಬಡ್ಡಿ ಆಟದಲ್ಲಿ ಆಸಕ್ತಿ ಮೂಡಿಸಿದೆ.

'ನಾನು ಒಂದೆರಡು ಬಾರಿ ಕಬಡ್ಡಿ ಆಟ ನೋಡಿದೆ. ಈ ಆಟಕ್ಕೆ ದೃಢವಾದ ಕಾಲಿನ ಅಗತ್ಯವಿದೆ. ನಾನು ಈ ಆಟಕ್ಕೆ ಡೇರಿಲ್ ಮಿಚೆಲ್ ಮತ್ತು ಸೌಥಿ ಅವರ ಹೆಸರು ಸಲಹೆ ಮಾಡುವೆ' ಎಂದು ಲೇಥಮ್ ಹೇಳಿದರು.

'ಇದು ದೈಹಿಕ ಕ್ರೀಡೆಯಂತೆ ಕಾಣುತ್ತಿದೆ. ಕೆಲಮಟ್ಟಿಗೆ ರಗ್ಬಿಯಂತೆ ಹೋಲುತ್ತಿದೆ. ಗೆರೆ ದಾಟಿದ ಎದುರಾಳಿ ಆಟಗಾರನನ್ನು ನಿಯಂತ್ರಿಸಲು ಇನ್ನೊಂದು ತಂಡದವರು ಒಗ್ಗೂಡುತ್ತಾರೆ. ಈ ಆಟಕ್ಕೆ ಗ್ಲೆನ್ ಫಿಲಿಪ್ಸ್ ಸೂಕ್ತ ವ್ಯಕ್ತಿ' ಎಂದು ಲೇಥಮ್ ಅಭಿಪ್ರಾಯಪಟ್ಟರು. ಆಲ್‌ರೌಂಡರ್ ಸ್ಯಾಂಟ್ನರ್ ಕೂಡ ಚುರುಕಾಗಿ ಓಡಾಡುವ ಫಿಲಿಪ್ಸ್ ಹೆಸರನ್ನು ಸಲಹೆ ಮಾಡಿದರು.

ಷೇರುಪೇಟೆ ವಹಿವಾಟು

275



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,694
ಇಂದಿನ ಅಂತ್ಯ	19,783
▲	89
ದಿನದ ಗರಿಷ್ಠ	19,829

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹78
ಮೈಸೂರು	
100 ಮೊಟ್ಟೆಗೆ	₹575

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1570 (1570)
ಸೋಯಾ (ರಿಫೈಂಡ್)	₹967 (960)
ಸೂರ್ಯಕಾಂತಿ (ರಿಫೈಂಡ್)	₹970 (965)
ಪಾಮೋಲಿನ್	₹848 (842)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹209-489
ದ್ವಿತಳಿ (ಬಿ.ವಿ)	₹240-596

ಕಂಪನಿಯ ಹಣಕಾಸು ಮಾಹಿತಿ ಪರಿಶೀಲಿಸಿದ ಬಳಿಕ ನಿರ್ಧಾರ: ಮೂಲಗಳ ಮಾಹಿತಿ

ಗೋ ಫಸ್ಟ್: ಬಿಡ್‌ನಿಂದ ಜಿಂದಾಲ್ ಹಿಂದಕ್ಕೆ?

ಮುಂಬೈ (ರಾಯಿಟರ್ಸ್): ನಷ್ಟದಲ್ಲಿರುವ ಗೋ ಫಸ್ಟ್ ವಿಮಾನಯಾನ ಕಂಪನಿಯನ್ನು ಖರೀದಿಸುವ ಸಂಬಂಧ ಬಿಡ್ ಸಲ್ಲಿಸದೇ ಇರಲು ಜಿಂದಾಲ್ ಪವರ್ ಕಂಪನಿಯು ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಖರೀದಿ ಆಸಕ್ತಿ ವ್ಯಕ್ತಪಡಿಸಿ ಬಿಡ್ ಸಲ್ಲಿಸಲು ಮಂಗಳವಾರ ಕಡೆಯ ದಿನವಾಗಿದೆ. ಗೋ ಫಸ್ಟ್ ಖರೀದಿಸಲು ಆಸಕ್ತಿ ವ್ಯಕ್ತಪಡಿಸಿ ಜಿಂದಾಲ್ ಕಂಪನಿ ಮಾತ್ರವೇ ಬಿಡ್ ಸಲ್ಲಿಸಿತ್ತು. ಅದನ್ನು ಸಾಲದಾತರ ಸಮಿತಿಯು ಒಪ್ಪಿಕೊಂಡಿತ್ತು. ಆದರೆ, ಕಂಪನಿಯ ಹಣಕಾಸು ಮಾಹಿತಿಯನ್ನು ಪರಿಶೀಲಿಸಿದ ಬಳಿಕ ಖರೀದಿಗೆ ಬಿಡ್ ಸಲ್ಲಿಸದೇ ಇರುವ ನಿರ್ಧಾರವನ್ನು ಕೈಗೊಂಡಿತು ಎಂದು ತಿಳಿಸಿವೆ.

ಈ ಬೆಳವಣಿಗೆಯ ಕುರಿತು ಜಿಂದಾಲ್ ಪವರ್ ಮತ್ತು ಗೋ ಫಸ್ಟ್ ಕಂಪನಿಯ ದಿವಾಳಿ ಪ್ರಕ್ರಿಯೆ ನಿರ್ವಹಿಸುವ ವೃತ್ತಿಪರ ಅಧಿಕಾರಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರ್ಥಿಕ ಪರಿಸ್ಥಿತಿ ನಿಭಾಯಿಸಲು ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳುವ ಮೂಲಕ ಗೋ ಫಸ್ಟ್ ಕಂಪನಿಯು ಸ್ವಯಂ ಪ್ರೇರಿತವಾಗಿ ಮೇ ತಿಂಗಳಿನಲ್ಲಿ ದಿವಾಳಿ ಪ್ರಕ್ರಿಯೆಗೆ ಒಳಗಾಗಿದೆ. ಕಂಪನಿಯು ₹6,521 ಕೋಟಿ ಸಾಲ ಉಳಿಸಿಕೊಂಡಿದೆ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಐಡಿಬಿಐ ಬ್ಯಾಂಕ್ ಮತ್ತು ಡಾಯಿಷ್ ಬ್ಯಾಂಕ್‌ಗಳು ಕಂಪನಿಗೆ ಸಾಲ ನೀಡಿರುವ ಪ್ರಮುಖ ಬ್ಯಾಂಕ್‌ಗಳಾಗಿವೆ.

ಸಾಲದಾತರ ಸಮಿತಿಯು ಬುಧವಾರ ಸಭೆ ಸೇರಲಿದ್ದು, ಮುಂದಿನ ಕ್ರಮದ ಬಗ್ಗೆ ನಿರ್ಧಾರಕ್ಕೆ ಬರಲಿದೆ ಎಂದು ಬ್ಯಾಂಕಿಂಗ್ ಮೂಲವೊಂದು ತಿಳಿಸಿದೆ.

ಮುಖ್ಯಾಂಶಗಳು

- ಗೋ ಫಸ್ಟ್ ಸಾಲ ₹6,521 ಕೋಟಿ
- ಕಂಪನಿಯ ಆಸ್ತಿ ಮಾರಾಟವೊಂದೇ ದಾರಿ: ಬ್ಯಾಂಕಿಂಗ್ ಮೂಲಗಳು



ಈಕ್ವಿಟಿ ಎಫ್‌ಡಿಐ: ಶೇ 24ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಈಕ್ವಿಟಿಗಳಲ್ಲಿ ಆಗಿರುವ ವಿದೇಶಿ ನೇರ ಬಂಡವಾಳ ಹೂಡಿಕೆಯು (ಎಫ್‌ಡಿಐ) ಶೇ 23ರಷ್ಟು ಇಳಿಕೆ ಕಂಡು ₹1.69 ಲಕ್ಷ ಕೋಟಿಗೆ ತಲುಪಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್, ದೂರಸಂಪರ್ಕ, ವಾಹನ ಮತ್ತು ಔಷಧ ವಲಯಗಳಲ್ಲಿ ಎಫ್‌ಡಿಐ ಒಳಹರಿವು ಕಡಿಮೆ ಆಗಿರುವುದೇ ಇದಕ್ಕೆ ಕಾರಣ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2.23 ಲಕ್ಷ ಕೋಟಿಯಷ್ಟು ಎಫ್‌ಡಿಐ ಹೂಡಿಕೆ ಆಗಿತ್ತು ಎಂದು ತಿಳಿಸಿದೆ.

ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ರಾಸ್ಥಾನ, ದೆಹಲಿ, ತಮಿಳುನಾಡು ಮತ್ತು ಹರಿಯಾಣದಲ್ಲಿ ಹೂಡಿಕೆ ಕಡಿಮೆ ಆಗಿದೆ. ತೆಲಂಗಾಣ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದಲ್ಲಿ ಹೂಡಿಕೆಯಲ್ಲಿ ಏರಿಕೆ ಕಂಡುಬಂದಿದೆ ಎಂದು ಸರ್ಕಾರ ಮಾಹಿತಿ ನೀಡಿದೆ. ಈಕ್ವಿಟಿಯನ್ನೂ ಒಳಗೊಂಡು ಒಟ್ಟಾರೆ ಎಫ್‌ಡಿಐ ಹೂಡಿಕೆಯು ಶೇ 15.5ರಷ್ಟು ಇಳಿಕೆ ಕಂಡು ₹2.73 ಲಕ್ಷ ಕೋಟಿಗೆ ತಲುಪಿದೆ.

ರಾಜ್ಯವಾರು ಎಫ್‌ಡಿಐ ಮಾಹಿತಿ (ಕೋಟಿಗಳಲ್ಲಿ)

ರಾಜ್ಯ	2022–23ರ ಏಪ್ರಿಲ್–ಸೆಪ್ಟೆಂಬರ್	2023–24ರ ಏಪ್ರಿಲ್–ಸೆಪ್ಟೆಂಬರ್
ಮಹಾರಾಷ್ಟ್ರ	₹66,400	₹65,985
ಕರ್ನಾಟಕ	₹44,156	₹23,572

ಸಂಕ್ಷಿಪ್ತ ಸುದ್ದಿ

5 ವರ್ಷದಲ್ಲಿ 3 ಸಾವಿರ ನೇಮಕ: ಟೈಟನ್

ಮುಂಬೈ (ಪಿಟಿಐ): ವಹಿವಾಟು ವಿಸ್ತರಣೆಯ ಭಾಗವಾಗಿ ಐದು ವರ್ಷಗಳಲ್ಲಿ 3 ಸಾವಿರಕ್ಕೂ ಅಧಿಕ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗುವುದು ಎಂದು ಟೈಟನ್ ಕಂಪನಿ ಮಂಗಳವಾರ ತಿಳಿಸಿದೆ.

ಐದು ವರ್ಷದೊಳಗೆ ₹1 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆಸುವ ಗುರಿ ಇಟ್ಟುಕೊಂಡಿದ್ದು, ಅದಕ್ಕಾಗಿ ಈ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ದತ್ತಾಂಶ ವಿಶ್ಲೇಷಣೆ, ಸೈಬರ್ ಭದ್ರತೆ, ಉತ್ಪನ್ನ ನಿರ್ವಹಣೆ, ಡಿಜಿಟಲ್ ಮಾರ್ಕೆಟಿಂಗ್‌ಗೆ ಸಂಬಂಧಿಸಿಂತೆ ವಿಶೇಷ ಕೌಶಲ ಹೊಂದಿರುವ ವೃತ್ತಿಪರರನ್ನು ನೇಮಿಸಿಕೊಳ್ಳಲಾಗುವುದು ಎಂದಿದೆ.

ಚಿನ್ನ: ₹380 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರ 10 ಗ್ರಾಂ ಗೆ ₹380 ಏರಿಕೆಯಾಗಿ, ₹62,150ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹100 ಹೆಚ್ಚಳವಾಗಿ ₹76,400 ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಳ ಆಗಿದ್ದರಿಂದ ದೇಶಿ ಮಾರುಕಟ್ಟೆಯಲ್ಲೂ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

₹199 ಕೋಟಿ ಮೊತ್ತದ ಐಟಿಸಿ ವಂಚನೆ

ನವದೆಹಲಿ (ಪಿಟಿಐ): ₹199 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಎಸಗಿದ 48 ನಕಲಿ ಕಂಪನಿಗಳ ಜಾಲವನ್ನು ಜಿಎಸ್‌ಟಿ ಅಧಿಕಾರಿಗಳು ಭೇದಿಸಿದ್ದು, ಮೂವರನ್ನು ಬಂಧಿಸಿದ್ದಾರೆ ಎಂದು ಹಣಕಾಸು ಸಚಿವಾಲಯ ಮಂಗಳವಾರ ತಿಳಿಸಿದೆ.

ಪಟಿಯಾಲ ಹೌಸ್‌ನ ಚೀಫ್ ಮೆಟ್ರೊಪಾಲಿಟನ್ ಮೆಜಿಸ್ಟ್ರೇಟ್ ಕೋರ್ಟ್, ಬಂಧಿತರನ್ನು 2 ವಾರಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಉಳಿದವರ ಪತ್ತೆಗಾಗಿ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

21-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	945 (937)
ಪಾಮ್ ವಾರದ ಡೆಲಿವರಿ	846(840)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

61,100 (60,700)

ಬೆಳ್ಳಿ ಕೆ.ಜಿ 72,750 (72,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	600
ಅಡಿಕೆ	
ಬಂಟ್ವಾಳ	
ಹಳತು	43500-48500
ಕೋಕ	15000-27500
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಚಾಲಿ	37899-37899
ಕೆಂಪುಗೋಟು	33599-33599
ರಾಶಿ	45009-46899
ಸಿಪ್ಪೆಗೋಟು	12899-21199
ಶಿವಮೊಗ್ಗ	
ರಾಶಿ	34869-47179
ಸರಕು	51700-79663
ಬೆಟ್ಟೆ	44000-52600
ಗೊರಬಾಲು	18200-37089
ಸಿದ್ದಾಪುರ	
ಬಿಳಿಗೋಟು	31900-34808
ಚಾಲಿ	37799-40139
ಕೋಕ	29099-32799
ಕೆಂಪುಗೋಟು	32289-33800
ರಾಶಿ	43099-46569
ತಟ್ಟಿಬೆಟ್ಟೆ	38509-45889
ಶಿರಸಿ	
ಬೆಟ್ಟೆ	35699-42599
ಬಿಳಿಗೋಟು	29899-35742
ಚಾಲಿ	37011-40711
ಕೆಂಪುಗೋಟು	33383-34431
ರಾಶಿ	44629-48009
ಯಲ್ಲಾಪುರ	
ಅಪಿ	58799-58799
ಬಿಳಿಗೋಟು	23899-35599
ಚಾಲಿ	35580-40899
ಕೋಕ	18099-32099
ಕೆಂಪುಗೋಟು	24899-36120
ರಾಶಿ	44500-54819
ತಟ್ಟಿಬೆಟ್ಟೆ	37009-44299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11800	11500	-	171.45 ಸೆಂಟ್ಸ್
ಎಸಿ	6300	6500	-	
ಆರ್‌ಪಿ	9800	10000	-	ಲಂಡನ್
ಆರ್‌ಸಿ	6075	244 on OT	-	2505 ಡಾಲರ್ಸ್

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹4000-5000
ಮಧ್ಯಮ	₹3000-4000
ಸಣ್ಣ	₹2000-3000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹131

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹರೀಶ್ ನಾಯ್ಕ

● ಪ್ರಶ್ನೆ: ಅನೇಕ ಮ್ಯೂಚುವಲ್ ಫಂಡ್ ಕಂಪನಿಗಳು ಇಂದು ಹೊಸ ಹೊಸ ಫಂಡ್‌ಗಳನ್ನು (ಎನ್‌ಎಫ್‌ಒ) ಬಿಡುಗಡೆ ಮಾಡುತ್ತಿರುತ್ತವೆ. ಇವುಗಳು ಹೂಡಿಕೆಗೆ ಸುರಕ್ಷಿತವೇ. ನಾವು ಎಲ್ಲಾ ಫಂಡ್‌ಗಳ ದಿನ ನಿತ್ಯದ ನೆಟ್ ಅಸೆಟ್ ವ್ಯಾಲ್ಯು (ಎನ್‌ಎವಿ) ಯನ್ನು ಒಟ್ಟಾಗಿ ನೋಡಲು ಯಾವ ವೆಬ್ ಸೈಟ್ ನೋಡಬೇಕು. ಇದರಿಂದ ಒಂದೇ ರೀತಿಯ ಫಂಡ್‌ಗಳ ತುಲನೆ ಸುಲಭವೆಂದು ನಾನು ಭಾವಿಸುತ್ತಿದ್ದೇನೆ.

ಉತ್ತರ: ನಿಮಗೆ ಎಲ್ಲಾ ಮ್ಯೂಚುವಲ್ ಫಂಡ್‌ಗಳ ಬಗೆಗಿನ ಸಮಗ್ರ ಮಾಹಿತಿ ಯನ್ನು 'ಅಸೋಸಿಯೇಷನ್ ಆಫ್ ಮ್ಯೂಚುಯಲ್ ಫಂಡ್ಸ್ ಇನ್ ಇಂಡಿಯಾ' ಇದರ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ. ಇದೊಂದು ಅಧಿಕೃತ ಜಾಲತಾಣವಾಗಿದ್ದು ಹೂಡಿಕೆದಾರರಿಗೆ ನಿಖರ ಮಾಹಿತಿ ಇಲ್ಲಿ ಲಭ್ಯವಿರುತ್ತದೆ. ಇದರಲ್ಲಿ ನೀವು ಹೊಸ ಫಂಡ್ ಗಳ ಬಗೆಗಿನ ಮಾಹಿತಿ, ಅದಕ್ಕೆ ಸಂಬಂಧಿಸಿದ ಯೋಜನೆಯ ಮಾಹಿತಿ, ಅವುಗಳ ಉದ್ದೇಶ, ಹೂಡಿಕೆದಾರರ ಹಕ್ಕು-ಬಾಧ್ಯತೆ, ಶುಲ್ಕ ವಿವರಗಳು, ಆರ್ಥಿಕ ಅಪಾಯ ಇತ್ಯಾದಿಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಬಹುದು. ಇದಲ್ಲದೆ, ಆಯಾ ಮ್ಯೂಚುವಲ್ ಫಂಡ್ ಕಂಪನಿಗಳ ವೆಬ್‌ಸೈಟ್‌ನಲ್ಲೂ ಅದೇ ಮಾಹಿತಿಯನ್ನು ನೀಡಲಾಗುತ್ತದೆ.

ಯಾವುದೇ ಹೊಸ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮುನ್ನ ನಿಮ್ಮ ಹೂಡಿಕೆಯ ಉದ್ದೇಶಕ್ಕೆ ಸರಿ ಹೊಂದುತ್ತದೆಯೇ ಹಾಗೂ ಅವುಗಳ ಆರ್ಥಿಕ ಅಪಾಯ ಮುನ್ಸೂಚಿಸುವ 'ರಿಸ್ಕೊಮೀಟರ್' ಮೊದಲು ತಿಳಿದುಕೊಳ್ಳಿ. ಎನ್‌ಎಫ್‌ಒಗಳು ಮಾರುಕಟ್ಟೆಗೆ ಬಂದೊಡನೆ ಷೇರುಗಳ ಐಪಿಒ ಮೌಲ್ಯದಂತೆ ಒಂದೇ ಬಾರಿಗೆ ಬೆಲೆಯಲ್ಲಿ ಜಿಗಿತ ಕಾಣುವುದಿಲ್ಲ. ಒಂದಷ್ಟು ಖರ್ಚು ವೆಚ್ಚ ಅದಕ್ಕೆ ಇದ್ದೇ ಇರುತ್ತದೆ. ಅವೆಲ್ಲಾ ಎನ್‌ಎವಿಯಲ್ಲಿ ಸರಿದೂಗಿ ನಿಧಾನವಾಗಿ ಹೂಡಿಕೆಯ ವಿಧಾನ ಪರಿಗಣಿಸಿ ತನ್ನ ಗತಿ ಆರಂಭಿಸುತ್ತದೆ. ಹೀಗಾಗಿ ನೀವು ಆರಂಭದಲ್ಲೇ ಖರೀದಿಸುವ ನಿರ್ಧಾರವನ್ನು ಕೈಬಿಟ್ಟರೂ ಅಂಥದ್ದೇನೂ ದೊಡ್ಡ ಮಟ್ಟದ ನಷ್ಟ ಇಲ್ಲ. ಫಂಡ್ ಹೂಡಿಕೆದಾರರ ಖರೀದಿಗೆ ಅನುವಾದ ನಂತರವೂ ಖರೀದಿಸುವ ಅವಕಾಶವಿರುತ್ತದೆ. ಕೆಲವೊಮ್ಮೆ ಮೂಲ ಬೆಲೆಗಿಂತ ಕಡಿಮೆಗೂ ಸಿಗಬಹುದು ಹಾಗೂ ಮುಂದಿನ ದಿನಗಳಲ್ಲಿ ಬೆಲೆ ನಿಧಾನವಾಗಿ ವೃದ್ಧಿಯಾಗಬಹುದು. ಹೀಗಾಗಿ ಕೇವಲ ಆರಂಭಿಕ ಬೆಲೆ ಕಡಿಮೆ (ಸಾಮಾನ್ಯವಾಗಿ ಮುಖಬೆಲೆ ₹10) ಎನ್ನುವ ಏಕೈಕ ಕಾರಣಕ್ಕೆ ಎನ್‌ಎಫ್‌ಒ ಖರೀದಿಸುವುದು ಅಷ್ಟೇನೂ ಸಮಂಜಸವಲ್ಲ. ಎಲ್ಲ ಫಂಡ್‌ಗಳಿಗೂ ಆರಂಭದ ಕೆಲವೂ ತಿಂಗಳು ಹೆಚ್ಚಿನ ಸವಾಲುಗಳಿರುತ್ತವೆ. ಅದರಲ್ಲೂ ಇತ್ತೀಚೆಗಷ್ಟೇ ಈ ಕ್ಷೇತ್ರಕ್ಕೆ ಲಗ್ಗೆ ಇಟ್ಟ ಕಂಪನಿಗಳಾಗಿದ್ದರೆ ತುಸು ಸಮಯ ವ್ಯವಹಾರ ಮಾಡದಿರುದುದು ಒಳಿತು.

ಸದಾನಂದ ಗಂಜಿ, ಕಲಬುರ್ಗಿ

● ಪ್ರಶ್ನೆ; ನಾನು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ, ವಯಸ್ಸು 82. ಪ್ರತಿ ತಿಂಗಳೂ ಪಿಂಚಣಿ ಬರುತ್ತಿದೆ. ಇದರಲ್ಲಿ ಮೂಲ ವೇತನ, ತುಟ್ಟಿ ಭತ್ಯೆ, ಇತರೆ ಎಲ್ಲಾ ಸೇರಿ ₹ 64,333 ಸಿಗುತ್ತಿದೆ. ಬೇರೆ ಯಾವುದೇ ಆದಾಯವಿಲ್ಲ, ಸ್ವಂತ ಮನೆಯಿದೆ, ಬಾಡಿಗೆ ಆದಾಯವಿಲ್ಲ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿಲ್ಲ. ನನ್ನ ಪ್ರಶ್ನೆ;

1) ಸೆಕ್ಷನ್ 194 ಪಿ ಇದರಂತೆ 75 ವರ್ಷ ಮೇಲ್ಪಟ್ಟವರು ತೆರಿಗೆ ರಿಟರ್ನ್ಸ್ ಸಲ್ಲಿಸಬೇಕೆ?

2) ₹ 7 ಲಕ್ಷದವರೆಗೆ ಆದಾಯ ತೆರಿಗೆ ಬರುವುದಿಲ್ಲ ಎನ್ನುವುದು ಹೊಸ ತೆರಿಗೆ ನಿಯಮ ಅಲ್ಲವೇ?

3) ₹ 50 ಸಾವಿರ ಸ್ಟಾಂಡರ್ಡ್ ಡಿಡಕ್ಷನ್ ಅನ್ವಯಿಸುತ್ತದಲ್ಲಾ. ಹಾಗಿದ್ದರೂ ಏಪ್ರಿಲ್ 2023 ರಿಂದ ಪ್ರತಿ ತಿಂಗಳೂ ₹ 3,068 ತೆರಿಗೆಯಾಗಿ ಕಡಿತಗೊಳಿಸುತ್ತಿದ್ದಾರೆ ಹಾಗೂ ಕಳೆದ ವರ್ಷದ ಕಡಿತದ ಮೊತ್ತ ₹ 2,439 ಇತ್ತು. ಈ ಮೊತ್ತ ಸರಿಯಿದ್ದರೆ, ತೆರಿಗೆ ಉಳಿಸಲು ಏನು ಮಾಡಬೇಕು?

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ವಾರ್ಷಿಕ ಆದಾಯ ₹ 7.72 ಲಕ್ಷ. ಈ ಮೊತ್ತ ನಿಮಗೆ ಅನ್ವಯಿಸುವ ಮೂಲ ತೆರಿಗೆ ವಿನಾಯಿತಿ ಆದಾಯ ಮಟ್ಟಕ್ಕಿಂತ (₹ 5 ಲಕ್ಷ) ಅಧಿಕ ಇದೆ. ಹೀಗಾಗಿ ಯಾವುದೇ ಹೂಡಿಕೆ ಇಲ್ಲದೆ ತೆರಿಗೆ ಪ್ರಮಾಣ ತಗ್ಗಿಸುವುದು ಕಷ್ಟ. ₹ 1.50 ಲಕ್ಷದ ತನಕ ನೀವು ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ತೆರಿಗೆ ಸಂಬಂಧಿತ ಹೂಡಿಕೆಗೆ ಅವಕಾಶವಿದೆ. ಆದರೆ ಇದಕ್ಕಾಗಿ ನೀವು ಹೆಚ್ಚು ತೆರಿಗೆ ದರ ಅನ್ವಯವಾಗುವ ಹಳೆಯ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಆದರೆ ಯಾವುದೇ ಹೂಡಿಕೆಯ ಅಗತ್ಯವಿರದ ಹೊಸ ತೆರಿಗೆ ಪದ್ಧತಿ ಅನುಸರಿಸಿದರೂ ₹ 50 ಸಾವಿರದ ಸ್ಟ್ಯಾಂಡರ್ಡ್ ಡಿಡಕ್ಷನ್ ನೀಡಿದ ಮೇಲೂ ನಿಮ್ಮ ತೆರಿಗೆಗೊಳಪಡುವ ಆದಾಯ ₹ 7 ಲಕ್ಷಕ್ಕೂ ಹೆಚ್ಚಿದೆ. ಹೀಗಾಗಿ ಇಲ್ಲೂ ತೆರಿಗೆ ಶೂನ್ಯವಾಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ₹ 7 ಲಕ್ಷವು ಹೊಸ ತೆರಿಗೆ ಪದ್ಧತಿ ಆಯ್ದುಕೊಂಡವರಿಗಿರುವ ಮೂಲ ವಿನಾಯಿತಿ ಮಿತಿಯಲ್ಲ. ಅರ್ಥಾತ್ ₹ 7 ಲಕ್ಷಕ್ಕಿಂತ ಕಡಿಮೆ ಆದಾಯ ಇದ್ದಾಗ ಮಾತ್ರ ಈ ವಿಶೇಷ ವಿನಾಯಿತಿ ಸೆಕ್ಷನ್ 87 ಎ ಅಡಿಯಲ್ಲಿ ತೆರಿಗೆ ಶೂನ್ಯವಾಗಿರುತ್ತದೆ.

ಇನ್ನು ಸೆಕ್ಷನ್ 80 ಪಿ ಅನ್ವಯವಾಗುವ ಸನ್ನಿವೇಶಗಳನ್ನು ಈ ಹಿಂದಿನ ಕೆಲವು ಸಂಚಿಕೆಗಳಲ್ಲೂ ವಿವರಿಸಲಾಗಿದೆ. ಇದರಂತೆ ನಿಮ್ಮ ಪಿಂಚಣಿ ಆದಾಯದ ಮೇಲೆ ಬ್ಯಾಂಕಿನವರು ತೆರಿಗೆ ಕಡಿತಗೊಳಿಸುತ್ತಿದ್ದಾರೆ. ಹಿಂದಿನ ವರ್ಷಕ್ಕಿಂತ ಹೆಚ್ಚುವರಿ ಮೊತ್ತವನ್ನು ಕಡಿತಗೊಳಿಸಿರುತ್ತಾರೆ ಎಂದು ತಿಳಿಸಿದ್ದೀರಿ. ಕೇವಲ ಪಿಂಚಣಿ ಹಾಗೂ ಬಡ್ಡಿ ಆದಾಯವಿದ್ದು ಒಂದೇ ಬ್ಯಾಂಕ್‌ನಿಂದ ಇವೆರಡೂ ಆದಾಯ ಮೂಲಗಳಿದ್ದಾಗ ಹಾಗೂ ಅಗತ್ಯವಿರುವ ತೆರಿಗೆಯನ್ನು ಬ್ಯಾಂಕಿನವರು ಸೆಕ್ಷನ್ 194 ಪಿ ಇದರಡಿ ಸಮರ್ಪಕವಾಗಿ ಕಡಿತಗೊಳಿಸಿದ್ದರೆ ನೀವು ರಿಟರ್ನ್ಸ್ ಸಲ್ಲಿಸುವುದು ಅನಿವಾರ್ಯವಲ್ಲ. ಈ ಬಗ್ಗೆ ನೀವು ಬ್ಯಾಂಕಿಗೆ ಅಗತ್ಯ ಘೋಷಣೆಯನ್ನೂ ನೀಡಬೇಕು. ನಿಮ್ಮ ತೆರಿಗೆ ಕಡಿತದ ಬಗ್ಗೆ ಮತ್ತಷ್ಟು ವಿವರಗಳನ್ನು ಬ್ಯಾಂಕ್ ಇಲ್ಲವೇ ಪೆನ್ಶನ್ ಲೆಕ್ಕಾಚಾರ ವಿಭಾಗದಿಂದ ಪಡೆದು ಮೇಲಿನ ಮಾಹಿತಿಯಂತೆ ತುಲನೆ ಮಾಡಿಕೊಳ್ಳಿ. ಸಮೀಪದ ತೆರಿಗೆ ಸಲಹೆಗಾರರನ್ನು ವಿವರಗಳೊಂದಿಗೆ ಮುಖತಾ ಭೇಟಿ ಮಾಡಿಯೂ ಪರಿಹಾರ ಕಂಡುಕೊಳ್ಳಬಹುದು. ತೆರಿಗೆ ವಿನಾಯಿತಿ ಪಡೆಯಲು ನಿಮಗಿರುವ ಹೂಡಿಕೆ ಸಾಧ್ಯತೆ ಅಥವಾ ತುಸು ತೆರಿಗೆ ಪಾವತಿ - ಇವೆರಡರಲ್ಲಿ ಉತ್ತಮ ಆಯ್ಕೆ ಯಾವುದು ಎಂಬುದನ್ನು ಚರ್ಚಿಸಿ ನಿರ್ಧಾರ ಕೈಗೊಳ್ಳಿ. ನಿಮ್ಮ ಹೂಡಿಕೆಯ ಮೊತ್ತ ವ್ಯತ್ಯಾಸವಾದಂತೆ ತೆರಿಗೆಯೂ ಬದಲಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಲಿಂಗಪರಿವರ್ತಿತ ಆಟಗಾರ್ತಿಯರಿಗೆ ಅವಕಾಶ ನಿರಾಕರಣೆ

ಏಕದಿನ, ಟಿ20 ಪಂದ್ಯಗಳಿಗೆ ಸ್ಟಾಪ್‌ಕ್ಲಾಕ್

ಅಹಮದಾಬಾದ್ (ಪಿಟಿಐ): ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾಗಿ ಮಹಿಳೆಯಾಗಿ ಪರಿವರ್ತಿತರಾದವರು ಅಂತರರಾಷ್ಟ್ರೀಯ ಮಹಿಳಾ ಟೂರ್ನಿಗಳಲ್ಲಿ ಆಡುವಂತಿಲ್ಲ ಎಂದು ಪ್ರಮುಖ ನಿರ್ಧಾರವೊಂದರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ಪ್ರಕಟಿಸಿದೆ.

ಅಂತರರಾಷ್ಟ್ರೀಯ ಮಹಿಳಾ ಟೂರ್ನಿಗಳಲ್ಲಿ ಋಜುತ್ವ ಕಾಪಾಡಲು ಮತ್ತು ಆಟಗಾರ್ತಿಯರ ಸುರಕ್ಷತೆಯ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳುತ್ತಿರುವುದಾಗಿ ಐಸಿಸಿ ಹೇಳಿದೆ.

ಕ್ರೀಡೆಯ ಭಾಗೀದಾರರ ಜೊತೆ ಸುಮಾರು ಒಂಬತ್ತು ತಿಂಗಳ ಸಮಾಲೋಚನೆ ನಡೆಸಿದ ನಂತರ ಐಸಿಸಿ ಆಡಳಿತ ಮಂಡಳಿಯು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಲಿಂಗಸಂಬಂಧಿ ನೂತನ ನಿಯಮಾವಳಿಗೆ ಅನುಮೋದನೆ ನೀಡಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಪುರುಷರು ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ನಂತರ ಮಹಿಳಾ ವಿಭಾಗದಲ್ಲಿ ಸ್ಪರ್ಧೆ ಮಾಡುವ ವಿಷಯ ಕ್ರೀಡಾಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಿಸಿ ಚರ್ಚೆಗೆ ಕಾರಣವಾಗಿದೆ.

ಮಂಗಳವಾರ ಅಹಮದಾಬಾದ್‌ನಲ್ಲಿ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಐಸಿಸಿ ಅಂತಿಮವಾಗಿ ಈ ನಿರ್ಧಾರಕ್ಕೆ ಬಂದಿದೆ.

2028ರ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಆಟವನ್ನು ಸೇರ್ಪಡೆಗೊಳಿಸುವ ಕಾರಣವೂ ಐಸಿಸಿಯ ಈ ಮಹತ್ವದ ನಿರ್ಧಾರ ಹಿಂದೆ ಇದೆ ಎಂದು ಮೂಲಗಳು ಖಚಿತಪಡಿಸಿವೆ.

‘ಕ್ರಿಕೆಟ್ ಸಹ ಒಲಿಂಪಿಕ್ ಕ್ರೀಡೆಯಾಗಲಿರುವ ಕಾರಣ, ಅದೂ ಸಹ ಒಲಿಂಪಿಕ್ ನಿಯಮಾವಳಿಗಳ ಅಧೀನಕ್ಕೆ ಬರಲಿದೆ’ ಎಂದು ತಿಳಿಸಿದೆ.

ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ (ವರ್ಲ್ಡ್ ಅಥ್ಲೆಟಿಕ್ಸ್) ಕೂಡ, ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾಗಿ ಮಹಿಳೆಯಾಗಿ ಬದಲಾದ ಅಥ್ಲೀಟುಗಳಿಗೆ ಅಂತರರಾಷ್ಟ್ರೀಯ ಮಟ್ಟದ ಕೂಟಗಳಲ್ಲಿ ಮಹಿಳೆಯರ ವಿಭಾಗದಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದೆ. 2023ರ ಮಾರ್ಚ್ 1 ರಿಂದಲೇ ಇದು ಜಾರಿಗೆ ಬಂದಿದೆ. ಈ ವಿಷಯದಲ್ಲಿ ಮಹಿಳಾ ಅಥ್ಲೀಟುಗಳ ಟೆಸ್ಟೊಸ್ಟೆರೋನ್ ಮಟ್ಟವನ್ನೂ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ದಕ್ಷಿಣ ಆಫ್ರಿಕಾದ ಓಟಗಾರ್ತಿ ಕಾಸ್ಟೆರ್ ಸೆಮೆನ್ಯಾ ಅವರ ದೇಹದಲ್ಲಿ ಟೆಸ್ಟೊಸ್ಟೆರೋನ್ ಮಟ್ಟ ನಿಗದಿತ ಪ್ರಮಾಣಕ್ಕಿಂತ (ಲೀಟರ್‌ಗೆ 2.5 ನ್ಯಾನೊಮೋಲ್ಸ್‌ಗಿಂತ ಕಡಿಮೆ ಇರಬೇಕು) ಹೆಚ್ಚು ಇದ್ದ ಕಾರಣ ಅವರ ಮೇಲೆ ನಿಷೇಧ ಹೇರಲಾಗಿತ್ತು.

ಸ್ಟಾಪ್ ಕ್ಲಾಕ್‌ಗಳ ಬಳಕೆ: ಆಟದ ವೇಗವನ್ನು ಹೆಚ್ಚಿಸುವ ಉದ್ದೇಶದಿಂದ ಪುರುಷರ ಏಕದಿನ ಮತ್ತು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಸ್ಟಾಪ್ ಕ್ಲಾಕ್‌ಗಳನ್ನು ಪ್ರಾಯೋಗಿಕವಾಗಿ ಬಳಸಲಾಗುವುದು ಎಂದು ಐಸಿಸಿ ಮಂಗಳವಾರ ತಿಳಿಸಿದೆ.

ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಸ್ಟಾಪ್‌ಕ್ಲಾಕ್‌ಗಳ ಪ್ರಾಯೋಗಿಕ ಬಳಕೆ ನಡೆಯಲಿದೆ. ಬೌಲಿಂಗ್ ಮಾಡುವ ತಂಡ ಒಂದು ಓವರ್ ಮುಗಿದ ನಂತರ 60 ಸೆಕೆಂಡುಗಳ ಅವಧಿಯಲ್ಲಿ ಇನ್ನೊಂದು ಓವರ್ ಆರಂಭಿಸಬೇಕು. ತಂಡ ಮೂರನೇ ಬಾರಿ ತಪ್ಪು ಮಾಡಿದಲ್ಲಿ ಐದು ರನ್‌ಗಳ ಪೆನಾಲ್ಟಿ ವಿಧಿಸಲಾಗುತ್ತದೆ. ಓವರುಗಳ ಮಧ್ಯೆ ತೆಗೆದುಕೊಳ್ಳುವ ಸಮಯ ನಿಯಂತ್ರಿಸಲು ಸ್ಟಾಪ್ ಕ್ಲಾಕ್‌ಗಳ ಬಳಕೆ ಮಾಡಲಾಗುತ್ತದೆ ಎಂದು ಐಸಿಸಿ ಹೇಳಿಕೆ ತಿಳಿಸಿದೆ.

ಏಕದಿನ ಪಂದ್ಯಗಳಲ್ಲಿ ಓವರುಗಳು ನಿಧಾನಗತಿಯಲ್ಲಿ ಆಗುತ್ತಿರುವುದು ಆಗಾಗ ಚರ್ಚೆಯಾಗುತ್ತಿದೆ. ದಂಡ ವಿಧಿಸಿದರೂ ಇದು ನಿಯಂತ್ರಣಕ್ಕೆ ಬಂದಿಲ್ಲ. ಪ್ರಸ್ತುತ ಫೀಲ್ಡಿಂಗ್ ತಂಡ, ಓವರ್‌ಗಳನ್ನು ನಿಗದಿತ ಅವಧಿಯೊಳಗೆ ಮುಗಿಸದಿದ್ದಲ್ಲಿ ಅಂತಿಮ ಓವರ್‌ನಲ್ಲಿ ಒಬ್ಬ ಫೀಲ್ಡರ್ 30 ಗಜ ಪರಿಧಿಯೊಳಗೆ ಬರಬೇಕಾಗುತ್ತದೆ.

ವಿಶ್ವಕಪ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಪಂದ್ಯದಲ್ಲಿ ಏಂಜೆಲೊ ಮ್ಯಾಥ್ಯೂಸ್ ಅವರು ಎರಡು ನಿಮಿಷಗಳ ಒಳಗೆ ಕ್ರೀಸಿಗೆ ಬರದ ಕಾರಣ ಅವರಿಗೆ ‘ಟೈಮ್ಡ್ ಔಟ್’ ಎಂದು ಔಟ್ ನೀಡಲಾಗಿತ್ತು. ಇದು ಚರ್ಚೆಗೆ ಕಾರಣವಾಗಿತ್ತು.

ಟೆನಿಸ್ ಆಟದಲ್ಲೂ ಸ್ಟಾಪ್ ಕ್ಲಾಕ್‌ಗಳ ಬಳಕೆ ಮಾಡಲಾಗುತ್ತದೆ.

19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್‌ಗೆ ದಕ್ಷಿಣ ಆಫ್ರಿಕಾ ಆತಿಥ್ಯ

ಅಹಮದಾಬಾದ್ (ಪಿಟಿಐ): ಮುಂದಿನ ವರ್ಷ ಶ್ರೀಲಂಕಾದಲ್ಲಿ ನಿಗದಿಯಾಗಿದ್ದ 19 ವರ್ಷದೊಳಗಿನ ಪುರುಷರ ವಿಶ್ವ ಕಪ್ ಟೂರ್ನಿಯ ಆತಿಥ್ಯವನ್ನು ಐಸಿಸಿಯು ಮಂಗಳವಾರ ದಕ್ಷಿಣ ಆಫ್ರಿಕಕ್ಕೆ ವಹಿಸಿದೆ.

ಶ್ರೀಲಂಕಾ ಕ್ರಿಕೆಟ್‌ನ (ಎಸ್‌ಎಲ್‌ಸಿ) ಕಾರ್ಯಚಟುವಟಿಕೆಗಳಲ್ಲಿ ಸರ್ಕಾರದ ಹಸ್ತಕ್ಷೇಪದ ಕಾರಣಕ್ಕಾಗಿ ಅಲ್ಲಿನ ಕ್ರಿಕೆಟ್ ಮಂಡಳಿಯನ್ನು ಅಮಾನತು ಮಾಡಿದ 11 ದಿನಗಳ ನಂತರ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಈ ನಿರ್ಧಾರ ಕೈಗೊಂಡಿದೆ.

ಅಂತರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ ಆಡಳಿತ ಸಮಿತಿ ಇಲ್ಲಿ ಸಭೆ ಸೇರಿದ್ದು, ಎಸ್‌ಎಲ್‌ಸಿಯನ್ನು ಅಮಾನತು ಮಾಡಿದ ಕ್ರಮವನ್ನು ಖಚಿತಪಡಿಸಿದೆ. ವಯೋವರ್ಗ ಟೂರ್ನಿಯನ್ನು ಸ್ಥಳಾಂತರ ಮಾಡಿದ ಕ್ರಮಕ್ಕೂ ಸಮ್ಮತಿ ನೀಡಿದೆ.

‘ಶ್ರೀಲಂಕಾ ಕ್ರಿಕೆಟ್‌ಅನ್ನು ಅಮಾನತಿನಲ್ಲಿಟ್ಟಿರುವ ಕಾರಣ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯನ್ನು ದಕ್ಷಿಣ ಆಫ್ರಿಕಕ್ಕೆ ಸ್ಥಳಾಂತರಿಸಲಾಗಿದೆ. ಈ ನಿರ್ಧಾರಕ್ಕೆ ಐಸಿಸಿ ಆಡಳಿತ ಮಂಡಳಿಯಲ್ಲಿ ಅನುನೋದನೆ ನೀಡಲಾಗಿದೆ’ ಎಂದು ಮಂಡಳಿಯ ಸದಸ್ಯರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಹಾಕಿ: ತರಬೇತಿ ಶಿಬಿರಕ್ಕೆ 34 ಮಂದಿ ಆಯ್ಕೆ

ಬೆಂಗಳೂರು (ಪಿಟಿಐ): ಹಾಕಿ ಇಂಡಿಯಾವು (ಎಚ್‌ಐ) ನ.22 ರಿಂದ ಡಿ.10ರ ವರೆಗೆ ನಡೆಯಲಿರುವ ರಾಷ್ಟ್ರೀಯ ಮಹಿಳಾ ಹಾಕಿ ತಂಡದ ತರಬೇತಿ ಶಿಬಿರಕ್ಕೆ 34 ಸದಸ್ಯರನ್ನು ಆಯ್ಕೆ ಮಾಡಿದೆ.

ಡಿ.15 ರಿಂದ 22ರ ವರೆಗೆ ಸ್ಪೇನ್‌ನ ವಲೆನ್ಸಿಯಾದಲ್ಲಿ ನಡೆಯಲಿರುವ ಐದು ರಾಷ್ಟ್ರಗಳ ಹಾಕಿ ಟೂರ್ನಿಗೆ ಪೂರ್ವಭಾವಿಯಾಗಿ ಈ ಶಿಬಿರ ಆಯೋಜನೆಯಾಗಿದೆ.

ತರಬೇತಿ ಶಿಬಿರಕ್ಕೆ ಆಯ್ಕೆಯಾದವರು: **ಗೋಲ್‌ಕೀಪರ್ಸ್‌:** ಸವಿತಾ, ರಜನಿ ಎತಿಮರ್ಪು, ಬಿಚು ದೇವಿ, ಬನ್ಸರಿ ಸೋಲಂಕಿ **ಡಿಫೆಂಡರ್ಸ್‌:** ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಅಕ್ಷತಾ ದೇಖಲೆ, ಜ್ಯೋತಿ, ಮಹಿಮಾ ಚೌಧರಿ **ಮಿಡ್‌ಫೀಲ್ಡರ್ಸ್‌:** ನಿಶಾ, ಸಲೀಮಾ ಟೇಟೆ, ಸುಶೀಲಾ ಚಾನು, ಜ್ಯೋತಿ, ನವಜೋತ್ ಕೌರ್, ಮೋನಿಕಾ, ಮರಿಯಾನ ಕುಜೂರ್, ಸೋನಿಕಾ, ನೇಹಾ, ಬಲ್ಜೀತ್ ಕೌರ್, ರೀನಾ ಖೋಖರ್, ವೈಷ್ಣವಿ ವಿಠಲ್ ಫಾಲ್ಕೆ, ಅಜ್ಮಿನಾ ಕುಜೂರ್ **ಫಾರ್ವರ್ಡ್ಸ್‌:** ಲಾಲ್‌ರೆಮ್ಸಿಯಾಮಿ, ನವನೀತ್ ಕೌರ್, ವಂದನಾ ಕಟಾರಿಯಾ, ಶರ್ಮಿಳಾ ದೇವಿ, ದೀಪಿಕಾ, ಸಂಗೀತಾ ಕುಮಾರಿ, ಮುಮ್ತಾಜ್ ಖಾನ್, ಸುನೆಲಿತಾ ಟೊಪ್ಪೊ ಬ್ಯೂಟಿ ಡಂಗ್‌ಡಂಗ್

ಫುಟ್‌ಬಾಲ್: ವಿಶ್ವಕಪ್ ಎರಡನೇ ಸುತ್ತಿನ ಕ್ವಾಲಿಫೈರ್

ಕತಾರ್‌ಗೆ ಮಣಿದ ಭಾರತ ತಂಡ



ಸುನಿಲ್ ಚೆಟ್ರಿ ಚೆಂಡಿಗಾಗಿ ಪೈಪೋಟಿ ನಡೆಸಿದರು –ಪಿಟಿಐ ಚಿತ್ರ

ಭುವನೇಶ್ವರ (ಪಿಟಿಐ): ಭಾರತ ತಂಡ ಹೋರಾಟ ತೋರಿದರೂ, ಪ್ರಬಲ ಕತಾರ್ ತಂಡದ ಎದುರು 2026ರ ವಿಶ್ವಕಪ್ ಎರಡನೇ ಸುತ್ತಿನ ಕ್ವಾಲಿಫೈರ್‌ನ ತನ್ನ ಎರಡನೇ ಪಂದ್ಯದಲ್ಲಿ ಮಂಗಳವಾರ 0–3 ಗೋಲುಗಳಿಂದ ಸೋಲನುಭವಿಸಬೇಕಾಯಿತು.

ಕತಾರ್ ಆಟಗಾರರು ಗೋಲಿನ ಕೆಲವು ಅವಕಾಶಗಳಲ್ಲಿ ಎಡವದೇ ಹೋಗಿದ್ದಲ್ಲಿ ಆ ತಂಡದ ಗೆಲುವಿನ ಅಂತರ ಇನ್ನೂ ಹೆಚ್ಚಾಗುತಿತ್ತು. ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದ ಬಹುತೇಕ ಅವಧಿಯಲ್ಲಿ ಪ್ರವಾಸಿ ತಂಡ ನಿರೀಕ್ಷೆಯಂತೆ ಪ್ರಾಬಲ್ಯ ಸಾಧಿಸಿತು.

ಕತಾರ್ ಪರ ಮೌಸ್ತಾಫಾ ತಾರೆಕ್ ಮಶಾಲ್ (4ನೇ ನಿಮಿಷ), ಅಲ್ಮೊಯೆಝ್ ಅಲಿ (47ನೇ ನಿಮಿಷ) ಮತ್ತು ಯೂಸುಫ್ ಅಡುರಿಸಗ್ (86ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ನಾಲ್ಕು ವರ್ಷಗಳ ಹಿಂದೆ ದೋಹಾದಲ್ಲಿ ಇದೇ ತಂಡದ ವಿರುದ್ಧ 0–0 ಡ್ರಾ ಮಾಡಿಕೊಂಡಿದ್ದ ಭಾರತಕ್ಕೆ ಈ ಪಂದ್ಯದಲ್ಲಿ ಗೋಲು ಗಳಿಸುವ ಅವಕಾಶ ಸಿಕ್ಕಿದ್ದೇ ವಿರಳ. ಪೂರ್ವಾರ್ಧದ ಅಂತಿಮ ಕೆಲ ನಿಮಿಷಗಳಲ್ಲಿ ಅವಕಾಶಗಳು ಒದಗಿಬಂದರೂ ಅದನ್ನು ಗೋಲಾಗಿ ಪರಿವರ್ತಿಸಲು ವಿಫಲವಾಯಿತು.

ಇನ್ನೊಂದೆಡೆ, ಭಾರತ ತಂಡದ ರಕ್ಷಣಾ ವಿಭಾಗದ ಹುಳುಕು ಎದುರಾಳಿಗಳಿಗೆ ಬಲುಬೇಗ ಗೊತ್ತಾಯಿತು. ನಾಲ್ಕನೇ ನಿಮಿಷವೇ ಕತಾರ್ ಮುನ್ನಡೆ ಪಡೆದಿತ್ತು.

ಸ್ಟಿಮಾಚ್ ತರಬೇತಿಯ ಭಾರತ ತಂಡಕ್ಕೆ ‘ಎ’ ಗುಂಪಿನಿಂದ ಎರಡನೆ ಸ್ಥಾನ ಪಡೆಯುವ ತಂಡವಾಗಿ ಮೂರನೇ ಸುತ್ತಿಗೆ ಮುನ್ನಡೆಯುವ ಅವಕಾಶ ಜೀವಂತವಾಗಿದೆ. ಅದು ತನ್ನ ಮೊದಲ ಪಂದ್ಯದಲ್ಲಿ ಕುವೈತ್ ತಂಡವನ್ನು ಸೋಲಿಸಿತ್ತು.

ಭಾರತವು ತನ್ನ ಮುಂದಿನ ಪಂದ್ಯವನ್ನು ಅಫ್ಗಾನಿಸ್ತಾನ ವಿರುದ್ಧ ತಟಸ್ಥ ತಾಣವಾದ ದುಶಾಂಬೆ (ತಜಿಕಿಸ್ತಾನ) ಯಲ್ಲಿ ಮಾರ್ಚ್ 21ರಂದು ಆಡಲಿದೆ.

ಸಂಕ್ಷಿಪ್ತ ಸುದ್ದಿ

ಮಹಿಳಾ ಕ್ರಿಕೆಟ್: ಫೈನಲ್‌ಗೆ ಕರ್ನಾಟಕ

ಬೆಂಗಳೂರು: ಪಂಜಾಬ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ಕರ್ನಾಟಕ ತಂಡದವರು ಬಿಸಿಸಿಐ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಹಿಮಾಚಲ ಪ್ರದೇಶದ ಅಂತರ್‌ನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸೆಮಿಫೈನಲ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 112 ರನ್ ಗಳಿಸಿತು.

ಶ್ರೇಯಾ ಚವಾಣ್ (ಔಟಾಗದೆ 42) ಮತ್ತು ಎಚ್.ಭವಿಕಾ ರೆಡ್ಡಿ (ಔಟಾಗದೆ 31) ಅವರ ಅಜೇಯ ಆಟದ ನೆರವಿನಿಂದ ಕರ್ನಾಟಕ 16 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 113 ರನ್ ಗಳಿಸಿ ಗೆದ್ದಿತು.

ಇದೇ ಕ್ರೀಡಾಂಗಣದಲ್ಲಿ ನ.23 ರಂದು ನಡೆಯಲಿರುವ ಫೈನಲ್‌ನಲ್ಲಿ ಕರ್ನಾಟಕ ತಂಡ ಆಂಧ್ರ ಪ್ರದೇಶ ತಂಡವನ್ನು ಎದುರಿಸಲಿದೆ.

ರಾಜ್ಯ ತಂಡಕ್ಕೆ ನಿರಾಸೆ

ಬೆಂಗಳೂರು: ಕರ್ನಾಟಕ ತಂಡ, ಬಿಸಿಸಿಐ 23 ವರ್ಷದೊಳಗಿನವರ ಒನ್‌ಡೇ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಉತ್ತರಾಖಂಡ ಎದುರು 6 ವಿಕೆಟ್‌ಗಳಿಂದ ಸೋತಿತು.

ದೆಹಲಿಯ ಪಾಲಂನಲ್ಲಿರುವ ಏರ್‌ಫೋರ್ಸ್ ಕಾಂಪ್ಲೆಕ್ಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 230 ರನ್ ಗಳಿಸಿತು. ಆರ್.ಸ್ಮರಣ್ (40) ಮತ್ತು ಯಶೋವರ್ಧನ್ (57) ಗಮನ ಸೆಳೆದರು.

ಉತ್ತರಾಖಂಡ ತಂಡ 47.5 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 232 ರನ್ ಗಳಿಸಿ ಫೈನಲ್ ಪ್ರವೇಶಿಸಿತು. ಅವನೀಶ್ ಸುಧಾ (121) ಅವರು ಶತಕ ಗಳಿಸಿ ತಂಡದ ಗೆಲುವಿಗೆ ನೆರವಾದರು.

ಕಬಡ್ಡಿ: ವಿಜಯಪುರ, ಚಿಕ್ಕೋಡಿ ಪ್ರಥಮ

ಕೊಲ್ಹಾರ (ವಿಜಯಪುರ ಜಿಲ್ಲೆ): ವಿಜಯಪುರ ಜಿಲ್ಲೆ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ತಂಡಗಳು ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದವು.